ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/–
ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA


ಸಂಪುಟ–05 • ಸಂಚಿಕೆ–05 • ಅಕ್ಟೋಬರ್ 2023



ಗಾಂಧಿ ಭವನದ ಜಾಲತಾಣ

https://gandhibhavan.in





Gandhi Bhavan Archive

https://archive.org/details/GandhiBhavan

#SERVANTSOFKNOWLEDGE

SCANNING IS THE NEW SPINNING

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA

(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು

ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :

Nadoja Dr Wooday P Krishna

ಸಂಪಾದಕರು :

ಎನ್. ಆರ್. ವಿಶುಕುಮಾರ್

Editor :

N R Vishukumar

ಪ್ರಕಾಶಕರು :

ಕಾರ್ಯದರ್ಶಿ,

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560 001

Published by :

Secretary

Karnataka Gandhi Smaraka Nidhi

Gandhi Bhavana, Kumara Park East

Bangalore - 560 001

080 22261967 / 9738605799

gandhibhavanabengaluru@gmail.com

Printed at :

Printastic

272, 2nd Main Road, 6th Cross,

Lavakushanagar, Laggere Bangalore-58

Ph : +91 9886747417

E-mail : printastic.21@gmail.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು

ಬಾಪು ಪ್ರಪಂಚದಲ್ಲಿನ ಚಿತ್ರಗಳು ಸಾಂದರ್ಭಿಕವಾಗಿರುತ್ತದೆ

Design : **Ujwal Creations,** Bangalore

ರೂ. 28/–   **BAPU PRAPANCHA**

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ   ಸಂಪುಟ–05 • ಸಂಚಿಕೆ–05 • ಅಕ್ಟೋಬರ್ 2023

05 ಗಾಂಧಿ ವಾಟಿಕಾ : ಜೈಪುರದಲ್ಲಿನ ಅಪರೂಪದ ಗಾಂಧಿ ಮ್ಯೂಸಿಯಂ
-ಎನ್. ಆರ್. ವಿಶುಕುಮಾರ್

10 ಜಿಸಿಪ್ರಳಯದ ಹೊಸ್ತಿಲಲ್ಲಿ ಗಾಂಧಿ ನೆರಳು
-ನಾಗೇಶ್ ಹೆಗಡೆ

14 ಸತ್ತಿದ್ದಾರೆಂದುಕೊಂಡವರು ಎದುರು ಬದುರು ಆದಾಗ !
-ದೇವನೂರ ಮಹಾದೇವ

18 ಗಾಂಧಿ ಚಿಂತನೆ -4
-ಜಗದೀಶ್ ಕೊಪ್ಪ

19 ಗಾಂಧಿ ಮತ್ತು ಕರ್ನಾಟಕ (ಭಾಗ-5)


23 ಗಾಂಧಿ ಪ್ರಭಾವ ಸೀಮಾತೀತ
-ಸಿ. ಯು. ಬೆಳ್ಳಕ್ಕಿ

25 ಮಕ್ಕಳಿಗಾಗಿ ಗಾಂಧಿ ಕತೆ

26 ಪುಸ್ತಕ ಪರಿಚಯ : ಕೊನೆಯ ಹೀರೋಗಳು
-ಪಿ. ಸಾಯಿನಾಥ್

28 ಕಾರ್ಲ್ ಮಲ್ಮಾಡ್ ಭಾಷಣ

31 ಚಿತ್ರಾವಳಿ



"ಗುಂಪಿನಲ್ಲಿ ನಿಲ್ಲುವುದು
ಬಹಳ ಸುಲಭ. ಆದರೆ
ಏಕಾಂಗಿಯಾಗಿ ನಿಲ್ಲಲು
ಬಹಳ ಧೈರ್ಯ ಬೇಕು."

~ ಮಹಾತ್ಮ ಗಾಂಧಿ

ಚಿತ್ರ : ಬಿ.ಜಿ. ಗುಜ್ಜಾರಪ್ಪ

ಪತ್ರಗಳು

ಮಾನ್ಯರೇ,

ಕಾದು ಕುಳಿತಿರುವ ನನ್ನಂಥವರಿಗೆ ತಪ್ಪದೆ ಬಾಪು ಪ್ರಪಂಚ ಕಳುಹಿಸಿ ಕೊಡುತ್ತಿರುವ ತಮಗೆ ನನ್ನ ಅಭಿನಂದನೆಗಳು .ನಮ್ಮ ಬಾಪುವಿನಿಂದ ಪ್ರಭಾವಿತರಾದವರು ಒಬ್ಬರೇ, ಇಬ್ಬರೇ .. ವಿಜ್ಞಾನಿ ಐನ್ ಸ್ಟೀನ್, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಮಡಿಬಾ ನೆಲ್ಸನ್ ಮಂಡೇಲಾ ಹಾಗೂ ಅಗಣಿತ ಭಾರತೀಯರು.

ಸೆಪ್ಟೆಂಬರ್ ಸಂಚಿಕೆಯ, ಭಾರತದ ಧ್ವಜವನ್ನು ಮೊದಲು ಹಾರಿಸಿದ ಮಹಿಳೆ ಮೇಡಂ ಭಿಕಾಜಿ ರುಸ್ತುಮ್ ಕಾಮ್, ಆಚಾರ್ಯ ವಿನೋಬಾ ಭಾವೆಯವರ ವ್ಯಕ್ತಿ ಚಿತ್ರಣ ,ಮಹಾತ್ಮ ಗಾಂಧಿಯವರ ಮಹತ್ವಗಳು ಲೇಖನಗಳನ್ನು ಓದುತ್ತಾ ಹೋದರೆ ಸಮಯ ಸರಿಯುವುದೇ ಅರಿವಾಗುವುದಿಲ್ಲ . ಬಾಪು ಪ್ರಪಂಚ ಪತ್ರಿಕೆಗೆ ಧನ್ಯವಾದಗಳು.

– ವನಜಾ ರಾಜನ್, ಬೆಂಗಳೂರು

* * *

ಮಾನ್ಯರೇ,

ಯುವ ಸಮುದಾಯಕ್ಕೆ ಗಾಂಧೀಜಿಯನ್ನು ಪರಿಚಯಿಸುವ ಪ್ರಯತ್ನವನ್ನು ಇನ್ನೂ ಹೆಚ್ಚು ಮಾಡಿ . ಗಾಂಧಿ ಭವನದ ಚಟುವಟಿಕೆಗಳು ಬೆಂಗಳೂರು ನಗರದಿಂದ ಆಚೆಗೂ ಜಿಲ್ಲಾ ಮಟ್ಟದಲ್ಲಿ ತಲುಪುವಂತೆ ಕಾರ್ಯಕ್ರಮ ಹಮ್ಮಿ ಕೊಳ್ಳಿ . ಸರಳ ಮತ್ತು ಶಾಂತಿಯ ಜೀವನದ ಮಹತ್ವವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಕೆಲಸ ಆಗಬೇಕು .

– ಶಿವಣ್ಣನವರ್, ಹಾವೇರಿ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
gandhi.sanchaya.net
ಜಾಲತಾಣದಲ್ಲಿ ವೀಕ್ಷಿಸಿ.



ಪತ್ರಿಕೆಗೆ ಚಂದಾದಾರರಾಗಲು ಆಸಕ್ತಿ ಇರುವವರು ವಾರ್ಷಿಕ 250 ರೂಗಳನ್ನು ಪಾವತಿಸಿ ವಿಳಾಸ ಕಳುಹಿಸಿದರೆ ಅವರಿಗೆ ಅಂಚೆ ಮೂಲಕ ಪತ್ರಿಕೆಯನ್ನು ಕಳುಹಿಸಲಾಗುವುದು.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

2535125000778@cnrb

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.






ಗಾಂಧಿ ವಾಟಿಕಾ

ಜೈಪುರದಲ್ಲಿನ ಅಪರೂಪದ ಗಾಂಧಿ ಮ್ಯೂಸಿಯಂ

–ಎನ್ ಆರ್ ವಿಶುಕುಮಾರ್




ರಾಜಸ್ತಾನ – ಉತ್ತರ ಭಾರತದ ವಿಶಿಷ್ಟ ಪ್ರವಾಸಿ ರಾಜ್ಯ. ಅಲ್ಲಿನ ಜೈಪುರ, ಜೈಸಲ್ಮೇರ್, ಉದಯಪುರ, ಜೋದ್ ಪುರದ ಅರಮನೆಗಳು ದೇಶ ವಿದೇಶಗಳ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಇಲ್ಲಿನ ಮರಳುಗಾಡಿನ ಪ್ರವಾಸೋದ್ಯಮ ವಿದೇಶಿಯರಿಗೆ ಅಪ್ಯಾಯಮಾನ. ಪುಷ್ಕರದಲ್ಲಿನ 'ಒಂಟೆ ಮೇಳ 'ಅಪರೂಪದ ಜಾತ್ರೆ. ಅಜ್ಮೀರ್ ನಲ್ಲಿರುವ ಸೂಫಿ ಪರಂಪರೆಯ 'ದರ್ಗಾ' ಹಿಂದೂ ಮುಸ್ಲಿಂ ಇಬ್ಬರಿಗೂ ಧಾರ್ಮಿಕ ಕ್ಷೇತ್ರ. ರಾಜಸ್ತಾನದ ಜಾನಪದ ನೃತ್ಯ ಸಂಗೀತಗಳು ಲೋಕ ಪ್ರಸಿದ್ಧ. ರಾಜಾಸ್ತಾನಿಗಳು ಧರಿಸುವ ಬಣ್ಣ ಬಣ್ಣದ ಉಡುಗೆ ತೊಡುಗೆಗಳು ರಾಜಸ್ತಾನಕ್ಕೆ ರಂಗು ರಂಗಿನ ಮೆರುಗು ನೀಡಿವೆ. ಮೊಘಲರು ಮತ್ತು ಹಿಂದೂ ರಜಪೂತ ಸಾಮ್ರಾಜ್ಯಗಳ ನಡುವೆ ಸೌಹಾರ್ಧ ಸಂಬಂಧ ಬೆಸೆದುಕೊಂಡಿರುವ ರಾಜಸ್ತಾನ ಭಾರತದ ವಿಶಿಷ್ಟ ರಾಜ್ಯ.

ಜೈಪುರ – ರಾಜಸ್ತಾನದ ರಾಜಧಾನಿ. ಇದು 'ಗುಲಾಬಿ ನಗರ' ಎಂದೇ ಹೆಸರಾಗಿದೆ . ಅಲ್ಲಿನ ಪ್ರಮುಖ ಕಟ್ಟಡಗಳು ಗುಲಾಬಿ ಬಣ್ಣ ಬಳಿದು ಕೊಂಡಿರುವುದೇ ಜೈಪುರಕ್ಕೆ ಈ ಹೆಸರು ಬರಲು ಕಾರಣ. ಈ ಗುಲಾಬಿ ನಗರಕ್ಕೆ ಈಗ ಇನ್ನೊಂದು ಗರಿ ಸೇರಿಕೊಂಡಿದೆ. ಇದೇ ; ಮಹಾತ್ಮ ಗಾಂಧೀಜಿ ವಿಷಯ ಆಧಾರಿತ **'ಗಾಂಧಿ ವಾಟಿಕಾ'** ಹೆಸರಿನ ಅಪರೂಪದ ಮ್ಯೂಸಿಯಂ. ಸೆಪ್ಟೆಂಬರ 23 ರಂದು ಜೈಪುರದಲ್ಲಿ ಉದ್ಘಾಟನೆಯಾಗಿದೆ.



ಭಾರತ ಸ್ವಾತಂತ್ರ್ಯ ಹೋರಾಟದ ವಿವಿಧ ಘಟ್ಟಗಳು, ಮೋಹನದಾಸ ಕರಮಚಂದ್ ಗಾಂಧಿಯ ಬಾಲ್ಯ, ಶಿಕ್ಷಣ , ಮತ್ತು ದಕ್ಷಿಣ ಆಫ್ರಿಕಾದಲ್ಲಿ ಅವರ ಸತ್ಯಾಗ್ರಹ, ಹೋರಾಟ, ಭಾರತಕ್ಕೆ ಗಾಂಧಿಯವರ ಆಗಮನ, ಅವರ ನಾಯಕತ್ವದಲ್ಲಿ ನಡೆದ ಅಹಿಂಸಾತ್ಮಕ ಭಾರತ ಸ್ವಾತಂತ್ರ್ಯ ಹೋರಾಟ ಇತ್ಯಾದಿಗಳ ಬಗ್ಗೆ ಬೆಳಕು ಚೆಲ್ಲುವ ಮಾಹಿತಿಗಳು **'ಗಾಂಧಿ ವಾಟಿಕಾ'** ಮ್ಯೂಸಿಯಂನಲ್ಲಿವೆ .

ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಅವರ ಆಸಕ್ತಿಯಿಂದ ರೂಪುಗೊಂಡಿರುವ ' ಗಾಂಧಿ ವಾಟಿಕಾ ' ಮ್ಯೂಸಿಯಂ ಈಗ ಜೈಪುರದ ಒಂದು ಹೊಸ ಪ್ರವಾಸಿ ತಾಣವಾಗಿದೆ. 2023 ರ ಸೆಪ್ಟೆಂಬರ್ 21 ರಿಂದ 23 ರವರೆಗೆ ನಡೆದ ' ಗಾಂಧಿ ವಾಟಿಕಾ' ಲೋಕಾರ್ಪಣೆ ಸಮಾರಂಭಕ್ಕೆ ಇನ್ನೂರಕ್ಕೂ ಹೆಚ್ಚು ಗಾಂಧಿ ಅನುಯಾಯಿಗಳನ್ನು ರಾಜಸ್ತಾನ ಸರ್ಕಾರ ಆಹ್ವಾನಿಸಿತ್ತು .ಭಾರತದ ಎಲ್ಲೆಡೆಯಿಂದ ಬಂದಿದ್ದ ಗಾಂಧಿವಾದಿಗಳು ಈ ಅಪರೂಪದ ಗಾಂಧಿ ಮ್ಯೂಸಿಯಂ ನೋಡಿ ಸಂತೋಷ ಪಟ್ಟರು. ಕೇಂದ್ರೀಯ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ರಾಮಚಂದ್ರ ರಾಹಿ , ಕಾರ್ಯದರ್ಶಿ ಸಂಜಯ್ ಸಿಂಗ್ , ಗಾಂಧೀಜಿಯವರ ಮರಿ ಮಗ ತುಷಾರ್ ಗಾಂಧಿ , ದೆಹಲಿಯ ಗಾಂಧಿ ರಾಷ್ಟ್ರೀಯ ಮ್ಯೂಸಿಯಂ ನ ನಿರ್ದೇಶಕ ಅಣ್ಣಾಮಲೈ




ಸೇರಿದಂತೆ ಇನ್ನೂ ಅನೇಕ ಗಾಂಧಿವಾದಿಗಳು ಸಮಾರಂಭದಲ್ಲಿ ಭಾಗಿಯಾಗಿ ವಿಚಾರಗಳನ್ನು ಹಂಚಿಕೊಂಡರು.

' ಭಾರತ್ ಜೋಡೋ ' ಯಾತ್ರೆಯ ಮೂಲಕ ಈಗ ಭಾರತದಾದ್ಯಂತ ಜನಪ್ರಿಯವಾಗಿರುವ ಲೋಕಸಭಾ ಸದಸ್ಯ ರಾಹುಲ್ ಗಾಂಧಿ , ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಇವರೆಲ್ಲರೂ ಕೂಡಿ ಈ ಅಪರೂಪದ ಮ್ಯೂಸಿಯಂ ಅನ್ನು ಉದ್ಘಾಟಿಸಿದರು. ಗಾಂಧಿ ವಿಚಾರಗಳ ಬಗ್ಗೆ ಒಲವು ಇಟ್ಟುಕೊಂಡಿರುವ ಅಶೋಕ್ ಗೆಹಲೋಟ್ ಅವರ ಆಸಕ್ತಿಯಿಂದಾಗಿ ರೂಪುಗೊಂಡಿರುವ ಈ ಮ್ಯೂಸಿಯಂ ಮುಂಬರುವ ವರ್ಷಗಳಲ್ಲಿ ರಾಷ್ಟ್ರ ಖ್ಯಾತಿ ಗಳಿಸಲಿದೆ .ಅಶೋಕ್ ಗೆಹಲೋಟ್ ಅವರ ಗಾಂಧಿ ಮ್ಯೂಸಿಯಂ ಆಸೆಯನ್ನು ಸಾಕಾರಗೊಳಿಸಿದ ಕೀರ್ತಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಮಾನಸ ಪುತ್ರ ಎಂದೇ ಹೆಸರಾಗಿರುವ ಕುಮಾರ್ ಪ್ರಶಾಂತ್ ಅವರಿಗೆ ಸಲ್ಲುತ್ತದೆ.

ಜೈಪುರ ನಗರದ ಪ್ರತಿಷ್ಠಿತ ಕೇಂದ್ರೀಯ ಪಾರ್ಕ್ ನಲ್ಲಿ ಸುಮಾರು ಮೂರು ಎಕರೆ ವಿಸ್ತೀರ್ಣದಲ್ಲಿ ' ಗಾಂಧಿ ವಾಟಿಕಾ ' ಮ್ಯೂಸಿಯಂ ನಿರ್ಮಾಣಗೊಂಡಿದೆ .

ಕುಮಾರ ಪ್ರಶಾಂತ್



ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರು ಎಪ್ಪತ್ತರ ದಶಕದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಅಂದಿನ ಕಾಂಗ್ರೆಸ್ ಸರಕಾರದ ವಿರುದ್ಧ ಆರಂಭಿಸಿದ 'ನವ ನಿರ್ಮಾಣ ' ಚಳವಳಿಯನ್ನು ಆರಂಭಿಸುತ್ತಾರೆ. ಇದು ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರ ಸರ್ವಾಧಿಕಾರಿ ಧೋರಣೆ ಮತ್ತು ಭ್ರಷ್ಟಾಚಾರದ ವಿರುದ್ಧ ಯುವ ಸಮುದಾಯವನ್ನು ಸಂಘಟಿಸಿ ರೂಪಿಸಿದ ಚಳವಳಿಯಾಗಿರುತ್ತದೆ. ಈ ಚಳವಳಿಯಲ್ಲಿ ವಿದ್ಯಾರ್ಥಿ ಸಮೂಹದ ಪ್ರಖರ ನಾಯಕರಾಗಿ ಮೂಡಿದ್ದ ಕುಮಾರ ಪ್ರಶಾಂತ್ ಜಯಪ್ರಕಾಶ್ ಅವರ ಮಾನಸ ಪುತ್ರ ಎಂದೇ ಆಗ ಖ್ಯಾತರಾಗಿರುತ್ತಾರೆ.

ಈಗ ಕುಮಾರ ಪ್ರಶಾಂತ್ ಅವರಿಗೆ 75 ರ ಇಳಿ ವಯಸ್ಸು. ಆದರೂ ಸರ್ವಾಧಿಕಾರ ಮತ್ತು ಭ್ರಷ್ಟಾಚಾರದ ವಿರುದ್ಧ ಅವರ ಅಸಹನೆ ಹಾಗೆಯೇ ಉಳಿದಿದೆ. ಜನಮಾನಸದಿಂದ ಗಾಂಧೀಜಿ ಕಣ್ಮರೆಯಾಗುತ್ತಿರುವ ವಿದ್ಯಮಾನಗಳ ಬಗ್ಗೆ ಅವರಿಗೆ ಆತಂಕವಿದೆ. ಇದಕ್ಕಾಗಿ ಅವರು ಜೇಪಿಯವರ ನವನಿರ್ಮಾಣ ಚಳವಳಿಯಲ್ಲಿ ರೂಪುಗೊಂಡಿದ್ದ ನಾಯಕರ ಸಂಪರ್ಕ ಮತ್ತು ಪ್ರಭಾವವನ್ನು ಬಳಸಿ ಗಾಂಧೀಜಿ ಮತ್ತು ಅವರ ವಿಚಾರಧಾರೆಯನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಲು ಗಾಂಧಿ ಶಾಂತಿ ಪ್ರತಿಷ್ಠಾನ ಸಂಘಟನೆಯ ಮೂಲಕ ಪ್ರಯತ್ನಿಸುತ್ತಿದ್ದಾರೆ.

ಇಂಥ ಪ್ರಯತ್ನದಲ್ಲಿ ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಅವರು ಕುಮಾರ ಪ್ರಶಾಂತ್ ನೆರವಿಗೆ ಬಂದಿದ್ದಾರೆ. ರಾಜಸ್ತಾನ ಸರ್ಕಾರ 85 ಕೋಟಿ ರೂಗಳ ವೆಚ್ಚದಲ್ಲಿ ' ಗಾಂಧಿ ವಾಟಿಕಾ ' ಹೆಸರಿನ ಗಾಂಧಿ ಮ್ಯೂಸಿಯಂನ್ನು ಜೈಪುರದಲ್ಲಿ ನಿರ್ಮಿಸಿ ಮುಂದಿನ ಪೀಳಿಗೆಗೆ ಗಾಂಧೀಜಿಯವರ ನೆನಪನ್ನು ಉಳಿಸುವ ಮಹತ್ವದ ಕಾರ್ಯ ಮಾಡಿದೆ.

'ಗಾಂಧಿ ವಾಟಿಕಾ' ಮ್ಯೂಸಿಯಂ ನ ಪರಿಕಲ್ಪನೆ ಮತ್ತು ನಿರ್ಮಾಣದ ಹೊಣೆಗಾರಿಕೆಯನ್ನು ಕುಮಾರ ಪ್ರಶಾಂತ್ ಅವರು ನಿರ್ವಹಿಸಿದ್ದಾರೆ. ಈ ಮ್ಯೂಸಿಯಂ ಅನ್ನು ಕೇವಲ ಗಾಂಧೀಜಿಯವರಿಗೆ ಸಂಬಂದಿಸಿದ ವಸ್ತುಗಳು , ಉಡುಗೆ ತೊಡುಗೆಗಳು ಮತ್ತು ಅವರ ಪತ್ರಗಳು, ಲೇಖನಗಳನ್ನು ಸಂಗ್ರಹಿಸಿ ಒಂದು ಮಾಮೂಲಿ ಮ್ಯೂಸಿಯಂ ಆಗಿ ನಿರ್ಮಿಸಿಲ್ಲ. ಅದರ ಬದಲಿಗೆ ವಿಭಿನ್ನವಾಗಿ ಭಾರತ ಸ್ವಾತಂತ್ರ್ಯ ಹೋರಾಟದ ಕಥಾನಕವನ್ನು ಈ ಮ್ಯೂಸಿಯಂ ನಲ್ಲಿ ಪ್ರದರ್ಶಿಸುವ ಪ್ರಯತ್ನ ಮಾಡಿದ್ದಾರೆ.


ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಭಾರತದ ಆಡಳಿತ ಪರಿಸ್ಥಿತಿ, ವ್ಯಾಪಾರದ ನೆಪದಲ್ಲಿ ಭಾರತಕ್ಕೆ ಬ್ರಿಟಿಷರ ಆಗಮನ, ತಮ್ಮ ಕುಟಿಲ ಉಪಾಯಗಳ ಮೂಲಕ ಅಂದಿನ ಸಾಮ್ರಾಜ್ಯಗಳ ನಡುವೆ ಒಡಕು ಮೂಡಿಸಿ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ವಿಧಾನ, ಗಾಂಧೀಜಿಯವರ ದಕ್ಷಿಣ ಆಫ್ರಿಕಾ ಹೋರಾಟ, ಭಾರತಕ್ಕೆ ಆಗಮಿಸಿ ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ನೀಡಿದ್ದು, ಜನಸಾಮಾನ್ಯರನ್ನು ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟಕ್ಕೆ ಸಜ್ಜುಗೊಳಿಸಿದ್ದು, ಅಂತಿಮವಾಗಿ ಅಹಿಂಸಾ ವಿಧಾನದ ಮೂಲಕವಾಗಿಯೇ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಇಡೀ ವಿಶ್ವದ ಗಮನ ಸೆಳೆದ ವಿದ್ಯಮಾನಗಳನ್ನು 'ಗಾಂಧಿ ವಾಟಿಕಾ' ಮ್ಯೂಸಿಯಂನಲ್ಲಿ ಒಡಮೂಡಿಸಿದ್ದಾರೆ.

ಇದರ ಪರಿಕಲ್ಪನೆ , ನಿರ್ಮಾಣ ಮತ್ತು ಮಾರ್ಗದರ್ಶನಕ್ಕಾಗಿ ಹನ್ನೊಂದು ಮಂದಿ ಸದಸ್ಯರ ಸಮಿತಿ ರಚಿಸಲಾಗಿತ್ತು. ಇದರಲ್ಲಿ ಗಾಂಧಿ ವಾದಿಗಳು , ಮ್ಯೂಸಿಯಂ ನಿರ್ಮಾಣ ತಜ್ಞರು , ಪರಿಣತ ವಾಸ್ತು ಶಿಲ್ಪಿಗಳು , ಎಂಜಿನಿಯರುಗಳು , ಧ್ವನಿ ಬೆಳಕು ತಂತ್ರಜ್ಞರು , ಗಾಂಧಿ ಸಾಹಿತ್ಯ ಲೇಖಕರು, ಹಿರಿಯ ಅಧಿಕಾರಿಗಳಿದ್ದರು.

ಈ ಮ್ಯೂಸಿಯಂ ಮೂರು ಮಹಡಿಗಳಲ್ಲಿದೆ . ಈ ಮ್ಯೂಸಿಯಂ ನ ಕಟ್ಟಡಗಳು ಸೆಂಟ್ರಲ್ ಪಾರ್ಕಿನಲ್ಲಿರುವ ಮರಗಳಿಗಿಂತ ಕಡಿಮೆ ಎತ್ತರದಲ್ಲಿದ್ದು ಸಹಜ ಪರಿಸರಕ್ಕೆ ಗೌರವ ಸಲ್ಲಿಸುವಂತೆ ನಿರ್ಮಾಣವಾಗಿವೆ. ಪಾರ್ಕ್ ನಲ್ಲಿರುವ ಮರಗಳ ಜೊತೆಗೆ ಹೊಸದಾಗಿ ಸುಮಾರು ಹದಿನಾಲ್ಕು ಸಾವಿರ ಗಿಡ ಮರಗಳನ್ನು ನೆಡಲಾಗಿದೆ. ಸೆಂಟ್ರಲ್ ಪಾರ್ಕ್ ಪರಿಸರದ ಜೊತೆ ಒಂದಾಗಿ ಬೆರೆತು ಹೋಗುವಂತೆ ಈ ಮ್ಯೂಸಿಯಂನ್ನು ನಿರ್ಮಿಸಲಾಗಿದೆ.

ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಅವರು ತಮ್ಮ 2021 –22 ರ ಆಯವ್ಯಯ ಭಾಷಣದಲ್ಲಿ ' ಗಾಂಧಿ ವಾಟಿಕಾ ' ಮ್ಯೂಸಿಯಂ ನಿರ್ಮಿಸುವುದಾಗಿ ಘೋಷಣೆ ಮಾಡಿದ್ದರು. ಅದರಂತೆ ಕೇವಲ ಒಂದೂವರೆ ವರ್ಷದಲ್ಲಿ ಈ ಮ್ಯೂಸಿಯಂನ್ನು ಸರ್ಕಾರ ಕಾಲ ಬದ್ಧತೆಯಿಂದ ನಿರ್ಮಿಸಿದೆ. ಅಂದಾಜು 85 ಕೋಟಿ ರೂಗಳ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಮ್ಯೂಸಿಯಂನಲ್ಲಿ ಮೂರು ಮಹಡಿಗಳಿವೆ. ಒಟ್ಟು ಒಂದು ಲಕ್ಷ ಚದರ ಅಡಿಗಳಷ್ಟು ವಿಸ್ತೀರ್ಣದಲ್ಲಿ ಮ್ಯೂಸಿಯಂನ ಕಟ್ಟಡಗಳಿವೆ.

ತಳ ಮಹಡಿ : ಈ ಮಹಡಿಯಲ್ಲಿ ಭಾರತವು ಬ್ರಿಟಿಷರ ದಾಸ್ಯ ಸಂಕೋಲೆಗೆ ಸಿಲುಕಿಕೊಂಡ ಕರಾಳ ದಿನಗಳ ನೆನಪಿನ ಚಿತ್ರಗಳಿವೆ. ಈ ದಾಸ್ಯದ ವಿರುದ್ಧ ಆದಿವಾಸಿಗಳು ನಡೆಸಿದ ಆರಂಭಿಕ ಹೋರಾಟಗಳು ಭಾರತ ಸ್ವಾತಂತ್ರ್ಯದ ಹೋರಾಟಕ್ಕೆ ಸ್ಫೂರ್ತಿ ನೀಡಿ 1857 ರಲ್ಲಿ ಸಿಪಾಯಿ ದಂಗೆಗೆ ಕಾರಣವಾದ ಪ್ರಮುಖ ಘಟನೆಯ ಚಿತ್ರಣ ಇಲ್ಲಿದೆ. ಗಾಂಧೀಜಿಯ ಜನನ , ಬಾಲ್ಯ , ಶಿಕ್ಷಣ , ಮತ್ತು ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ನೀತಿಯ ವಿರುದ್ಧ ಗಾಂಧಿ



ಆರಂಭಿಸಿದ ಹೋರಾಟ , ಅವರಲ್ಲಿ ಸತ್ಯಾಗ್ರಹ ಪರಿಕಲ್ಪನೆ ಮೂಡಿದ ಪ್ರಸಂಗ ಇವುಗಳ ನೋಟ ಇಲ್ಲಿದೆ.

ನೆಲಮಹಡಿ : ಭಾರತಕ್ಕೆ ಗಾಂಧೀಜಿಯವರ ಆಗಮನ , ಭಾರತ ದೇಶಾದ್ಯಂತ ಪ್ರವಾಸ , ಕಾಂಗ್ರೆಸ್ ಪಕ್ಷದ ಸಂಘಟನೆ , ಅವರ ರಾಷ್ಟ್ರೀಯ ಪರಿಕಲ್ಪನೆ , ಜನರ ಜೊತೆ ಸಂಭಾಷಣೆ , ಅಹಿಂಸಾ ಹೋರಾಟಕ್ಕೆ ರಾಷ್ಟ್ರವನ್ನು ಸಜ್ಜುಗೊಳಿಸಿದ್ದು , ಪತ್ರಿಕಾ ಲೇಖನಗಳ ಮೂಲಕ ಜನ ಜಾಗೃತಿ , ಕೋಮು ಸಾಮರಸ್ಯ , ಹಾಗೂ ಅಂತಿಮವಾಗಿ ಅವರ ಹತ್ಯೆಯಾದ ಘಟನೆಗಳ ನಿರೂಪಣೆ ಇಲ್ಲಿದೆ.

ಮೊದಲ ಮಹಡಿ : ಗಾಂಧೀಜಿಯವರ ರಾಜಸ್ತಾನ ಭೇಟಿಯ ಪ್ರಸಂಗಗಳು , ವಿಶ್ವದಲ್ಲಿ ಗಾಂಧೀಜಿ ಪ್ರಭಾವ ಬೆಳಗಿದ ರೀತಿ , ಗಾಂಧಿ ಬಗ್ಗೆ ವಿಶ್ವಖ್ಯಾತಿಯ ನಾಯಕರ ಅಭಿಪ್ರಾಯ , ಗಾಂಧಿ ಕುರಿತ ಸಿನಿಮಾ, ವರ್ಣಚಿತ್ರಗಳು , ಭಾರತದ ಸ್ವಾತಂತ್ರ್ಯ ಹೋರಾಟಗಾರರು ಇತ್ಯಾದಿ ಚಿತ್ರಣಗಳಿವೆ.

ವಿಷಯಕ್ಕೆ ಅನುಗುಣವಾದ ಸಂಗ್ರಹ ಚಿತ್ರಗಳು , ಮೂಲ ಚಿತ್ರಗಳು ಲಭ್ಯವಿಲ್ಲದ ಸಂದರ್ಭ , ಸನ್ನಿವೇಶಗಳನ್ನು ಸೃಷ್ಟಿಸುವ ರೇಖಾ ಚಿತ್ರಗಳು , ಗಾಢ ಪರಿಣಾಮ ಬೀರುವ ಭಿತ್ತಿ ಚಿತ್ರಗಳು (ಮ್ಯೂರಲ್) ಗಾಂಧಿ ಕಾಲದ ಚಿತ್ರೀಕೃತ ದೃಶ್ಯಗಳು , ಗಾಂಧಿಯವರೇ ನಿರೂಪಣೆ ಮಾಡುತ್ತಿರುವಂತೆ ಭಾಸವಾಗುವ ಹಾಲೊಗ್ರಾಮ್ ತಂತ್ರಜ್ಞಾನದ ದೃಶ್ಯ , ಹೀಗೆ ವಿವಿಧ ಮಾದರಿಯ ತಂತ್ರಜ್ಞಾನ ಬಳಸಿ ಮ್ಯೂಸಿಯಂನ್ನು ಏಕತಾನತೆಯಿಂದ ದೂರ ನಿಲ್ಲಿಸಲಾಗಿದೆ. ಈ ಮ್ಯೂಸಿಯಂನ್ನು ವಿವರವಾಗಿ ನೋಡಲು ಕನಿಷ್ಠ ನಾಲ್ಕು ತಾಸು ಬೇಕೇ ಬೇಕು. ಬೇಗ ಬೇಗ ನೋಡುತ್ತೇವೆ ಎಂದರೂ ಎರಡು ತಾಸು ಬೇಕು.

ಇಡೀ ಮ್ಯೂಸಿಯಂ ಹವಾನಿಯಂತ್ರಿತವಾಗಿದೆ. ಪ್ರದರ್ಶಿತ ಚಿತ್ರಗಳು ಮತ್ತು ವಸ್ತುಗಳು ಚೆನ್ನಾಗಿ ಕಾಣುವಂತೆ ಹಿನ್ನೆಲೆಯ ಗೋಡೆಗಳಿಗೆ ಕಪ್ಪು ಮತ್ತು ಇತರೆ ಗಾಢ ಬಣ್ಣಗಳನ್ನು ಹಚ್ಚಲಾಗಿದೆ. ಇಲ್ಲಿ ಪ್ರದರ್ಶಿಸಿರುವ ಚಿತ್ರಗಳು ಎದ್ದು ಕಾಣುವಂತೆ ಸೂಕ್ತ ವಿದ್ಯುತ್ ದೀಪಗಳ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಸಂದರ್ಭ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಕಲಾವಿದರಿಂದ ರೇಖಾ ಮತ್ತು ವರ್ಣ ಚಿತ್ರಗಳನ್ನು ರಚಿಸಿ ನಿರೂಪಣೆಗೆ ಬಳಸಲಾಗಿದೆ. ನಿರೂಪಣೆಯ ಏಕತಾನತೆಯನ್ನು ನಿವಾರಿಸಲು ಕೆಲವೆಡೆ ಗೋಡೆಯಲ್ಲಿ ಭಿತ್ತಿ ಚಿತ್ರಗಳನ್ನು ಬಳಸಿದ್ದಾರೆ . ಲಭ್ಯವಿರುವ ಅಂದಿನ ಕಾಲದ ಸಾಕ್ಷ್ಯಚಿತ್ರಗಳನ್ನು ಅವಶ್ಯವಿರುವ ಕಡೆ ಬಳಸಿ ವಿಷಯಕ್ಕೆ ಅಧಿಕೃತ ಸ್ಪರ್ಶ ನೀಡಲಾಗಿದೆ. ಭಾರತದಾದ್ಯಂತ ಗಾಂಧೀಜಿ ಕೈಗೊಂಡ ಪ್ರವಾಸಗಳ ಮಾಹಿತಿ ನಕ್ಷೆಯಿದೆ. ನವದೆಹಲಿಯ ಗಾಂಧಿ ರಾಷ್ಟ್ರೀಯ ಸ್ಮಾರಕ ಮ್ಯೂಸಿಯಂನಲ್ಲಿನ ಛಾಯಾಚಿತ್ರಗಳು ಹಾಗೂ ಗಾಂಧಿಜೀಯವರ ಅಧಿಕೃತ ಪತ್ರಗಳು ಮತ್ತು ಲೇಖನಗಳನ್ನು ಮ್ಯೂಸಿಯಂನಲ್ಲಿ ವಿಷಯ ನಿರೂಪಣೆಗೆ ಪ್ರಧಾನವಾಗಿ ಬಳಸಿ ಕೊಳ್ಳಲಾಗಿದೆ. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಭಂಡಾರದ ಪತ್ರಿಕಾ ಸುದ್ದಿಗಳನ್ನು ಆಧರಿಸಿ ಸ್ವಾತಂತ್ರ್ಯ ಹೋರಾಟದ ಮಹತ್ವದ ಘಟನೆಗಳನ್ನು ನಿರೂಪಿಸಲಾಗಿದೆ.

ಇಲ್ಲಿ ಪ್ರದರ್ಶಿಸಿರುವ ಒಂದು ಚಿತ್ರದ ಆಧಾರದಂತೆ ; ಆಗಸ್ಟ 24 ,1608 ರಂದು ಈಸ್ಟ್ ಇಂಡಿಯಾ ಕಂಪನಿಯ





ವ್ಯಾಪಾರಿ ಹಡಗು ಮೊಟ್ಟಮೊದಲ ಬಾರಿಗೆ ಗುಜರಾತ್ ರಾಜ್ಯದ ಸೂರತ್ ಬಂದರಿಗೆ ಬಂದು ಇಳಿಯುತ್ತದೆ. ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಬ್ರಿಟಿಷರು ನಂತರ ತಮ್ಮ ಕುಟಿಲ ಉಪಾಯಗಳಿಂದ ಭಾರತದ ರಾಜರುಗಳ ನಡುವೆ ದ್ವೇಷ ಬಿತ್ತಿ ಅವರನ್ನು ಪ್ರತ್ಯೇಕಿಸಿ ಇಲ್ಲಿನ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದು ಕೊಳ್ಳುತ್ತಾರೆ. ಹೀಗೆ ಆರಂಭವಾಗುವ ಭಾರತ ದೇಶದ ದಾಸ್ಯಕಥನ ಆಗಸ್ಟ್ 15 ,1947 ರಂದು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿ ಹೊರ ಹೋಗುವ ತನಕ ಸುಮಾರು 340 ವರ್ಷಗಳ ಕಾಲ ನಡೆಯುತ್ತದೆ.

ಭಾರತಕ್ಕೆ ಬ್ರಿಟಿಷರ ಆಗಮನವಾದ ನಂತರದ ಬೆಳವಣಿಗೆಗಳಲ್ಲಿ ನಮ್ಮ ದೇಶದ ಆದಿವಾಸಿಗಳು ಬ್ರಿಟಿಷರ ಆಡಳಿತದ ವಿರುದ್ಧ ಆಗಾಗ್ಗೆ ದಂಗೆ ಏಳುವುದು , ಸ್ಥಳೀಯ ರಾಜರುಗಳು ಆಂಗ್ಲರ ಆಡಳಿತಕ್ಕೆ ಪ್ರತಿರೋಧ ಒಡ್ಡುವುದು ನಡೆಯುತ್ತಲೇ ಇರುತ್ತದೆ. ಬ್ರಿಟಿಷರು ಇವುಗಳನ್ನು ತಮ್ಮ ಬಂದೂಕಿನ ಶಕ್ತಿಯಿಂದ ದಮನಗೊಳಿಸುತ್ತಾ ಭಾರತದಲ್ಲಿ ತಮ್ಮ ನೆಲೆಯನ್ನು ಬಲಗೊಳಿಸಿ ಕೊಳ್ಳುತ್ತಾರೆ . ಕರ್ನಾಟಕದ ಕಿತ್ತೂರು ರಾಣಿ ಚನ್ನಮ್ಮ 1824 ರಲ್ಲಿ ಮತ್ತು 1857 ರಲ್ಲಿ ಉತ್ತರ ಪ್ರದೇಶದ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಇವರುಗಳು ಬ್ರಿಟಿಷರ ವಿರುದ್ಧ ದಿಟ್ಟ ಹೋರಾಟ ನಡೆಸಿದ್ದು ಭಾರತ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳಾಗಿ ಗುರುತಾಗಿವೆ. ದೇಶದ ಆದಿವಾಸಿಗಳು ಮತ್ತು ಸಾಮಂತ ರಾಜರುಗಳು ನಡೆಸುತ್ತಿದ್ದ ಹೋರಾಟ , ಪ್ರತಿರೋಧಗಳು ಸಂಘಟಿತವಾಗಿ 1857 ರ ಸಿಪಾಯಿ ದಂಗೆಯ ಮೂಲಕ ಸ್ಫೋಟಗೊಂಡು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಪ್ರಮುಖ ಚಾಲನೆ ಸಿಕ್ಕಿತು ಎಂದು ಇತಿಹಾಸಕಾರರು ಗುರುತಿಸಿದ್ದಾರೆ . ಈ ಘಟನೆಗಳನ್ನು ವರ್ಣಚಿತ್ರಗಳ ಮೂಲಕ ತೋರಿಸಲಾಗಿದೆ.

ಗುಜರಾತಿನ ಪೋರ್ ಬಂದರಿನಲ್ಲಿ 1869 ರ ಅಕ್ಟೋಬರ್ 2 ರಂದು ಮೋಹನದಾಸ ಕರಮಚಂದ ಗಾಂಧಿ ಜನ್ಮ ತಳೆಯುವುದರಿಂದ ಆರಂಭವಾಗುವ ಗಾಂಧಿ ಕಥನ ಅವರ ಬಾಲ್ಯ , ಇಂಗ್ಲೆಂಡಿನಲ್ಲಿ ವಕೀಲಿ ಶಿಕ್ಷಣ ಮತ್ತು ದಕ್ಷಿಣ ಆಫ್ರಿಕಾದಲ್ಲಿ ವರ್ಣ ಭೇಧ ಹೋರಾಟ ರೂಪುಗೊಂಡಿದ್ದು , ಸತ್ಯಾಗ್ರಹದ ಪರಿಕಲ್ಪನೆ ಜನ್ಮ ತಳೆದದ್ದು ಇವೆಲ್ಲವೂ ಸೂಕ್ತ ಚಿತ್ರಗಳೊಡನೆ ಪ್ರದರ್ಶನಗೊಂಡಿವೆ.



ಅಶೋಕ್ ಗೆಹಲೋಟ್

ರಾಜಸ್ತಾನದ ಮುಖ್ಯ ಮಂತ್ರಿ ಅಶೋಕ್ ಗೆಹಲೋಟ್ 73 ರ ಇಳಿವಯಸ್ಸಿನ ರಾಜಕೀಯ ದುರೀಣ. ಗಾಂಧಿ ವಿಚಾರ ಧಾರೆಗಳಲ್ಲಿ ನಂಬಿಕೆ ಉಳ್ಳವರು. ಇಡೀ ಭಾರತದಲ್ಲಿ ಸ್ವಾತಂತ್ರ್ಯ ಯೋಧರಿಗೆ 50,000 ರೂಗಳ ಪಿಂಚಣಿ ನೀಡುವ ಏಕೈಕ ರಾಜ್ಯ ಎನ್ನುವ ಹೆಗ್ಗಳಿಕೆಗೆ ಪಾತ್ರರು. ಗಾಂಧಿ ಅನುಯಾಯಿಗಳ ಬಗ್ಗೆ ವಿಶೇಷ ಅಭಿಮಾನ . ರಾಜಸ್ತಾನದ ರಾಜಧಾನಿ ಜೈಪುರದ ಪ್ರತಿಷ್ಠಿತ ಸೆಂಟ್ರಲ್ ಪಾರ್ಕ್ ಪ್ರದೇಶದಲ್ಲಿ ' ಗಾಂಧಿ ವಾಟಿಕಾ ' ನಿರ್ಮಾಣಕ್ಕಾಗಿ ಸ್ಥಳಾವಕಾಶ ನೀಡಿ ಅಪರೂಪದ ಮ್ಯೂಸಿಯಂ ರೂಪಿಸಿದವರು.

ದಕ್ಷಿಣ ಆಫ್ರಿಕಾದಿಂದ ಗಾಂಧೀಜಿ ಭಾರತಕ್ಕೆ 1914 ರಲ್ಲಿ ಆಗಮಿಸಿ ಕಾಂಗ್ರೆಸ್ ಪಕ್ಷಕ್ಕೆ ಮರು ಚೈತನ್ಯ ನೀಡಿದ್ದು ಭಾರತದ ಜನಸಾಮಾನ್ಯರನ್ನು ಒಗ್ಗೂಡಿಸಿ ಅಹಿಂಸಾತ್ಮಕ ಹೋರಾಟದ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ಗಳಿಸಿ ಕೊಟ್ಟಿದ್ದು , ಕೋಮು ಸಾಮರಸ್ಯಕ್ಕಾಗಿ ತಮ್ಮ ಜೀವನವನ್ನೇ ಬಲಿಕೊಟ್ಟು ಹುತಾತ್ಮರಾದದ್ದು ಇವೆಲ್ಲವೂ ಸಂದರ್ಭಕ್ಕೆ ಅನುಸಾರವಾಗಿ ಚಿತ್ರಗಳು , ಕಲಾಕೃತಿ ಮತ್ತು ಚಲನಚಿತ್ರ ದೃಶ್ಯಗಳ ಮೂಲಕ ಮ್ಯೂಸಿಯಂನಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿತವಾಗಿವೆ.

ಮ್ಯೂಸಿಯಂ ವೀಕ್ಷಣೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ಧ್ವನಿ ನಿರೂಪಣೆ ಇದೆ. ಕೆಲವು ಕಡೆ ಗಾಂಧೀಜಿಯವರ ಧ್ವನಿ ನಿರೂಪಣೆಯೂ ಇದೆ. ಕೆಲವು ಕುತೂಹಲದ ಘಟನೆಗಳನ್ನು ದೃಶ್ಯ ಮಾಧ್ಯಮ ಬಳಸಿ ಆಕರ್ಷಕವಾಗಿ ನಿರೂಪಿಸಲಾಗಿದೆ. ಇದಕ್ಕೆ ದಾಂಡಿ ಉಪ್ಪಿನ ಸತ್ಯಾಗ್ರಹ ಘಟನೆ ಒಂದು ಉದಾಹರಣೆ . ಅಲ್ಲಲ್ಲಿ ಉಪ್ಪಿನ ಗುಡ್ಡೆಗಳನ್ನು ನಿರ್ಮಿಸಿ ಅದರ ಮೇಲೆ ಉಪ್ಪಿನ ಸತ್ಯಾಗ್ರಹಿಗಳ ದೃಶ್ಯ ಮೂಡುವಂತೆ ಸಂಯೋಜಿಸಲಾಗಿದೆ .ಇನ್ನೊಂದು ಕಡೆ ; ಒಂದರ ಪಕ್ಕ ಒಂದು ಪರದೆಗಳನ್ನು ವೃತ್ತಾಕಾರದಲ್ಲಿ ಜೋಡಿಸಿ ಅವುಗಳ ಮೇಲೆ ಒಂದಾದ ಮೇಲೆ ಒಂದರಂತೆ ವಿಡಿಯೋಗಳನ್ನು ಪ್ರದರ್ಶಿಸಿ ವಿಭಿನ್ನ ಅನುಭವ ಮೂಡಿಸಲಾಗಿದೆ. ಗಾಂಧೀಜಿ ನಮ್ಮಿಂದ ಕಣ್ಮರೆಯಾಗುವ ಅಂತಿಮ ಹಂತದ ದೃಶ್ಯವನ್ನು ಸೂಕ್ಷ್ಮವಾಗಿ ಸಂಯೋಜಿಸಲಾಗಿದೆ. ಗಾಂಧೀಜಿಯವರ ಇಳಿ ವಯಸ್ಸಿನ ಭಾವಚಿತ್ರವನ್ನು ದೂರದಲ್ಲಿ ಇಟ್ಟು ಆ ಚಿತ್ರ ನಮ್ಮಿಂದ ಇನ್ನಷ್ಟು ದೂರದಲ್ಲಿರುವಂತೆ ಕಾಣಿಸುವ ಭ್ರಮೆ ಮೂಡಿಸಲು ಕಟ್ ಔಟ್ ಮಾದರಿಯ ಮರದ ಚೌಕಟ್ಟುಗಳನ್ನು ನಿರ್ಮಿಸಿ ವೀಕ್ಷಕರು ಅದರ ಒಳಗಿನಿಂದ ಗಾಂಧೀಜಿ ಚಿತ್ರವನ್ನು ನೋಡುವಂತೆ ದೃಶ್ಯ ಸಂಯೋಜಿಸಿದ್ದಾರೆ. ಈ ದೃಶ್ಯ ಸಂಯೋಜನೆಯಲ್ಲಿ ಗಾಂಧಿ ಚಿತ್ರ ನೋಡುವಾಗ ಗಾಂಧೀಜಿ ನಮ್ಮಿಂದ ದೂರವಾಗಿದ್ದಾರೆ ಎನ್ನುವ ಭ್ರಮೆಗೆ ವೀಕ್ಷಕರು ಒಳಗಾಗುತ್ತಾರೆ.

ಗಾಂಧೀಜಿ ಕುರಿತ ಸಿನಿಮಾಗಳು, ಖ್ಯಾತ ಕಲಾವಿದರಿಂದ ರಚಿತವಾಗಿರುವ ಗಾಂಧಿ ವರ್ಣ ಚಿತ್ರಗಳು , ಗಾಂಧೀಜಿ ಬಗ್ಗೆ ವಿಶ್ವಖ್ಯಾತ ವ್ಯಕ್ತಿಗಳ ಅಭಿಪ್ರಾಯಗಳು , ಗಾಂಧಿ ಪ್ರಭಾವಕ್ಕೆ ಒಳಗಾಗಿ ಮಹಾನ್ ನಾಯಕರಾಗಿ ರೂಪಿತವಾದ ವ್ಯಕ್ತಿಗಳು ಹೀಗೆ ಗಾಂಧಿಯವರ ವಿರಾಟ್ ದರ್ಶನ ಇಲ್ಲಿ ವೀಕ್ಷಕರಿಗೆ ಸಿಗುತ್ತದೆ. ಜೈಪುರದಲ್ಲಿರುವ ' ಗಾಂಧಿ ವಾಟಿಕಾ ' ಗಾಂಧಿ ಅನುಯಾಯಿಗಳು ಒಮ್ಮೆ ನೋಡಲೇ ಬೇಕಾದ ಅಪರೂಪದ ಮ್ಯೂಸಿಯಂ . ■



ಬಿಸಿಪ್ರಳಯದ ಹೊಸ್ತಿಲಲ್ಲಿ ಗಾಂಧೀ ನೆರಳು

– ನಾಗೇಶ್ ಹೆಗಡೆ

‘ನೇತ್ರಾವತಿ ಬತ್ತಿದೆ, ಪ್ರವಾಸಿಗರಿಗೆ ಸ್ನಾನಕ್ಕೆ ನೀರಿಲ್ಲ; ಭಕ್ತಾದಿಗಳು ಬೇಸಿಗೆ ಮುಗಿಯುವವರೆಗೆ ಬರಬೇಡಿ’ ಎಂಬರ್ಥದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಹೆಗ್ಗಡೆಯವರು 2019ರ ಮೇ ತಿಂಗಳಲ್ಲಿ ಘೋಷಣೆ ಹೊರಡಿಸಿದರು.

ಮೂರು ತಿಂಗಳ ನಂತರ, ’ನೇತ್ರಾವತಿ ಮೇರೆ ಮೀರಿ ಉಕ್ಕುತ್ತಿದೆ, ದಂಡೆಯಲ್ಲಿರುವ ನಿವಾಸಿಗಳು ಮನೆಗಳನ್ನು ಖಾಲಿ ಮಾಡಿ ದೂರ ಸಾಗಿರಿ’ ಎಂಬರ್ಥದಲ್ಲಿ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಶಶಿಕಾಂತ್ ಸೆಂಥಿಲ್ ನೋಟೀಸ್ ಹೊರಡಿಸಿದರು. ಬಂಟ್ವಾಳ, ಉಪ್ಪಿನಂಗಡಿಯಲ್ಲಿ ನದಿ ಅಪಾಯದ ಮಟ್ಟವನ್ನು ಮೀರಿ ಹರಿಯತೊಡಗಿದಾಗ ಅಲ್ಲೆಲ್ಲ ರಕ್ಷಣಾ ಸಿಬ್ಬಂದಿಯನ್ನು ನೇಮಿಸಿದರು.

ಪಶ್ಚಿಮಘಟ್ಟದ ನದಿಕೊಳ್ಳಗಳು ಬೇಸಿಗೆಯಲ್ಲೂ ಸಂಕಷ್ಟ ತರತೊಡಗಿವೆ, ಮಳೆಗಾಲದಲ್ಲೂ ತೀರದಷ್ಟು ಸಮಸ್ಯೆಗಳನ್ನು ತಂದೊಡ್ಡುತ್ತಿವೆ. ಈಗಿನ ಮಳೆಗಾಲದಲ್ಲಂತೂ ಘಟ್ಟಗಳ ನದಿಗಳಲ್ಲಿ ಬೇಸಿಗೆಯ ಮಿಣುಕುಧಾರೆಯೇ ಹರಿಯುತ್ತಿದೆ. ಕಾವೇರಿಯೂ ಸೊರಗಿದ್ದರಿಂದ ತಮಿಳುನಾಡಿಗೆ ನೀರನ್ನು ಬಿಡಬಾರದೆಂದು ಎಷ್ಟೊಂದು ಬಗೆಯ ಬಂದ್‌ಗಳು ತಾರಕಕ್ಕೇರಿವೆ.

ಹವಾಮಾನದ ಈ ಪರಿಯ ವೈಪರೀತ್ಯಗಳಿಗೆಲ್ಲ ಕಾರಣ ಏನು ಗೊತ್ತೆ? ಆಡಮ್ ಸ್ಮಿತ್ ಎಂಬ ಬ್ರಿಟಿಷ್ ಪಂಡಿತನ ಬಂಡವಾಳಶಾಹಿ, ಫ್ರೀಮಾರ್ಕೆಟ್ ಅರ್ಥಶಾಸ್ತ್ರವೇ ಮೂಲ ಕಾರಣ. ಆತ ಬರೆದ 'ವೆಲ್ತ್ ಆಫ್ ನೇಶನ್ಸ್' ಗ್ರಂಥವನ್ನು ಅರ್ಥಶಾಸ್ತ್ರದ ಬೈಬಲ್ ಎಂದೇ ಈಗಲೂ ಇಕಾನಮಿಕ್ಸ್ ಪದವಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಆತನ ಪ್ರಕಾರ, ಬಂಡವಾಳಶಾಹಿಗಳಿಗೆ ಮುಕ್ತ ಸ್ವಾತಂತ್ರ್ಯವನ್ನು ಕೊಟ್ಟರೆ, ಅವರು ಲಾಭಕ್ಕಾಗಿ ಶ್ರಮಿಸಿದಾಗ ಎಲ್ಲರ ಉನ್ನತಿಯಾಗುತ್ತದೆ. ಸರಕುಗಳಿಗೆ ಮುಕ್ತ ಮಾರುಕಟ್ಟೆಯನ್ನು ಸೃಷ್ಟಿಸಿ, ಅವಕ್ಕೆ ಬೇಡಿಕೆ ಹೆಚ್ಚುವಂತೆ ಮಾಡಿದರೆ, ಅವನ್ನು ಪೂರೈಸುವ ಪ್ರಕ್ರಿಯೆಯಲ್ಲೇ ಜನರ ಆಶೋತ್ತರಗಳೂ ಪೂರೈಕೆಯಾಗುತ್ತವೆ ಎಂಬುದು ಆತನ ವಾದವಾಗಿತ್ತು. ಅವನ ಚಿಂತನೆಗಳನ್ನು ಆಧರಿಸಿಯೇ ಆಧುನಿಕ ಅರ್ಥಶಾಸ್ತ್ರ, ವಾಣಿಜ್ಯ, ಮತ್ತು ಉದ್ಯಮಗಳು ವಿಕಾಸಗೊಂಡಿವೆ. ಭೂಮಿಯ ನೈಸರ್ಗಿಕ ಸಂಪತ್ತನ್ನು, ಅದರಲ್ಲೂ ವಿಶೇಷವಾಗಿ ಪೆಟ್ರೋಲ್, ಕಲ್ಲಿದ್ದಲು, ನೈಸರ್ಗಿಕ ಅನಿಲಗಳನ್ನು ಉರಿಸುತ್ತ ಜಗತ್ತಿನ ಜನರನ್ನೆಲ್ಲ ಕೊಳ್ಳುಬಾಕರನ್ನಾಗಿ ಮಾಡುತ್ತ ಹೋದಂತೆಲ್ಲ ಬಂಡವಾಳ ಬೆಳೆಯುತ್ತ ಹೋಗುತ್ತದೆ ಎಂಬ ಧೋರಣೆಯಲ್ಲೇ ಇಡೀ ಜಗತ್ತು ಓಡುತ್ತಿದೆ. ಒಂದರ್ಥದಲ್ಲಿ, 'ಇನ್ನಷ್ಟು, ಮತ್ತಷ್ಟು'ಗಳೆಂಬ ಇಂಧನದ ಮೇಲೆಯೇ ಜಗತ್ತು ಓಡುತ್ತಿದೆ.

ಅದರ ಪರಿಣಾಮವಾಗಿ ವಾತಾವರಣದಲ್ಲಿ ಉಷ್ಣವರ್ಧಕ ಅನಿಲಗಳ ದಟ್ಟಣೆ ಇನ್ನಷ್ಟು ಮತ್ತಷ್ಟು ಹೆಚ್ಚಾಗುತ್ತಿದೆ. ಭೂಮಿ ಬಿಸಿಯಾಗುತ್ತಿದೆ. ಸಮುದ್ರದಿಂದ ಮೇಲೇರುವ ಆವಿಯ ಪ್ರಮಾಣ ಹೆಚ್ಚುತ್ತ ವಾಯುಮಂಡಲದಲ್ಲಿ ಮೇಘದಟ್ಟಣೆ ಹೆಚ್ಚುತ್ತ ವಾತಾವರಣ ಹುಚ್ಚುಚ್ಚಾಗಿ ವರ್ತಿಸುತ್ತಿದೆ. ಒಂದೆಡೆ ಚಂಡಮಾರುತ, ಒಂದೆಡೆ ದೂಳು ಮಾರುತ, ಮತ್ತೊಂದೆಡೆ ಹಿಮಕುಸಿತ, ಇನ್ನೆಲ್ಲೋ ಅಗ್ನಿವರ್ಷ–ಅಂತೂ ಇಡೀ ಭೂಮಿಯ ಋತುಮಾನಗಳೇ ತಾಳತಪ್ಪಿದಂತೆ ವರ್ತಿಸುತ್ತಿವೆ.

ಪಶ್ಚಿಮಘಟ್ಟಗಳಲ್ಲಿ, ಕರ್ನಾಟಕದ ಬಿಸಿಲುಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಉತ್ಪಾತಗಳಿಗೆ ನಮ್ಮವರೇ ಕಾರಣರೆಂದು ಹೇಳುವಂತಿಲ್ಲ. ಬೆಂಗಳೂರಿನ ಅಧಿಕಾರಿಗಳು, ಗುತ್ತಿಗೆದಾರರು ಕಾರಣವೆಂದೂ ಹೇಳುವಂತಿಲ್ಲ. ಇನ್ನೂ ದೂರದ ಜಪಾನ್, ಯುರೋಪ್, ಕೆನಡಾ, ದಕ್ಷಿಣ ಕೊರಿಯಾ, ಯುಎಸ್‌ಎ, ಅರಬ್ ರಾಷ್ಟ್ರಗಳೇ ಕಾರಣವಾಗಿರಬಹುದು. ಅಲ್ಲಿನವರು ಉರಿಸುವ ಅಪಾರ ಪ್ರಮಾಣದ ಫಾಸಿಲ್ ಇಂಧನಗಳ ದುಷ್ಪರಿಣಾಮ ಇಡೀ ಪೃಥ್ವಿಯನ್ನು ಬಿಸಿ ಮಾಡುತ್ತಿದೆ. ಅವರ ಮಾದರಿಯಲ್ಲೇ ಭಾರತವನ್ನೂ ಅಭಿವೃದ್ಧಿಯ ಹೆದ್ದಾರಿಯಲ್ಲಿ ಸಾಗಿಸಬೇಕೆಂದು ಹಳ್ಳಿಹಳ್ಳಿಗೆ ಎಲ್‌ಪಿಜಿಯನ್ನು ವಿತರಿಸಿದ್ದೂ ಕಾರಣವಿರಬಹುದು. ಎಲ್‌ಪಿಜಿ ಎಂದರೆ ಅನಿಲದ ಸಿಲಿಂಡರ್ ಅಷ್ಟೇ ಅಲ್ಲ; ಲಿಬರಲೈಸೇಶನ್, ಪ್ರೈವೆಟೈಸೇಶನ್, ಗ್ಲೋಬಲೈಸೇಶನ್ ಈ ಮೂರನ್ನೂ ಸೇರಿಸಿ ಎಲ್‌ಪಿಜಿ ಎನ್ನುತ್ತಾರೆ. ಮುಕ್ತ ಆರ್ಥಿಕತೆ, ಖಾಸಗೀಕರಣ ಮತ್ತು ಜಾಗತೀಕರಣದ ಈ ತ್ರಿಶೂಲ ಈಗಂತೂ ಕರ್ನಾಟಕದ ಹಳ್ಳಿಹಳ್ಳಿಗಳನ್ನೂ ಪ್ರವೇಶಿಸಿವೆ.

ಇಂದಿನ ಈ ದುಷ್ಕಾಲದಲ್ಲಿ ಗಾಂಧೀಜಿಯವರ ಆರ್ಥಿಕತೆ ಹೇಗೆ ಪ್ರಸ್ತುತ ಎಂಬುದನ್ನು ನೋಡೋಣ. ಇಲ್ಲೊಂದೇ ಅಲ್ಲ, ಇಡೀ ಜಗತ್ತಿಗೆ ಇಂದು ಗಾಂಧೀಜಿ ಹೇಳಿದ ಅಭಿವೃದ್ಧಿ ಮಾರ್ಗವೇ ಸರಿಯಾದ ಪರಿಹಾರ ಎಂದು 2012ರಲ್ಲಿ ವಿಶ್ವಸಂಸ್ಥೆಯೇ ಹೇಳಿತ್ತು. ನೈಸರ್ಗಿಕ ಸಂಪತ್ತುಗಳನ್ನು (ಅಂದರೆ ಇಂಧನ, ಖನಿಜ, ನೀರು, ಗಾಳಿಯನ್ನು) ಹಿತಮಿತವಾಗಿ ಬಳಸುವ 'ಸುಸ್ಥಿರ ಆರ್ಥಿಕತೆ'ಯನ್ನು ಅನುಷ್ಠಾನಕ್ಕೆ ತರುವುದು ಅನಿವಾರ್ಯವೆಂದು ಹೇಳಿತ್ತು. ಆ ಇಸವಿಯನ್ನು 'ಸುಸ್ಥಿರ ಆರ್ಥಿಕತೆಯ ವರ್ಷ' ಎಂತಲೂ ಘೋಷಿಸಿತ್ತು. ಗಾಂಧೀಜಿಯವರು ಸುಸ್ಥಿರತೆ ಎಂಬ ಪದವನ್ನೇ ಬಳಸಲಿಲ್ಲ ನಿಜ. ಆದರೆ ನೈಸರ್ಗಿಕ ಸಂಪನ್ಮೂಲಗಳ ಹಿತಮಿತ ಬಳಕೆಯ ಬಗ್ಗೆ ಹೇಳಿದ್ದರು. 'ಬ್ರಿಟನ್ನಿನ ಮಾದರಿಯಲ್ಲೇ ನಮ್ಮ ದೇಶದ 33 ಕೋಟಿ ಜನರೂ ಐಷಾರಾಮ್ ಬದುಕಲು ಹೋದರೆ ಇಡೀ ಭೂಮಿಯೇ ಮಿಡತೆಗಳ ದಾಳಿಗೆ ಸಿಕ್ಕ ಹೊಲದಂತೆ ಬಟ್ಟಬರಿದಾದೀತು' ಎಂದಿದ್ದರು. ಅವರು ಆಡಮ್ ಸ್ಮಿತ್ ಮಾದರಿಯ ಬಲಪಂಥೀಯ ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು, ಯಂತ್ರನಾಗರಿಕತೆಯನ್ನು ಒಪ್ಪಲಿಲ್ಲ. ಅಥವಾ ಕಾರ್ಲ್ ಮಾರ್ಕ್ಸ್‌ನ ಎಡಪಂಥೀಯ ಕಮ್ಯೂನಿಸ್ಟ್ ಪ್ರಣಾಳಿಕೆಯನ್ನೂ ಬೆಂಬಲಿಸಲಿಲ್ಲ. ಗಾಂಧೀಜಿಯವರದ್ದು ಸಾವಿರ ಕೈಗಳ ಕೆಲಸಗಳನ್ನು ಕಿತ್ತುಕೊಳ್ಳುವ 'ಫ್ಯಾಕ್ಟರಿ ಆರ್ಥಿಕತೆ' ಆಗಿರಲಿಲ್ಲ. ಬದಲಿಗೆ ಅಹಿಂಸಾತ್ಮಕ ನೆಲೆಯಲ್ಲಿ ಸಾವಿರ ಕೈಗಳಿಗೆ ಕೆಲಸ ನೀಡುವ ಗ್ರಾಮಸ್ವರಾಜ್ಯದ ಪರಿಕಲ್ಪನೆ ಅವರದ್ದಾಗಿತ್ತು.

ಗಾಂಧೀಜಿಯವರ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಹುಲ್ಲುಬೇರಿನ ಮಟ್ಟದಲ್ಲಿ ಜನರು ಸ್ವಾವಲಂಬಿಯಾಗಿರಬೇಕು. ಸ್ಥಳೀಯ ಜನರ ಕೌಶಲಗಳನ್ನು ಬಳಸಿಕೊಂಡು, ಸ್ಥಳೀಯ ಶಕ್ತಿಮೂಲಗಳನ್ನು ದುಡಿಸಿಕೊಂಡು, ಸ್ಥಳೀಯ ಸಂಸ್ಕೃತಿ ಪರಂಪರೆಗಳಿಗೆ ಧಕ್ಕೆ ಬಾರದಂತೆ, ಸ್ಥಳೀಯ ಆರ್ಥಿಕ ನೆರವಿನಿಂದಲೇ ಸ್ಥಳೀಯರ ಮೂಲ ಅಗತ್ಯಗಳನ್ನೂ ಆಶೋತ್ತರಗಳನ್ನೂ ಪೂರೈಸುವ ಪ್ರಜಾತಾಂತ್ರಿಕ ವ್ಯವಸ್ಥೆ ಇರಬೇಕು. ಇವೆಲ್ಲವೂ ಅಹಿಂಸಾತ್ಮಕ ನೆಲೆಯಲ್ಲಿ, ಅಂದರೆ ನಿಸರ್ಗದ ವ್ಯವಸ್ಥೆಯಲ್ಲಿ ಲೋಪವುಂಟಾಗದಂತೆ ನಿರ್ವಹಣೆಯಾಗಬೇಕು. ಗಾಂಧೀಜಿ ಹೇಳಿದ ಈ ಎಲ್ಲ ಅಂಶಗಳನ್ನೂ ಕಡೆಗಣಿಸಿ ಪ್ರಪಂಚ ಬಹುದೂರ ಸಾಗಿಬಂದಿದೆ. ಎಮ್ಮೆಗೆ ಹಾಕುವ ಮೂಗುದಾಣವೂ ಎಲ್ಲೋ ಅರ್ಧಪ್ರಪಂಚದಾಚಿನ ಸಾಗರದಾಳದ ಬಾವಿಯಿಂದ ತೆಗೆದ ಪೆಟ್ರೋಲಿಯಂ ದ್ರವ್ಯದಿಂದ ಉತ್ಪನ್ನವಾದ ಪ್ಲಾಸ್ಟಿಕ್ ನಾರಿನಿಂದ ಫ್ಯಾಕ್ಟರಿಯಲ್ಲಿ ಹೊಸೆದಿದ್ದೇ ಆಗಿರುತ್ತದೆ. ಇನ್ನು, ಪ್ರಜಾತಾಂತ್ರಿಕ ವ್ಯವಸ್ಥೆಯೇನೊ ಗ್ರಾಮೀಣ ಮಟ್ಟಕ್ಕೆ ಬಂದಿದೆ ನಿಜ. ಆದರೆ ಅದು ತಳಮಟ್ಟದ ಜನರ ಸಹಭಾಗಿತ್ವದ ಪ್ರಜಾತಂತ್ರವಾಗಿ ಉಳಿದಿಲ್ಲ. ಅದೂ ಬಲಿಷ್ಠರ ಹಾಗೂ ಭ್ರಷ್ಟರ ಬಿಗಿಮುಷ್ಟಿಯಲ್ಲಿ ಹಿಪ್ಪೆಯಾಗುತ್ತಿರುವ ವ್ಯವಸ್ಥೆಯೇ ಆಗಿದೆ.

ಗಾಂಧೀಜಿಯ ನಿರ್ಗಮನದ ಹತ್ತೇ ವರ್ಷಗಳಲ್ಲಿ ಅವರ ಆದರ್ಶ ತತ್ವಗಳಿಗೆಲ್ಲ



ಈ ದೇಶದವರೇ ಎಳ್ಳುನೀರು ಬಿಡುತ್ತಿದ್ದಾಗ ಪಶ್ಚಿಮದ ಇ.ಎಫ್. ಶ್ಯೂಮೇಕರ್, ಐವಾನ್ ಇಲ್ಲಿಚ್‌ನಂಥವರು ಈ ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನೇ ಇನ್ನಷ್ಟು ವಿಸ್ತರಿಸಿ, ಗಾಂಧೀವಾದದ ಮರುಸ್ಥಾಪನೆಗೆ ಕಸರತ್ತು ನಡೆಸಿದರು. ತಂತ್ರಜ್ಞಾನ ಮತ್ತು ಬಂಡವಾಳಶಾಹಿಯ ದಾಂಗುಡಿಯಲ್ಲಿ ಇಡೀ ಜಗತ್ತೇ ತತ್ತರಿಸಲಿದೆ ಎಂಬುದನ್ನು ಅರಿತ ಈ ಮಹನೀಯರು ಬ್ರಿಟನ್ನಿನಲ್ಲಿ 'ಇಂಟರ್‌ಮೀಡಿಯೇಟ್ ಟೆಕ್ನಾಲಜಿ ಡೆವಲಪ್‌ಮೆಂಟ್ ಗ್ರೂಪ್' ಎಂಬ ಸಂಸ್ಥೆಯನ್ನು ಆರಂಭಿಸಿ ಗಾಂಧಿಪ್ರಣೀತ 'ಸಮುಚಿತ ತಂತ್ರಜ್ಞಾನದ' ಪರಿಕಲ್ಪನೆಯನ್ನು ಜೀವಂತವಾಗಿಡಲು ಯತ್ನಿಸಿದರು. ಅಭ್ಯುದಯ ಎಂದರೆ ಜನರ ಅಭ್ಯುದಯವೇ ಹೊರತೂ ಕಾರ್ಖಾನೆ, ಕಾಂಕ್ರೀಟ್ ಸೌಧಗಳ ಅಭ್ಯುದಯ ಅಲ್ಲ ಎಂದು ಸಾಧಿಸಲು ಪ್ರಯತ್ನ ನಡೆಸಿದರು. ಆದರೆ ಪಶ್ಚಿಮದವರು ತೋರಿಸಿದ ಸುಖ–ಸೌಲತ್ತು, ದೌಲತ್ತುಗಳ ಆಕರ್ಷಣೆ ಅದೆಷ್ಟಿತ್ತೆಂದರೆ ಇಡೀ ಜಗತ್ತೇ ಇಂದು ಪಳೆಯುಳಿಕೆ ಇಂಧನಗಳ ದಾಸ್ಯತ್ವಕ್ಕೆ ಸಿಲುಕಿ, ಬೊಜ್ಜು ಕರಗಿಸಲೂ ಯಂತ್ರಗಳ ನೆರವು ಕೋರಬೇಕಾಗಿ ಬಂದಿದೆ. ಇಡೀ ಪೃಥ್ವಿಯೇ ಬಿಸಿಯುಸಿರು ಬಿಡುವಂತಾಗಿದೆ. ಗಾಂಧೀಜಿಯವರನ್ನು ಮತ್ತೆ ನೆನಪಿಸಿಕೊಂಡು ಅವರ ತತ್ವಾದರ್ಶಗಳಲ್ಲಿ ಸುಸ್ಥಿರ ಅಭಿವೃದ್ಧಿಯ ಸೂತ್ರಗಳು ಇವೆಯೇ ಎಂದು ಅವರು ಶತಮಾನದ ಹಿಂದೆ ಬರೆದಿದ್ದ 'ಹಿಂದ್ ಸ್ವರಾಜ್' ಪುಟಗಳಲ್ಲಿ ಹುಡುಕುವಂತಾಗಿದೆ.

ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ 2015ರಲ್ಲಿ 'ಸುಸ್ಥಿರ ಅಭಿವೃದ್ಧಿಯ ಗುರಿಗಳು' ಎಂದು ಒಟ್ಟು 17 ಸೂತ್ರಗಳನ್ನು ರೂಪಿಸಲಾಗಿದೆ. ಆ ಹದಿನೇಳರಲ್ಲಿ 13 ಸೂತ್ರಗಳು ಗಾಂಧೀಜಿಯವರ ತತ್ವಾದರ್ಶಗಳಿಂದ ನೇರವಾಗಿ ಪಡೆದಿದ್ದಾಗಿದೆ. ಇನ್ನು ಮೂರು ಸೂತ್ರಗಳು (ಶುದ್ಧಶಕ್ತಿಮೂಲಗಳ ಬಳಕೆ, ಸಾಗರದಾಳದ ಜೀವರಕ್ಷಣೆ ಮತ್ತು ಹವಾಗುಣ ಸಮತೋಲ ಸಾಧನೆ) ಈಗಿನ ದಿನಗಳಲ್ಲಿ ಪ್ರಾಮುಖ್ಯ ಪಡೆದಿವೆಯಾದರೂ ಗಾಂಧೀಜಿಯವರು ಜೀವಿಸಿದ್ದ ಕಾಲದಲ್ಲಿ ಅಪ್ರಸ್ತುತವಾಗಿದ್ದವು. ಈ ಹದಿನೇಳೂ ಸೂತ್ರಗಳನ್ನು ಇನ್ನು ಹತ್ತು ವರ್ಷಗಳಲ್ಲಿ (2030 ವೇಳೆಗೆ) ಜಾರಿಗೆ ತರುತ್ತೇವೆ ಎಂದು ಎಲ್ಲ ದೇಶಗಳೂ ಪ್ರತಿಜ್ಞಾಬದ್ಧವಾಗಿವೆ. ತಾವು ಇಂತಿಷ್ಟನ್ನು ಸಾಧಿಸಿದ್ದೇವೆ ಎಂದು ವರ್ಷವರ್ಷವೂ ಎಲ್ಲ ದೇಶಗಳೂ ವಿಶ್ವಸಂಸ್ಥೆಗೆ ವರದಿ ಒಪ್ಪಿಸುತ್ತಿವೆ. ಆ ಎಲ್ಲ ಸೂತ್ರಗಳನ್ನೂ ಪ್ರಪಂಚದ ಎಲ್ಲ ದೇಶಗಳೂ ಜಾರಿಗೆ ತಂದರೆ ಇಂದಿನ ಬಿಸಿಪ್ರಳಯದ ಪ್ರಕೋಪ ಸಾಕಷ್ಟು ಕಡಿಮೆಯಾಗುವ ಸಾಧ್ಯತೆಯಿದೆ. ಆದರೆ ಅದು ಸುಲಭದ ಮಾರ್ಗವಂತೂ ಅಲ್ಲ. ಉದಾಹರಣೆಗೆ (ಸೂತ್ರ 7ರ ಪ್ರಕಾರ) ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ಶುದ್ಧ ಶಕ್ತಿಮೂಲಗಳು ಲಭಿಸಬೇಕು. ಅಂದರೆ, ಪೆಟ್ರೋಲು, ಡೀಸೆಲ್ ಮೇಲಿನ ಅವಲಂಬನೆ ಸ್ಥಗಿತಗೊಳ್ಳಬೇಕು. ಸಾಧ್ಯವಾಗುವ ಮಾತೆ ಅದು? ಸೂತ್ರ 11ರ ಪ್ರಕಾರ ಎಲ್ಲ ನಗರ, ಪಟ್ಟಣ, ಸಮುದಾಯಗಳೂ ಸುಸ್ಥಿರತೆಯ ಆಧಾರದ ಮೇಲೆ ರೂಪುಗೊಳ್ಳಬೇಕು. ಅಂದರೆ, ಹೊರಗಿನಿಂದ ಖನಿಜ, ಇಂಧನ, ನೀರು, ಮರಮುಟ್ಟುಗಳನ್ನು ತರಿಸಕೂಡದು. ಪಶ್ಚಿಮಘಟ್ಟಗಳ ಕಲ್ಲು, ಮರಳು, ದಿಮ್ಮಿಗಳನ್ನು ಶಿವಮೊಗ್ಗಕ್ಕೂ ತರಕೂಡದು. ನಗರವಾಸಿಗಳು ತಂತಮ್ಮ ತ್ಯಾಜ್ಯಗಳನ್ನೇ ಮರುಸಂಸ್ಕರಣೆ ಮಾಡಿಕೊಂಡು ಬದುಕಲು ಕಲಿಯಬೇಕು. ಗಟಾರದ ನೀರನ್ನು ಚರಂಡಿ ಅನಿಲದಿಂದಲೋ ಸೌರಶಕ್ತಿಯಿಂದಲೋ ಶುದ್ಧೀಕರಿಸಿ ಬಳಸಬೇಕು. ಪಶ್ಚಿಮಘಟ್ಟಗಳ ಜಲವಿದ್ಯುತ್ತನ್ನು ಬಳಸಕೂಡದು.

ಈಗ ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಅವೆಲ್ಲವನ್ನೂ ಸಾಧಿಸಬಹುದು ನಿಜ. ಪ್ರತಿಯೊಂದು ಕುಟುಂಬವೂ ತ್ಯಾಜ್ಯ ಅನಿಲ, ತಿಪ್ಪೆಯಲ್ಲಿನ ಮೀಥೇನ್ ಮತ್ತು ಬಿಸಿಲಿನಿಂದ, ಗಾಳಿಯಿಂದ ಶಕ್ತಿಯನ್ನು ಉತ್ಪಾದಿಸಬಹುದಾದ ತಂತ್ರಜ್ಞಾನ ಸಿದ್ಧವಿದೆ. ವಿಜ್ಞಾನಿಗಳಿಗೆ ಸೂಕ್ತ ಪ್ರೇರಣೆ ನೀಡಿದರೆ ಕೃಷಿ ತ್ಯಾಜ್ಯಗಳಿಂದ, ಗೋ ಅನಿಲದಿಂದ ಅವರು ಜಲಜನಕ ಅನಿಲವನ್ನೂ ಉತ್ಪಾದಿಸಬಹುದು. ಆದರೆ ಅದಕ್ಕೆ ಬೇಕಾದ ರಾಜಕೀಯ ಇಚ್ಛಾ–ಶಕ್ತಿಯನ್ನು ಉತ್ಪಾದಿಸುವ ಉಪಾಯ ಎಲ್ಲಿದೆ? ಚಂದ್ರನ ಮೇಲೆ ಗಾಡಿ ಓಡಿಸಿ ವಿದೇಶೀ ಪರಾಕು ಪಡೆಯುವತ್ತಲೇ ನಮ್ಮ ಮುತ್ಸದ್ದಿಗಳ ಆದ್ಯತೆ ಇರುವಾಗ ಗ್ರಾಮಮಟ್ಟದ ಸುಧಾರಣೆಯನ್ನು ಸಾಧಿಸಬೇಕೆಂಬ ಇಚ್ಛಾಶಕ್ತಿಯನ್ನು ಎಲ್ಲಿಂದ ತರೋಣ?

ವಾಯುಮಂಡಲದ ಪರಿಸ್ಥಿತಿ ಇದೇ ಪ್ರಮಾಣದಲ್ಲಿ ಹದಗೆಡುತ್ತ ಹೋದರೆ ಇನ್ನು ಮೂವತ್ತು ವರ್ಷಗಳಲ್ಲಿ ಆ ಇಚ್ಛಾ–ಶಕ್ತಿ ತಂತಾನೇ ಬಂದೀತು ನಿಜ. 2012ರಲ್ಲಿ ವಿಶ್ವಸಂಸ್ಥೆ ಸುಸ್ಥಿರ ಅಭಿವೃದ್ಧಿಯ ಸೂತ್ರಗಳನ್ನು ಹೆಣೆಯಲೆಂದು ಶೃಂಗಸಭೆಯನ್ನು ಆಯೋಜಿಸುತ್ತಿದ್ದಾಗ ಇತ್ತ ಪೋರ್‌ಬಂದರಿನಲ್ಲಿ ಗಾಂಧೀಜಿಯವರ 143ನೇ ಜನ್ಮತಿಥಿಯ ಸಂದರ್ಭದಲ್ಲಿ ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ದಾಮೋದರದಾಸ್ ಮೋದಿಯವರು ಒಂದು ಮಾತನ್ನು ಹೇಳಿದ್ದರು: 'ಗಾಂಧೀಜಿಯವರ ಆದರ್ಶಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಕಾರ್ಯರೂಪಕ್ಕೆ ತಂದರೆ, ಅದರಿಂದ ಹವಾಮಾನ ಸಮತೋಲವಷ್ಟೇ ಅಲ್ಲ, ಜಗತ್ತಿನ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ' ಎಂದಿದ್ದರು. ಅವರೇ ಕಳೆದ ಎಂಟು ವರ್ಷಗಳಿಂದ

ದೇಶದ ಚುಕ್ಕಾಣಿ ಹಿಡಿದಿದ್ದಾರೆ. ಥಳಕು ಅಭಿವೃದ್ಧಿಯ ಬುಲ್‌ಡೋಝರ್‌ಗಳನ್ನು ಎಲ್ಲೆಂದರಲ್ಲಿ ಓಡಿಸುತ್ತಿದ್ದಾರೆ. ಬುಲೆಟ್ ಟ್ರೇನ್ ಓಡಿಸಲು ಟೊಂಕ ಕಟ್ಟಿದ್ದಾರೆ. ಚುನಾವಣೆಗೆ ತುಸು ಮುಂಚೆ ನಮ್ಮದೇ ಹಳೇ ಉಪಗ್ರಹವನ್ನು ನಮ್ಮದೇ ಕ್ಷಿಪಣಿಯನ್ನು ಬಳಸಿ ಹೊಡೆದುರುಳಿಸಿದ್ದಾಗಿ ಹೇಳಿ ಬೀಗಿದ್ದಾರೆ. ಜಗತ್ತಿನ ಯಾವ ದೇಶದ ಕಂಪನಿಗಳಾದರೂ ನಮ್ಮ ದೇಶದ ಕಲ್ಲಿದ್ದಲ ಗಣಿಗಾರಿಕೆ ಮಾಡಲು ಅವಕಾಶದ ಬಾಗಿಲು ತೆರೆದಿದ್ದಾರೆ. ಗ್ರಾಮಮಟ್ಟದಲ್ಲಿ ಬದಲೀ ಇಂಧನ ವ್ಯವಸ್ಥೆಯನ್ನು ಬಲಗೊಳಿಸುವ ಬದಲು ಅದಾನಿಯವರಿಗೆ ಸೌರಶಕ್ತಿ, ಗಾಳಿಶಕ್ತಿಯಿಂದ ಗ್ರೀನ್ ಎನರ್ಜಿ ಉತ್ಪಾದನೆಗೆ ಮುಕ್ತ ಅವಕಾಶ ನೀಡಿದ್ದಾರೆ. ಅರಣ್ಯ ಮತ್ತು ಜೀವಿ ವೈವಿಧ್ಯದ ರಕ್ಷಣೆಯ ಕಾನೂನುಗಳನ್ನು ಸಡಿಲಗೊಳಿಸಿ ಬಿಸಿನೆಸ್ ಕಂಪನಿಗಳ ಮಾರ್ಗವನ್ನು ಸುಗಮಗೊಳಿಸಿದ್ದಾರೆ. ಜಿ20 ಸಮ್ಮೇಳನದಲ್ಲಿ ಬದಲೀ ಇಂಧನಗಳ ಬಗ್ಗೆ ಜಾಗತಿಕ ಜೈವಿಕ ಇಂಧನ ಒಕ್ಕೂಟವನ್ನು ರಚಿಸಿದ ಮರುದಿನವೇ (ಸೆಪ್ಟಂಬರ್ 11, 2023) ಸೌದಿ ಅರೇಬಿಯಾ ನೆರವಿನಲ್ಲಿ ನಮ್ಮ ಕರಾವಳಿಯುದ್ದಕ್ಕೂ ಅತ್ಯಾಧುನಿಕ ಬಂದರುಗಳನ್ನೂ ತೈಲ ಸಂಗ್ರಹಾಗಾರಗಳನ್ನು ಸ್ಥಾಪಿಸಲಿಕ್ಕೂ ಭಾರತ ಸರಕಾರ ಒಪ್ಪಂದ ಮಾಡಿಕೊಂಡಿದೆ. ಭಾರತವನ್ನು 'ವಿಶ್ವಮಿತ್ರ' ಎಂದು ಭಾರತವೇ ಘೋಷಿಸಿಕೊಂಡಿದೆ.

ರಾಷ್ಟ್ರಮಟ್ಟದ ರಾಜಕೀಯದ ಥಕಥೈ ಹೇಗೂ ಇರಲಿ, ಗ್ರಾಮಮಟ್ಟದಲ್ಲಿ ಪ್ರಜಾತಂತ್ರದ ಅಸಲೀ ಶಕ್ತಿ ಪ್ರಕಟವಾದರೆ ಬರುತ್ತಿರುವ ಬಿಸಿಪ್ರಳಯವನ್ನು ತುಸುಮಟ್ಟಿಗೆ ಎದುರಿಸಲು ಸಾಧ್ಯವಾದೀತು. ಆದರೆ ಗ್ರಾಮಮಟ್ಟದ ಪ್ರಜಾತಂತ್ರ ಬಲಿಷ್ಠಗೊಂಡೀತೆ? ಬೆಂಗಳೂರಿಗೆ ಶರಾವತಿಯ ನೀರನ್ನು ಸಾಗಿಸಿ ತರುವ ಸರಕಾರಿ ಯೋಜನೆಗೆ ಸಿಕ್ಕ ಅನನ್ಯ ಪ್ರತಿರೋಧದಲ್ಲಿ ಅಂಥದ್ದೊಂದು ಸಣ್ಣ ಸಾಧ್ಯತೆ ಕಾಣಿಸಿತ್ತು. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಒಕ್ಕೊರಲಿನಿಂದ ಜನರು ದನಿಯೆತ್ತಿದ್ದರು. ನಿತ್ಯದ ಬದುಕಿನ ಇತರ ಮಜಲುಗಳಲ್ಲೂ ಗ್ರಾಮೀಣ ಜನರು ಅಷ್ಟೇ ಒಗ್ಗಟ್ಟಾಗಿದ್ದರೆ, 'ನಮ್ಮ ಬದುಕು–ಭವಿಷ್ಯವನ್ನು ನಾವೇ ನಿರ್ಧರಿಸುತ್ತೇವೆ' ಎಂದು ಟೊಂಕ ಕಟ್ಟಿದರೆ, ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಕೃತಿಯಲ್ಲಿ ತೋರಿಸಲು ಸಜ್ಜಾದರೆ ಈಗಿನ ಬರಗಾಲವನ್ನಷ್ಟೇ ಅಲ್ಲ, ಮುಂದೆ ಬರಬಹುದಾದ ಜಲಪ್ರಳಯವನ್ನೂ ಎದುರಿಸಲು ಸಾಧ್ಯವಿದೆ. ಗ್ರಾಮಮಟ್ಟದ ಪ್ರಜೆಗಳಿಗೆ ಬೇಕಿದ್ದ ಬಹುತೇಕ ಎಲ್ಲ ಭೋಗವಸ್ತುಗಳನ್ನೂ (ಸಾಬೂನು, ಶಾಂಪೂ, ಶೇವಿಂಗ್ ಕ್ರೀಮ್‌ನಿಂದ ಹಿಡಿದು ಖಾದ್ಯತೈಲ ಉತ್ಪಾದನೆ, ಪೇಂಟ್, ಛತ್ರಿ, ಬಟ್ಟೆಬರೆ, ಪಾದರಕ್ಷೆ ಟೂತ್‌ಪೇಸ್ಟ್ ವರೆಗಿನ ವಸ್ತುಗಳನ್ನು) ತಾಲ್ಲೂಕುಮಟ್ಟದಲ್ಲಿ ಉತ್ಪಾದಿಸಲು ಸಾಧ್ಯವಿದೆ. ಅಂಥ ತಂತ್ರಜ್ಞಾನ ಇಂದು ಕೈಗೆಟಕುವಷ್ಟಿದೆ. ಅಷ್ಟೇಕೆ, ನಗರಗಳಿಗೆ ಬೇಕಾದ ಇಂಧನತೈಲವನ್ನೂ, ವಿದ್ಯುತ್ ಶಕ್ತಿ ಮೂಲಗಳನ್ನೂ ಒದಗಿಸಲು ಸಾಧ್ಯವಿದೆ. ಗಾಂಧೀಜಿ ಹೇಳಿದ ಗ್ರಾಮಸ್ವರಾಜ್ಯದ ಸ್ಥೂಲ ಕಲ್ಪನೆಗಳನ್ನು ಸಾಕಾರಗೊಳಿಸಲು ಈಗಲೂ ಸಾಧ್ಯವಿದೆ. ಬಿಸಿಪ್ರಳಯದ ಬವಣೆಗಳನ್ನು ಸಹಿಸಿಕೊಳ್ಳುವಂತೆ ಮಳೆನೀರ ಸಂಗ್ರಹ, ನೆರೆ ನಿಯಂತ್ರಣ, ವನವರ್ಧನೆ, ಜೈವಿಕ ತ್ಯಾಜ್ಯ ಸಂಸ್ಕರಣೆಯಂಥ ಕ್ರಮಗಳನ್ನು ಅನುಸರಿಸಿ ಅದರಲ್ಲೂ ಆರ್ಥಿಕ ಬಲವರ್ಧನೆಯ ಕ್ರಮಗಳನ್ನು ರೂಢಿಗೆ ತರಲು ಕಾಲ ಪಕ್ವವಾಗಿದೆ.

'ಶುಚಿತ್ವವೇ ದೇವತ್ವಕ್ಕೆ ಸಮಾನ' ಎಂದು ಘೋಷಿಸಿ ಕೈಯಾರೆ ಕಕ್ಕಸನ್ನು ತೊಳೆದ ಮಹಾನುಭಾವನನ್ನು ನಾವು ರಾಷ್ಟ್ರ ಪಿತ ಎಂದು ಘೋಷಿಸಿದ್ದೇವೆ. ನಾವು 'ಸ್ವಚ್ಛಭಾರತ್ ಅಭಿಯಾನ'ಕ್ಕೆ ಗಾಂಧೀಜಿಯವರ ಕನ್ನಡಕವನ್ನೇ ಲಾಂಛನವನ್ನಾಗಿ ಮಾಡಿಕೊಂಡಿದ್ದೇವೆ. ಆದರೆ ಭಾರತ ಸ್ವಚ್ಛವಾಗಿದೆಯೆ? ಬೀದಿಯ ಕಸವನ್ನು ಊರಾಚೆ ಗುಡ್ಡೆ ಹಾಕುತ್ತಿದ್ದೇವೆ. ಅದೇ ತಿಪ್ಪೆ ರಾಶಿಯಿಂದ ಮೀಥೇನ್ ಉತ್ಪಾದನೆ ಮಾಡಬಹುದಿತ್ತು. ಫಿಲಿಪ್ಪೀನ್ಸ್ ದೇಶದಲ್ಲಿ ಇಪ್ಪತ್ತು ವರ್ಷಗಳ ಹಿಂದೆಯೇ ಅಂಥ ಮಾದರಿಗಳು ಅನುಷ್ಠಾನಕ್ಕೆ ಬಂದಿವೆ. ಮಂಗಳ ಗ್ರಹಕ್ಕೆ ಪ್ರದಕ್ಷಿಣೆ ಹಾಕಿ ಅಲ್ಲಿರಬಹುದಾದ ಮೀಥೇನ್ ಅನಿಲದ ಅಧ್ಯಯನ ಮಾಡಿದ ನಮ್ಮ ವಿಜ್ಞಾನಿಗಳು ಸಲೀಸಾಗಿ ನಮ್ಮದೇ ಅಂಗಳದ ಕೊಳಚೆರಾಶಿಯಲ್ಲಿ ಹೊಮ್ಮುವ ಮೀಥೇನ್ ನಿಂದ ಅಡುಗೆ ಅನಿಲವನ್ನೂ ವಿದ್ಯುತ್ ಶಕ್ತಿ ಯನ್ನೂ ಉತ್ಪಾದಿಸಲು ಸಾಧ್ಯವಿತ್ತು. ಆದರೆ ನಮ್ಮದೇ ಅವಜ್ಞೆಯಿಂದಾಗಿ ಆ ಅನಿಲ ವಾತಾವರಣಕ್ಕೆ ಸೇರಿ ಭೂಮಿಯನ್ನು ಇನ್ನಷ್ಟು ಬಿಸಿ ಮಾಡುತ್ತಿದೆ.

ಪರಿಸರ ವಿಜ್ಞಾನಿ ಮಾಧವ ಗಾಡಗೀಳರ ನೇತೃತ್ವದ ಸಮಿತಿಯ ವರದಿಯಲ್ಲಿ ಗಾಂಧೀಜಿಯವರ ಆಶಯದ, ಸುಸ್ಥಿರ ಸೂತ್ರಗಳ ಬಹುಪಾಲು ಪಡಿನೆಳಲನ್ನು ನಾವು ಕಾಣಬಹುದು. ಪಶ್ಚಿಮಘಟ್ಟಗಳ ನಿವಾಸಿಗಳಿಗೆ ಅದರಲ್ಲಿ ಒಂದು ಕಿವಿಮಾತನ್ನು ಹೇಳಲಾಗಿದೆ: 'ನಿಮ್ಮ ಸುತ್ತಲಿನ ನಿಸರ್ಗವನ್ನು ನಿಭಾಯಿಸಲು ನೀವೇ ಸಮರ್ಥರು. ನಗರದವರು ಒಡ್ಡುವ ಆಮಿಷಗಳಿಗೆ ಬಲಿಯಾಗಬೇಡಿ; ನಗರದವರ ಆಶೋತ್ತರಗಳ ಪೂರೈಕೆಗೆ ನಿಮ್ಮ ಪ್ರಕೃತಿಯನ್ನು, ನಿಮ್ಮ ಭವಿಷ್ಯವನ್ನು ಬಲಿಹಾಕಬೇಡಿ' ಎಂಬರ್ಥದ ಮಾತುಗಳು, ಆಶಯಗಳು ಆ ವರದಿಯಲ್ಲಿವೆ. ಅದು ಕೇವಲ ಪಶ್ಚಿಮಘಟ್ಟದ ನಿವಾಸಿಗಳಿಗಷ್ಟೇ ಅಲ್ಲ, ಇಡೀ ಗ್ರಾಮಭಾರತಕ್ಕೆ ಅನ್ವಯ ಆಗುತ್ತದೆ. ಆದರೆ ಗಾಂಧೀಜಿಯವರ ತತ್ವಾದರ್ಶಗಳನ್ನು ಗ್ರಾಮೀಣ ಪರಿಸರದಿಂದ ದೂರ ಸರಿಸಿದಷ್ಟೇ ಸಲೀಸಾಗಿ ಗಾಡಗೀಳ ವರದಿಯನ್ನೂ ನಾವು ಮೂಲೆಗೆ ತಳ್ಳಿದ್ದೇವಲ್ಲ?

ಬಿಸಿಪ್ರಳಯದ ಬೇಗೆ ಹೆಚ್ಚುತ್ತ ಹೋಗಲಿದೆ ಎಂದು ಎಲ್ಲ ವೈಜ್ಞಾನಿಕ ವರದಿಗಳೂ ಹೇಳುತ್ತಿವೆ. ಭಾರತದ ಮಟ್ಟಿಗೆ ಆ ಬೇಗೆಯ ಚುರುಕು ಹೆಚ್ಚುತ್ತ ಹೋದಂತೆಲ್ಲ ಗ್ರಾಮೀಣ ಜನರು ನಗರಗಳಿಗೆ ವಲಸೆ ಬರುವ ಪ್ರಮಾಣವೂ ಹೆಚ್ಚುತ್ತಿದೆ. ವಿಪರ್ಯಾಸ ಏನೆಂದರೆ ಬಿಸಿಪ್ರಳಯವನ್ನು ತಡೆಗಟ್ಟಬಲ್ಲ ಉಪಾಯಗಳೆಲ್ಲ ಗ್ರಾಮೀಣ ಭಾಗದಲ್ಲಿ, ಗಾಂಧೀಜಿಯವರ ಕನಸಿನ ಗ್ರಾಮಭಾರತದಲ್ಲೇ ಇದೆ. ಅದರತ್ತ ಕಣ್ಣೋಟ ಹರಿಸಬೇಕಾದವರು ಪಶ್ಚಿಮದ ಮಾದರಿಯ ಅಭಿವೃದ್ಧಿಯ ಸೂತ್ರಗಳನ್ನೇ ಎಳೆದೆಳೆದು ತರುತ್ತಿದ್ದಾರೆ. 'ಎಲ್ಲರ ಆಸೆಗಳನ್ನೂ ಪೂರೈಸುವಷ್ಟು ಸಂಪತ್ತು ಪ್ರಕೃತಿಯಲ್ಲಿದೆ' ಎಂದು ಗಾಂಧೀಜಿ ಹೇಳಿದ್ದರು ನಿಜ. ಆದರೆ ನಾವು ಪ್ರಕೃತಿಯನ್ನು ಕಡೆಗಣಿಸಿ ನಗರಗಳನ್ನು ಕಟ್ಟುವಲ್ಲಿ ನಿರತರಾಗಿದ್ದೇವೆ. ತಾಪಮಾನ ಹೀಗೇ ಏರುತ್ತ ಹೋದರೆ ಪ್ರಾಯಶಃ ಇನ್ನು 15–20 ವರ್ಷಗಳಲ್ಲಿ ಎಲ್ಲರೂ ಅನಿವಾರ್ಯವಾಗಿ ಗ್ರಾಮವಾಸ್ತವ್ಯಕ್ಕೆ ಮರಳಬೇಕಾಗುತ್ತದೆ.

ಗಾಂಧೀಜಿಯವರ ಕನಸು ಸಾಕಾರಗೊಳ್ಳಲು ಭೂಮಿ ಇನ್ನೆಷ್ಟು ಬಿಸಿ ಆಗಬೇಕೋ? ■



ಸತ್ತಿದ್ದಾರೆಂದುಕೊಂಡವರು ಎದುರು-ಬದುರು ಆದಾಗ !

– ದೇವನೂರು ಮಹಾದೇವ

("ಗ್ರಾಮಸ್ವರಾಜ್ : ಗಾಂಧಿ ಅಂಬೇಡ್ಕರ್ – ಒಂದು ಅನುಸಂಧಾನ", ಕಾರ್ಯಕ್ರಮದಲ್ಲಿ ದೇವನೂರು ಮಹಾದೇವರು ಆಡಿದ ಮಾತುಗಳ ಅಕ್ಷರ ರೂಪ. ಕೃಪೆ : 'ನಮ್ಮ ಬನವಾಸಿ' ಅಂತರ ಜಾಲತಾಣ)

' ಗ್ರಾಮಸ್ವರಾಜ್ : ಗಾಂಧಿ ಅಂಬೇಡ್ಕರ್ – ಒಂದು ಅನುಸಂಧಾನ ' ಈ ಚರ್ಚೆಗೆ ನೀವೂ ಬನ್ನಿ ಎಂದು ನನ್ನನ್ನು ಕರೆದಾಗ 'ಏನು ಜಗಳವನ್ನು ಸರಸ ಮಾಡಬೇಕು ಅಂತಿದ್ದಿರಾ ಹೇಗೆ?' ಎಂದು ತಮಾಷೆ ಮಾಡಿದೆ. ಆ ಇಬ್ಬರ ನಡುವೆ ಜಗಳ ಇಂದೂ ನಡೆಯುತ್ತಿದೆ. ಅದು ತೀವ್ರವಾಗೂ ಇದೆ. ಇದರ ಅರ್ಥ ಆ ಇಬ್ಬರೂ ಇನ್ನೂ ಸತ್ತಿಲ್ಲ ಅಂತಲೇ ಅರ್ಥ. ಇಂದೂ ಅವರು ಹೆಚ್ಚು ಜೀವಂತವಾಗಿದ್ದಾರೆ ಅಂತಲೂ ಅರ್ಥ.

ಇದನ್ನು ನಾನು ಒಂದು ಶುಭಸೂಚನೆಯಾಗಿ ನೋಡುತ್ತೇನೆ. ಜಾಗತೀಕರಣದ ಅಟ್ಟಹಾಸದಲ್ಲಿ ವ್ಯಾಪಾರ ಕುಣಿದು ಕುಪ್ಪಳಿಸುತ್ತಾ ಈ ವ್ಯಾಪಾರವೇ ಆಳ್ವಿಕೆಯಾಗಿ ಎಲ್ಲಾ ಸೈದ್ಧಾಂತಿಕ ಆಲೋಚನೆಗಳೂ, ಹೋರಾಟಗಳೂ ಕಣ್ಮರೆಯಾಗುತ್ತಿದೆ ಎಂದು ಎಲ್ಲರೂ ನಂಬುತ್ತಿರುವ ಈ ದುಸ್ಥಿತಿಯಲ್ಲಿ ಈ ಇಬ್ಬರ ಜೀವಂತಿಕೆಯು ಮುಳುಗುವವರಿಗೆ ಒಂದು ಹುಲ್ಲುಕಡ್ಡಿ ಸಿಕ್ಕಂತೆ ನನಗೆ ಕಾಣಿಸುತ್ತದೆ.

ಇವರ ಜಗಳಕ್ಕೆ ಹೋಗುವ ಮುನ್ನ ಈ ಜಗಳಾಡುವವರ ನಡುವೆ ಆಗಾಗ ಮಿಂಚಿನಂತೆ ಕಾಣುವ ಪರಸ್ಪರ ಗೌರವ, ನಂಬಿಕೆ, ಮೆಚ್ಚಿಗೆಗಳ ಒಂದೆರಡು ಉದಾಹರಣೆಗಳನ್ನು ಕೊಡುವೆ. ನಂತರ ಜಗಳಕ್ಕೆ ಖಂಡಿತ ಹೋಗುವ.

ಶ್ರೀ ಭಗವಾನ್ದಾಸ್ ಅವರು ಸಂಪಾದಿಸಿರುವ 'ದಸ್ ಸ್ಪೋಕ್ ಅಂಬೇಡ್ಕರ್' ಮೊದಲ ಸಂಪುಟದಲ್ಲಿನ ಉಲ್ಲೇಖದಂತೆ ಅಂಬೇಡ್ಕರ್ ಅವರು ಗಾಂಧಿಯವರ ಬಗ್ಗೆ ಪೂನಾ ಒಪ್ಪಂದದ ನಂತರ ಕೊಟ್ಟ ಹೇಳಿಕೆಯಲ್ಲಿ 'ನನ್ನ ಮತ್ತು ಆತ (ಗಾಂಧಿ)ನ ಮಧ್ಯೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಆತನನ್ನು ಭೇಟಿ ಮಾಡಿದಾಗ ತಿಳಿದು ನನಗೆ ಆಶ್ಚರ್ಯವಾಗಿದೆ, ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ. ಇದನ್ನು ಯಾವ ರೀತಿ ಅರ್ಥ ಮಾಡಿಕೊಳ್ಳೋಣ? ಹಾಗೇ ಗಾಂಧೀ 1946ರಲ್ಲಿ ಗೋರಾ ಅವರ ಅಳಿಯನಿಗೆ 'ನೀನು ಅಂಬೇಡ್ಕರ್‌ರಂತೆ ಆಗಬೇಕು. ನೀನು ಅಸ್ಪೃಶ್ಯತೆಯ ಹಾಗೂ ಜಾತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆ ತೆತ್ತಾದರೂ ಸರಿಯೇ ಅಸ್ಪೃಶ್ಯತೆಯು ಹೋಗಲೇಬೇಕು' ಎಂದು ಹೇಳುತ್ತಾರೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋಣ? 'ಸಂಸ್ಕೃತಿ ಕಥನ'ದಲ್ಲಿ ಡಿ.ಆರ್. ನಾಗರಾಜ್ ದಾಖಲಿಸಿರುವಂತೆ ಎಲ್ಲರೂ ಗಾಂಧಿಗೆ ಮಹಾತ್ಮ ಎನ್ನುತ್ತಿದ್ದಾಗ ಆ ಮಹಾತ್ಮನೇ ಅಂಬೇಡ್ಕರರನ್ನು ಮಹಾತ್ಮ ಅನ್ನುತ್ತಾರೆ. ಇದೇನು? ಇದೆಲ್ಲವೂ, ಈ ಅವರ ಜಗಳವೂ ಆ ಮಹಾತ್ಮರಿಬ್ಬರ ಕೊಡುಕೊಳ್ಳುವಿಕೆಯೇ?

ಹೀಗಿದ್ದೂ ಯಾಕೆ ವಿರಸ ಎಂದು ನೋಡಿದರೆ – ಗಾಂಧಿ ಹುಟ್ಟುತ್ತ ಸನಾತನಿ, ಕರ್ಮಠ. ನಡೆಯುತ್ತಾ, ಎಡವುತ್ತಾ, ಬೆಳೆಯುತ್ತಾ ಪ್ರಗತಿಪರ. ಭಾರತವನ್ನು ತಮ್ಮ

ಕಪಿಮುಷ್ಠಿಯಲ್ಲಿಟ್ಟುಕೊಂಡಿರುವ ಆ ಸನಾತನಿಗಳೂ, ಕರ್ಮಠರೂ ಕೂಡ ತನ್ನೊಡನೆ ಹೆಜ್ಜೆ ಇಡುತ್ತಿರುವವರೆ ಇಲ್ಲವೆ ಎಂಬುದನ್ನು ಸದಾ ಕಡೆಗಣ್ಣಿನಿಂದಲೇ ಗಮನಿಸುತ್ತ ಅವರನ್ನೂ ಜೊತೆಜೊತೆಗೇ ಎಳೆದುಕೊಂಡು ಹೆಜ್ಜೆ ಇಡುವಾತ ಗಾಂಧಿ. ಹಾಗೇ ಇತಿಹಾಸಕಾರ ಎಸ್.ಚಂದ್ರಶೇಖರ್ 'ಗಾಂಧೀಜಿಯ ಕಾರ್ಯ, ರಾಜಕೀಯದಿಂದ ಸಾಮಾಜಿಕದತ್ತ ಇಳಿದು ಬಂದರೆ, ಅಂಬೇಡ್ಕರ್ ಅವರು ಸಾಮಾಜಿಕ ಕಾರ್ಯದಿಂದ ರಾಜಕೀಯ ಕಣಕ್ಕೆ ಏರಿದವರು' ಎಂದು ಹೇಳುತ್ತಾರೆ. ಈ ಬಗೆಯ ಚಲನೆ ಕಾರಣವಾಗಿ ಗಾಂಧಿ ಅಂಬೇಡ್ಕರ್ ನಡುವೆ ಘರ್ಷಣೆ ಉಲ್ಬಣಗೊಂಡಿತೆ? ಜೊತೆಗೆ ಇಬ್ಬರೂ ಸಮಕಾಲೀನರು. ಆಯಾಯ ದಿನಕ್ಕೆ ಪ್ರತಿಕ್ರಿಯಿಸಲೇಬೇಕಿತ್ತು. ಇದರೊಡನೆ ದುಂಡುಮೇಜಿನ ಪರಿಷತ್ನಲ್ಲಿ ಗಾಂಧಿ ಕ್ಷುದ್ರವಾಗಿ ನಡೆದುಕೊಂಡು ಅಂಬೇಡ್ಕರ್ಗೆ ಗಾಯಮಾಡಿಬಿಟ್ಟರು. ಈ ಎಲ್ಲಾ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರ ಪ್ರತಿಕ್ರಿಯೆಗಳನ್ನು ಅರ್ಥಮಾಡಿಕೊಳ್ಳಬೇಕೇ ಹೊರತು; ಅಂದರೆ ಆಯಾ ಕಾಲದ ಪ್ರತಿಕ್ರಿಯೆಗಳನ್ನು ಆಯಾ ಕಾಲದ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅವರನ್ನು ಒಟ್ಟಾಗಿ ಅರ್ಥಮಾಡಿಕೊಳ್ಳಬೇಕೇ ಹೊರತು ಅವರ ಸಾಂದರ್ಭಿಕ ಅಭಿಪ್ರಾಯಗಳನ್ನು ಕಟ್ಟುಗಾಜು ಹಾಕಿಸಿ ಸ್ಥಿರಗೊಳಿಸಿ ನೇಣಿಗೇರಿಸಬಾರದು. ಹಾಗೇ ಗಾಂಧಿಯನ್ನೂ ಕೂಡ.

ಅವರ ಜಗಳ ಜಟಾಪಟಿಗೆ ಗಾಂಧಿ ಮತ್ತು ಅಂಬೇಡ್ಕರರ ಗ್ರಹಿಕೆಗೆ ಭಾರತದ ಹಳ್ಳಿಯು ಹೇಗೆ ಕಾಣುತಿತ್ತು ಎಂಬುದೂ ಮುಖ್ಯವಾಗುತ್ತದೆ. ಗಾಂಧಿ ಹಳ್ಳಿಯನ್ನು ಸ್ವಯಂಭೂ ಸ್ವರ್ಗವಾಗಿಸುವ ಕನಸು ಕಂಡವರು. ಆದರೆ ಅಂಬೇಡ್ಕರ್ ಹಳ್ಳಿಗಳನ್ನು ನರಕದ ಕೂಪ ಅಂದುಕೊಂಡಿದ್ದರು. ಹಳ್ಳಿಯೇ ಭಾರತಕ್ಕೆ ಮೋಕ್ಷ ಎಂದು ಗಾಂಧಿ ಅಂದುಕೊಂಡಿದ್ದರೆ, ಅಂಬೇಡ್ಕರ್ ಭಾರತದಿಂದಲೇ ಹಳ್ಳಿಯನ್ನು ಮೋಕ್ಷ ಮಾಡಬೇಕು ಅಂದುಕೊಂಡಿದ್ದರು. 'ಒಬ್ಬರಿಗೆ ರಮ್ಯ ಕನಸಾದರೆ ಇನ್ನೊಬ್ಬರಿಗೆ ಕಟು ವಾಸ್ತವವಾಗಿತ್ತು' ಆಗ ವಾಸ್ತವವೂ ಹಾಗೆ ಇತ್ತು. ಹಳ್ಳಿಗಳ ತಳಸಮುದಾಯಗಳು ಉಸಿರಾಡದೆ ಇದ್ದವು. ಆಗ ಅಂಬೇಡ್ಕರರಿಗೆ ಹಳ್ಳಿ ದುಃಸ್ವಪ್ನದಂತೆ ಕಂಡಿದ್ದರೆ ಅದರಲ್ಲೇನು ಆಶ್ಚರ್ಯ? ಆದರೆ ಈಗ? ಈಗ ಯಾವುದೇ ಒಂದು ಹಳ್ಳಿ ನೋಡಿದರೆ, ಮಂಡಲ ಪಂಚಾಯ್ತಿ ವ್ಯವಸ್ಥೆ ಬಂದ ಮೇಲೆ ಎಲ್ಲಾ ಜಾತಿಗಳ ಒಳಗೂ ನಾಕಾರು ಪಕ್ಷಗಳಿಗೆ ಅನುಗುಣವಾಗಿ ನಾಕಾರು ಗುಂಪುಗಳಾಗಿವೆ. ಇದು ಪಕ್ಷ ಸ್ಪರ್ಧೆ ಕಾರಣವಾಗಿ ತಾತ್ಕಾಲಿಕ ನಿಜ. ಈ ಕ್ರಿಯೆಯೊಳಗೆ ಜಾತಿಬಿಟ್ಟ ಚಲನೆಯೂ ಸ್ವಲ್ಪವಾದರೂ ಇದೆ.ಇದನ್ನೂ ನಾವು ಗಮನಿಸಬೇಕು. ಜೊತೆಗೆ ಮಂಡಲ ಪಂಚಾಯ್ತಿ ಅಧಿಕಾರ ಸ್ಥಾನಮಾನಗಳಿಗೆ ಮೀಸಲಾತಿ ಬಂದು ನಮ್ಮೂರಲ್ಲೇ ದಲಿತ ಹೆಣ್ಣುಮಗಳೊಬ್ಬಳು ಅಧ್ಯಕ್ಷೆಯೂ ಆಗಿಬಿಟ್ಟಳು. ನನ್ನ ಬಾಲ್ಯದಲ್ಲಿ ಆ ಊರಿನ ಗ್ರಾಮಪಂಚಾಯ್ತಿ ಕಛೇರಿ ಒಳಕ್ಕೆ ಅಸ್ಪೃಶ್ಯರು ಹೋಗುವುದನ್ನು ಕಲ್ಪಿಸಿಕೊಳ್ಳಲೂ ಕಷ್ಟವಾಗುತ್ತಿದ್ದ ನನಗೆ ಇದಾಗಿರುವುದು ಕಣ್ಮುಂದೆ ಇದೆ. ಈ ಚಲನೆಯನ್ನೂ ನಾವು ಕಾಣಬೇಕಲ್ಲವೇ?

ಈ ಗೊಂದಲದೊಳಗೆ ನಾವು ಗಾಂಧಿಯವರ ಸಮಕಾಲೀನರಾಗಿ ನೋಡಿದರೆ, ಗಾಂಧಿಯವರ 1920ರ ಸುಮಾರಿನ ಅಭಿಪ್ರಾಯಗಳನ್ನು ಅಂದರೆ

- ಹಿಂದೂಧರ್ಮ ಜಾತಿಪದ್ಧತಿಯ ಆಧಾರದ ಮೇಲೆ ಸ್ಥಾಪಿತ
- ಸ್ವರಾಜ್ಯದ ಬೀಜಗಳು ಜಾತಿಪದ್ಧತಿಯಲ್ಲಿದೆ
- ಸಮಾಜದ ನಿಯಂತ್ರಣಕ್ಕೆ ಮತ್ತೊಂದು ಹೆಸರೇ ಜಾತಿ
- ರಾಷ್ಟ್ರೀಯ ಐಕ್ಯತೆಗೆ ಸಹಭೋಜನ, ಅಂತರ್ಜಾತಿ ವಿವಾಹಗಳ ಅಗತ್ಯವಿಲ್ಲ.
- ಜಾತಿಪದ್ಧತಿ ಸಮಾಜವೊಂದರ ಸ್ವಾಭಾವಿಕ ಶ್ರೇಣೀಕರಣ.
- ಜಾತಿಪದ್ಧತಿ ನಾಶಪಡಿಸಲು ಯತ್ನಿಸುವ ಯಾರದೇ ಪ್ರಯತ್ನಗಳಿಗೂ ನನ್ನ ವಿರೋಧವಿದೆ ಇತ್ಯಾದಿ ಇತ್ಯಾದಿ

1920ರ ಆಜುಬಾಜಿನ ಗಾಂಧಿ ಆಲೋಚನೆಗಳನ್ನು ನಾವೂ ಆ ಕಾಲಮಾನದಲ್ಲಿದ್ದರೆ ಅವನ್ನು ವಿರೋಧಿಸಬೇಕಾಗುತ್ತದೆ, ಪ್ರತಿಭಟಿಸಬೇಕಾಗುತ್ತದೆ, ಅಂಬೇಡ್ಕರ್ ಅವರಷ್ಟೇ ಉಗ್ರವಾಗಿ.

ಆದರೆ ಆ ಕರ್ಮಠ ಸನಾತನಿ ಗಾಂಧಿ ಅಲ್ಲೇ ಉಳಿಯುವುದಿಲ್ಲ. ದಿನದಿನವೂ ಸತ್ತು ದಿನದಿನವೂ ಹುಟ್ಟುತ್ತಾನೆ. 1928ರ ಹೊತ್ತಿಗೆ ಒಂದೇ ವರ್ಣದ ಉಪಜಾತಿಗಳ ಜತೆ ಅಂತರ್ವಿವಾಹವನ್ನು ಪ್ರೋತ್ಸಾಹಿಸುವ ಗಾಂಧಿ ಒಂದೊಂದೇ ಹೆಜ್ಜೆ ಇಡುತ್ತ 1946ರ ಹೊತ್ತಿಗೆ ಸವರ್ಣ ಹಿಂದು ಮತ್ತು ಹರಿಜನರ ನಡುವೆ ನಡೆಯುವ ಅಂತರ್ವಿವಾಹಗಳಿಗೆ ಮಾತ್ರವೇ ತಾವು ಹೋಗುವುದಾಗಿ ನೇಮ ಮಾಡಿಕೊಳ್ಳುತ್ತಾರೆ. ಮುಂದೆ ವಧುವರರಲ್ಲೊಬ್ಬರು ಹರಿಜನರಲ್ಲದ ಪಕ್ಷದಲ್ಲಿ ಸೇವಾಗ್ರಾಮದಲ್ಲಿ ಮದುವೆಯಾಗುವ ಅವಕಾಶವನ್ನೇ ನಿರಾಕರಿಸುತ್ತಾರೆ. ಇನ್ನೂ ಮುಂದೆ 'ನಾವು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದರೆ ಜಾತಿಯೂ ಹೋಗಲೇಬೇಕು' ಎಂಬಲ್ಲಿಗೆ ಬಂದು ನಿಲ್ಲುತ್ತಾರೆ. 1946ರ ಗಾಂಧಿ ಆಲೋಚನೆಗಳು 1920ರಲ್ಲಿಯೇ ಕಾಣಿಸಿಕೊಂಡಿದ್ದರೆ ಏನಾಗುತ್ತಿತ್ತು? ಭಾರತದ ಜಾತಿಧರ್ಮಗಳು ಆ ಗಾಂಧಿಯನ್ನೇ ಅಡ್ಡಡ್ಡ ನುಂಗಿ ನೊಣೆದುಬಿಡುತ್ತಿದ್ದವು. ಈ ಗಾಂಧೀಯೇ ಇರುತ್ತಿರಲಿಲ್ಲ. ಜೊತೆಗೆ ಭಾರತೀಯ ಜಾತಿ



ವರ್ಣ ಸಮಾಜ ಸ್ವಲ್ಪವೂ ಅಲುಗಾಡದೆ ತಲೆ ಎತ್ತುವ ಅಸ್ಪೃಶ್ಯರ ಬಲಿ ತೆಗೆದುಕೊಳ್ಳುವುದನ್ನೇ ಧರ್ಮವೆಂದುಕೊಳ್ಳುತ್ತಿತ್ತು. ಇದನ್ನೂ ನಾವು ಕಾಣಬೇಕು.

ಆದರೂ ಅಷ್ಟೊಂದು ಬೆಳವಣಿಗೆ ಒಂದೇ ಜೀವಿತದಲ್ಲಿ ಆಗುವ ಗಾಂಧಿಯು ವೃತ್ತಿ ಬಗ್ಗೆ ಮಾತ್ರ ಕೌಶಲ್ಯದ ಕಾರಣವಾಗಿ ವಂಶವೃತ್ತಿ ಹೇಳುತ್ತಿದ್ದುದನ್ನು ಕೊನೆಯವರೆಗೂ ಉಳಿಸಿಕೊಂಡರೇ ಹೇಗೆ ನನಗೆ ಗೊತ್ತಿಲ್ಲ. ಯಾವುದೇ ವೃತ್ತಿಯಾದರೂ ಜೀವನ ನಿರ್ವಹಣೆಗಾಗುವಷ್ಟು ಮಾತ್ರ ವೇತನ ಎಂಬ ಆಶಯ ಅವರಿಗಿದ್ದರೂ ಕೂಡ, ಅವರ ಈ ವಂಶವೃತ್ತಿ ಅಭಿಪ್ರಾಯವನ್ನು ಸಹಿಸಲು ಕಷ್ಟವಾಗುತ್ತದೆ. ಯಾಕೆಂದರೆ ವಂಶವೃತ್ತಿಯಲ್ಲಿ ಕೌಶಲ್ಯ ಹೆಚ್ಚಿದರೂ ಅದು ಯಾಂತ್ರಿಕವಾಗಿ ಕೊನೆಯಾಗುತ್ತದೆ. ಆದರೆ ವಂಶವೃತ್ತಿ ಬದಲಾವಣೆಯಲ್ಲಿ ಆ ವೃತ್ತಿಗೇನೆ ಸೃಜನಶೀಲತೆ ಉಂಟಾಗಿ ಹೊಸ ಸಾಧ್ಯತೆಗಳು ಹೆಚ್ಚುತ್ತವೆ. ಇದನ್ನು ಸದಾ ಚಲಿಸುವ ಗಾಂಧಿಗೆ ಮನದಟ್ಟು ಮಾಡಲು ನಾವು ಅವರೊಡನೆ ಒಂದು ಸಣ್ಣ ಜಗಳ ಮಾಡಬೇಕಾಗಿದೆ. ಅಥವಾ 1946ರಲ್ಲಿ 'ವರ್ಗರಹಿತವಾದ ಜಾತಿರಹಿತವಾದ ಇಂಡಿಯಾ ನಿರ್ಮಿಸಲು ತಾನು ಪ್ರಯತ್ನಿಸುತ್ತಿರುವುದಾಗಿ ಗಾಂಧಿ ಹೇಳುತ್ತಾ ಭಾರತದಲ್ಲಿ ಒಂದೇ ಜಾತಿಯು ಉಳಿದಿರುವಂತಹ ಮತ್ತು ಬ್ರಾಹ್ಮಣರು ಹರಿಜನರನ್ನು ಸಹಜವಾಗಿ ಮದುವೆಯಾಗುವಂತಹ ಸಮಾಜಕ್ಕಾಗಿ ಗಾಂಧಿ ಹಂಬಲಿಸುತ್ತ ಒಂದು ನುಡಿ, ನುಡಿಯುತ್ತಾರೆ 'ಅಸಮಾನತೆಯಿಂದ ಹಿಂಸೆಯು ಹುಟ್ಟಿಕೊಳ್ಳುತ್ತದೆ. ಮತ್ತು ಸಮಾನತೆಯಿಂದ ಅಹಿಂಸೆಯು ಹುಟ್ಟಿಕೊಳ್ಳುತ್ತದೆ' ಎಂದು ಅಹಿಂಸೆ ಮತ್ತು ಸಮಾನತೆಯನ್ನು ಒಂದೇ ನಾಣ್ಯ ಮಾಡಿಬಿಡುತ್ತಾರೆ. ತನ್ನ ದರ್ಶನದ ಅಂತಿಮ ಸ್ಥಿತಿಯಲ್ಲಿ 'state withers away' ಎಂಬ ಮಹಾವಾಕ್ಯ ನೀಡಿದ ಮಾರ್ಕ್ಸ್ ಕಾಣ್ಕೆಗೆ ಈ ನುಡಿ ಸಮಸಮವಾಗಿದೆ.

ಈ ಗಾಂಧೀ ಅಂಬೇಡ್ಕರ್ ಈರ್ವರೂ ಕೊನೆಕೊನೆಗೆ ತಲುಪಿದ ಸ್ಥಿತಿಯಲ್ಲಿ ಅವರನ್ನು ನೋಡಿದಾಗ ಅವರು ಇಂದು ಬದುಕಿದ್ದರೆ ಅವರು ಎಲ್ಲಿರುತ್ತಿದ್ದರು? ಹೇಗಿರುತ್ತಿದ್ದರು? ವೃದ್ಧಾಶ್ರಮವೊಂದಕ್ಕೆ ಎಸೆಯಲ್ಪಟ್ಟು ಒಂದೇ ಕಡೆ ವಾಸಿಸುತ್ತ ಅವರ ಗೊಣಗಾಟ ಇವರಿಗೆ ಮಾತ್ರ ಕೇಳಿಸುತ್ತಾ ಇವರ ಗೊಣಗಾಟ ಅವರಿಗೆ ಮಾತ್ರ ಕೇಳಿಸುತ್ತಾ ತಮ್ಮ ಕಣ್ಮುಂದೆ ಜರುಗುತ್ತಿರುವುದನ್ನೆಲ್ಲಾ ಅಸಹಾಯಕರಾಗಿ, ತಲೆ ಮೇಲೆ ಕೈಯಿಟ್ಟು ಆಕಾಶ ನೋಡುತ್ತಿದ್ದರೆ? ಆಗಾಗ ಅವರಲ್ಲಿಗೆ ಹೋಗಿ ಚೇಷ್ಟೆ–ಕೀಟಲೆ ಮಾಡುವ ಡಿ.ಆರ್.ನಾಗರಾಜ್ ಎಂಬ ಬಚ್ಚಾ ಹೇಳಿದ ಒಂದು ಮಾತು– 'ಹಳ್ಳಿಯ ಜೀವಂತ ಸಂದರ್ಭದೊಳಗೆ ಅಂಬೇಡ್ಕರ್ವಾದಿಯಾಗಿ ಹಾಗೂ ಅದರ ಹೊರಗೆ ಗಾಂಧಿವಾದಿಯಾಗಿ ಕಂಡರೆ ಅದು ಅಧಿಕೃತವಾದದ್ದು' ಎಂಬ ಆ ನುಡಿಯೊಳಗೆ ತಮಗೂ ತಿಳಿಯದಿದ್ದ ನಿಧಿ ಅಡಗಿದೆ ಎಂದು ಗಾಂಧಿ ಅಂಬೇಡ್ಕರರಿಗೂ ಅನಿಸಿ ಆ ನಿಧಿಯ ಗೆಜ್ಜೆ ಸದ್ದು ಆಲಿಸಿ ಎಂದು ಈ ಇಬ್ಬರೂ ಕೂಗಿ ಕೂಗಿ ಹೇಳಿಯೂ ಕೂಡ ಕೇಳಿಸಿಕೊಳ್ಳದ ಜನಸ್ತೋಮ ಕಂಡು ತಾವು ಸತ್ತವರ ನಡುವೆ ಬದುಕುತ್ತಿದ್ದೇವೇನೋ ಎಂದು ಅನ್ನಿಸಿ ದಿಕ್ಕು ಕಾಣದೆ ಆ ಈರ್ವರೂ ತಮ್ಮ ಸಾವಿಗಾಗಿ ಪ್ರಾರ್ಥನೆ ಮಾಡುತ್ತಿರುವಂತೆ ಗೋಚರಿಸುತ್ತಾರೆ.

ಈ ದೃಶ್ಯಾವಳಿ ನಮ್ಮ ಕಣ್ಮುಂದೆ ಬರಬಾರದು. ಅದಕ್ಕೆ ಬೇಕಾಗಿರುವುದು ಇಷ್ಟು : ನಾವು ಈ ಇಬ್ಬರ ಸಮಕಾಲೀನರಾದರೆ ಜಗಳ ಅನಿವಾರ್ಯ, ಅಲ್ಲಿ–ಇಲ್ಲಿ ಸ್ವಲ್ಪ ಸಮೀಪಕ್ಕೆ ಬರಬಹುದು. ಆದರೆ ಇಡಿಯಾಗಿ ನೋಡಿದರೆ ಅವರಿಬ್ಬರ ನಡುವಿನ ಜಗಳವೂ ಸರಸ ಆಗಲೂಬಹುದು. ಅವರಲ್ಲಿ ಯಾರು ಗಂಡು ಯಾರು ಹೆಣ್ಣು ಎಂದು ನಿರ್ಧರಿಸಲು ಅವರವರ ಭಾವಕ್ಕೆ ಬಿಡುವೆ. ಯಾಕೆಂದರೆ 'ಅಂಬೇಡ್ಕರ್ ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡು ಹೊರಗೆ ಇರುವ ಮಗ' ಎಂದು ನಾನು ಹೇಳಿದ್ದರಲ್ಲಿ, ಮಗ ಎಂದರೆ ಹಕ್ಕಿರುವ ವಾರಸುದಾರ, outcast ಆಗಿದ್ದಾನೆ ಎಂಬರ್ಥದಲ್ಲಿ ಗ್ರಹಿಸದೆ ಕೆಲವರು ಪದಪದಾರ್ಥ ಅರ್ಥಮಾಡಿಕೊಂಡುಬಿಟ್ಟರು! ಅದಕ್ಕಾಗಿ ಇದನ್ನು ಅವರವರ ಭಾವಕ್ಕೆ ಬಿಡುವೆ. ಆದರೆ ನಾವು ಗೋರಿ ಅಗೆದು ಈ ಇಬ್ಬರ ಮೂಳೆಗಳನ್ನು ಎಣಿಸುತ್ತಾ, ಪೂಜಿಸುತ್ತಾ, ತರ್ಕಿಸುತ್ತಾ, ಭೇದ ಹುಡುಕುತ್ತಾ ಮಡಿಮಾಡಿ ಅವರು ಮಡಿಯುವಂತೆ ಮಾಡುತ್ತಿರುವುದನ್ನು ಕೈಬಿಡಬೇಕಾಗಿದೆ,

ಈಗ ಈ ಇಬ್ಬರನ್ನೂ ನಾವು ಜೊತೆಗೂಡಿಸಿ ಒಳಗೊಂಡರೆ, ಅವರು ಬಡಿದಾಡುತ್ತಿದ್ದ ಕಾಲಮಾನದಲ್ಲಿ ಕಪ್ಪುಬಣ್ಣವು ಕಪ್ಪು ಬಣ್ಣ ಮಾತ್ರವಾಗಿತ್ತು. ಬಿಳಿಯ ಬಣ್ಣವು ಬಿಳಿಯ ಬಣ್ಣ ಮಾತ್ರವಾಗಿತ್ತು. ಇಂದು ಕಪ್ಪು ಬಣ್ಣದೊಳಗೇನೆ ಸಾವಿರಾರು ಬಣ್ಣ ಬಣಗಳಾಗಿಬಿಟ್ಟಿವೆ, ಬಿಳಿಯ ಬಣ್ಣದೊಳಗೂ ಸಾವಿರಾರು ಬಣ್ಣ ಬಣಗಳಿವೆ. ಬಣ್ಣ ಬಣಗಳಿಗೆ ತಕ್ಕಂತೆ ಸುಲಿಗೆಗಳೂ ಥರಾವರಿಗಳಾಗಿ ಆ ಸಂಖ್ಯೆಯೂ ವಿಪುಲವಾಗುತ್ತಿವೆ. ಜೊತೆಗೆ ಸುಲಿಗೆ ಇಂದು ಸುಲಿಗೆಯಾಗಿ ಸುಲಿಯುತ್ತಿಲ್ಲ, ರಕ್ಷಕನ ಮುಖವಾಡ ಹಾಕಿ ಸುಲಿಯುತ್ತಿದೆ. ಇದನ್ನು ಮಕ್ಕಳ ಮನರಂಜನಾ ಕಥೆಯಾಗಿಸಿ ಎಳೆಯ ಮಕ್ಕಳಲ್ಲೇ ಅಂದರೆ ಗಿಡವಾಗಿದ್ದಾಗಲೇ ಬಗ್ಗಿಸಿ ಸುಲಿಗೆಯನ್ನು ಒಪ್ಪಿತ ಮೌಲ್ಯವಾಗಿಸುವ ಹೊಸಹೊಸ ಬಲೆಗಳನ್ನು ಈ ಭೂಮಿ ಮೇಲೆ ನೇಯಲಾಗುತ್ತಿದೆ. ಗೆಳೆಯ ರಾಜೇಂದ್ರ ಚೆನ್ನಿ, ತಮ್ಮ 'ದಂತಗೋಪುರ ಮತ್ತು ಮಾರುಕಟ್ಟೆ ರಾಜಕೀಯ' ಲೇಖನದಲ್ಲಿ ಕಾಮಿಕ್ಸ್‌ಗಳಲ್ಲಿ ವಸಾಹತುಶಾಹಿ ಒಳಚರಿತ್ರೆಗಳಿವೆ ಎಂದು ಹೇಳುತ್ತಾ 'ಆದಿವಾಸಿಗಳ ಮೇಲೆ ಹುಕುಂ ಮಾಡುವ ಫ್ಯಾಂಟಮ್, ಆಫ್ರಿಕಾವನ್ನು ವಸಾಹತುವನ್ನಾಗಿ ಮಾಡಿದ ಬಿಳಿಯನ ಮೂಲಮಾದರಿ ಎನ್ನುವುದನ್ನೂ, ಹಾಗೇ ನಿಸರ್ಗ ಮತ್ತು ಪ್ರಾಣಿಗಳ ಮೇಲೆ ರಮ್ಯವಾದ ರೀತಿಯಲ್ಲಿ ಆಳ್ವಿಕೆ ಮಾಡುವ ಟಾರ್ಜನ್, ನಿಸರ್ಗದ ಮೇಲೆ ದಾಳಿ ಮಾಡಿ ಅದನ್ನು ಬಳಸಿಕೊಳ್ಳುವ ಯೂರೋಪಿಯನ್ ಮನುಷ್ಯನ ಸಂಕೇತವೆನ್ನುವುದನ್ನು ಮರೆಯುತ್ತೇವೆ' ಎಂದು ಅಪೂರ್ವ ಒಳನೋಟ ನೀಡುತ್ತಾರೆ. ಹಾಗೇ ಚಿಂತಕ ಜೆರೆಮಿ ಸೀಬ್ರೂಕ್ ಬರೆಯುತ್ತಾ 'ಜಗತ್ತಿನ ಕಾರ್ಮಿಕರೆಲ್ಲರೂ ಒಟ್ಟಾಗಿ ಜಗತ್ತನ್ನು ದಾಸ್ಯದಿಂದ ವಿಮುಕ್ತಗೊಳಿಸಬಲ್ಲರು' ಎಂಬ ಚಿಂತನೆ ದುರ್ಬಲಗೊಂಡಾಗ ಈಗ 'ನಮಗೆ ಬೇಕಿರುವುದೆಲ್ಲವನ್ನೂ ಬಂಡವಾಳಶಾಹಿಯ ಮೂಲಕ ಮಾತ್ರ ಪಡೆದುಕೊಳ್ಳಲು ಸಾಧ್ಯ' ಎಂಬ ಪುರಾಣ ಸೃಷ್ಟಿಸಲಾಗಿದೆ ಎನ್ನುತ್ತಾರೆ.


ಇಂದು ಜೀವನ ಎಂದರೆ ಹಣದಿಂದ ಹಣಕ್ಕಾಗಿ ಹಣಕ್ಕೋಸ್ಕರ ಎಂಬಂತಾಗಿಬಿಟ್ಟಿದೆ. ಸಮಾನತೆ ಸಮತ್ವದ ಆಶಯಗಳು ಕಣ್ಣುಬಾಯಿ ಬಿಡುತ್ತಿವೆ. ಬಂಡವಾಳಶಾಹಿಯೇ ಇಂದು ಜಗತ್ತಿನ ಹಸಿವಿನ ಬಗ್ಗೆ ಮಾತಾಡುತ್ತಿದೆ, ಉದ್ಯೋಗದ ಬಗ್ಗೆ ಮಾತಾಡುತ್ತಿದೆ,

ಬಡವರ ಉದ್ಧಾರ ತನ್ನ ಕೈಲಿ ಮಾತ್ರ ಎಂಬಂತೆ ಬಿಂಬಿಸಿಕೊಂಡು ನಂಬಿಸುತ್ತಿದೆ. ಮಾಟಮಂತ್ರ ಮಾಯಾಬಜಾರ್ ಎಲ್ಲವೂ ವಿಜ್ಞಾನದ ಭಾಷೆಯಲ್ಲಿ ಮಾತಾಡುತ್ತಿವೆ.

ಹೀಗಿರುವಾಗ ವಿಮೋಚನೆ ಹೇಗೆ? ಅಥವಾ ಯಾರು? ಖಳನಾಯಕನು ನಾಯಕನನ್ನು ತುಳಿದಿಟ್ಟು ತಾನೇ ನಾಯಕನ ಮಾತುಗಳನ್ನಾಡುತ್ತಿದ್ದಾನೆ. ಜನ ಮರುಳಾಗುತ್ತಿದ್ದಾರೆ. ಜೊತೆಗೆ ಈ ಕಾಲ ಮಾಹಿತಿಯ ಯುಗ. ಮನುಷ್ಯ ಹೆಚ್ಚೆಚ್ಚು ಎಚ್ಚರವನ್ನೂ ಪಡೆಯುತ್ತಿದ್ದಾನೆ. ಎಚ್ಚರ ಇಲ್ಲದಿದ್ದಾಗ ಅಸಮಾನತೆ ತಾರತಮ್ಯಗಳು ಇದ್ದರೂ ಹಿಂದೆ ಎಂಥದೋ ಜಡ ಜಡ್ಡು ನೆಮ್ಮದಿ ಇದ್ದರೆ ಇಂದು ಎಚ್ಚರದೊಡನೆ ತಾರತಮ್ಯ ಅಸಮಾನತೆಗಳು ಉಲ್ಬಣಗೊಂಡು ನೆಮ್ಮದಿಗೆಟ್ಟು ಭೂಮಿ ಬೇಯುತ್ತಿದೆ.

ಹೀಗಿದ್ದೂ ಸಮಾನತೆ ಸಮತ್ವದ ಕನಸನ್ನು ಸಾಕ್ಷಾತ್ಕರಿಸಬೇಕಾದ ಸಂಘಟನೆಗಳು, ಪಕ್ಷಗಳೂ ಒಟ್ಟಾಗುತ್ತಿಲ್ಲ, ತಂತಮ್ಮ ಸೈದ್ಧಾಂತಿಕತೆಗೆ ಅನುಗುಣವಾಗಿ ತಮ್ಮವೇ ಪ್ರತ್ಯೇಕ ಶತ್ರುಗಳನ್ನು ಗುರುತಿಸಿಕೊಂಡು ಆ ಶತ್ರುಗಳಿಗೆ ತಕ್ಕಂತೆ ತಮ್ಮ ಪ್ರತ್ಯೇಕತೆ ಆಚರಿಸುತ್ತಿವೆ. ಮಡಿ ಮಾಡ್ತಾರಲ್ಲ ಹಾಗೆ. ಕಾಲಾನುಕ್ರಮದಲ್ಲಿ ಜಡತೆ ಆವರಿಸಿಕೊಂಡಾಗ ಅವರು ಗುರುತಿಸಿಕೊಂಡಿದ್ದ ಶತ್ರು ಮರೆತು ಹೋಗಿ ಅವರ ಅಕ್ಕಪಕ್ಕದವರೇ ಶತ್ರುಗಳಾಗಿ ಬಿಡಬಹುದು. ಇದೂ ಆಗುತ್ತಿದೆ. ಹೀಗಿರುವಾಗ ತುಳಿತಕ್ಕೊಳಗಾದ ಜನತೆ ಒಟ್ಟಾಗುವುದೆಲ್ಲಿ ಬಂತು? ಇದರೊಡನೆ ಖಾಸಗಿ ಬಂಡವಾಳದ ಕೃಪಾಪೋಷಿತ ಕೆಲವು ಎನ್.ಜಿ.ಓಗಳು ಜನಪರ ಶಕ್ತಿಗಳಿಗಿಂತಲೂ ಹೆಚ್ಚು ಜನಪರವಾಗಿ ಮಾತಾಡುತ್ತ ಜನಪರ ಆಂದೋಲನಗಳಿಗೆ ತೊಡರುಗಾಲು ಹಾಕುತ್ತಿವೆ. ಜೊತೆಗೆ ಸಮತ್ವ–ಸಮಾನತೆ ಆಶಯದ ದಲಿತ, ಮಹಿಳೆ, ಪರಿಸರ, ರೈತ ಮುಂತಾದ ಸಂಘಟನೆಗಳು, ಪಕ್ಷಗಳು ತಂತಮ್ಮ ಐಡೆಂಟಿಟಿ ರಾಜಕಾರಣವನ್ನೇ ಆನೆಕಾಲು ರೋಗದಂತೆ ದೊಡ್ಡದು ಮಾಡಿಕೊಂಡು ಸಮತ್ವ ಸಮಾನತೆಯನ್ನು ಮರೆತು ತೆವಳುತ್ತಿವೆ. ಇದುವರೆಗಿನ ಭೂಮಿ ಮೇಲಿನ ಶೋಷಣೆಯ ಇತಿಹಾಸದಲ್ಲಿ ಪ್ರಕೃತಿ ನಾಳೆಗೂ ಉಳಿಯುತ್ತಿತ್ತು. ಇಂದಿನ ಜಾಗತೀಕರಣ ಖಾಸಗೀಕರಣದ ದಾಹದಲ್ಲಿ ಪ್ರಕೃತಿ ನಾಳೆಗೆ ಉಳಿಯುವುದಿಲ್ಲವೇನೋ ಎಂಬಷ್ಟು ವೇಗವಾಗಿ ಧ್ವಂಸೀಕರಣ ನಡೆಯುತ್ತಿದೆ.

ಈ ಧ್ವಂಸೀಕರಣ ಯುಗದಲ್ಲಿ ಗಾಂಧಿ ಒಬ್ಬ ಸಾಕೇ? ಅಂಬೇಡ್ಕರ್ ಒಬ್ಬ ಸಾಕೇ? ಅಥವಾ ಈ ಇಬ್ಬರೂ ಜತೆಗೂಡಿದರೆ ಅದಷ್ಟೇ ಸಾಕೇ? ಸಾಲದು ಅನಿಸುತ್ತದೆ. ಲೋಹಿಯಾ? ಸಾಲದು ಅನಿಸುತ್ತದೆ. ಮಹರ್ಷಿ ಮಾರ್ಕ್ಸ್‌ನ್ನೂ ಜತೆಗೂಡಿಸಬೇಕಾಗಿದೆ. ಅಷ್ಟೂ ಸಾಲದು ಇನ್ನೂ. ತಮಗೆ ಬೇಕಾದ ಒಬ್ಬೊಬ್ಬರೇ ಸಾಕು ಎನ್ನುವವರು ಹೆಣದ ಮುಂದೆ ಎದೆ ಬಡಿದುಕೊಂಡು ಗೋಳಾಡುತ್ತಿರುವವರಂತೆ ಕಾಣಿಸುತ್ತಾರೆ. ಒಂದು ಸಲ ನಾವು ಕೊಡವಿಕೊಂಡು ಪೊರೆ ಕಳಚಿ ಮರುಹುಟ್ಟು ಪಡೆಯಬೇಕಾಗಿದೆ. ನಮಗೆ ಬುದ್ಧ ವಚನಕಾರರ ಸ್ಪರ್ಶವೂ ಬೇಕಾಗಿದೆ. ▪



ಚಿತ್ರ : ಬಿ.ಜಿ. ಗುಜ್ಜಾರಪ್ಪ

ಒಂದು ಸುಸ್ತಿರವಾದ ಹಾಗೂ ಪ್ರಜಾಪ್ರಭುತ್ವದ ಆಧಾರದ ಮೇಲೆ ಸ್ಥಾಪಿತಗೊಳ್ಳುವ ಸರ್ಕಾರ ಮತ್ತು ಒಂದು ನಾಗರೀಕ ಸಮಾಜ ಹೇಗಿರಬೇಕು ಎಂಬುದರ ಕುರಿತು ಗಾಂಧೀಜಿಯವರಿಗೆ ಸ್ಪಷ್ಟವಾದ ಕಲ್ಪನೆಗಳಿದ್ದವು. ಬಡವರ ಏಳಿಗೆಗಾಗಿ ದುಡಿಯುತ್ತಿದ್ದ ಸಾಮಾಜಿಕ ಕಾರ್ಯಕರ್ತೆ ಹಾಗೂ ಮಹಾತ್ಮನ ಕುರಿತಂತೆ ಅಪಾರ ನಂಬಿಕೆ ಮತ್ತು ಗೌರವವನ್ನು ಹೊಂದಿದ್ದ ಹೆಣ್ಣು ಮಗಳೊಬ್ಬಳು ಕೇಳಿದ್ದ ಪ್ರಶ್ನೆಗೆ ಗಾಂಧೀಜಿಯವರು ಉತ್ತರಿಸಿದ್ದರು. ಜೊತೆಗೆ ಇತರರಿಗೂ ಈ ಸಂದೇಶ ತಲುಪಲಿ ಎಂಬ ಉದ್ದೇಶದಿಂದ ಈ ಪತ್ರವನ್ನು ಯಂಗ್ ಇಂಡಿಯ ಪತ್ರಿಕೆಯಲ್ಲಿ ಪ್ರಕಟ ಮಾಡಿದ್ದರು.

ಸಮಾಜಕ್ಕೆ ಮತ್ತು ಸರ್ಕಾರಕ್ಕೆ ಕಂಟಕವಾಗುವ ಏಳು ಅಂಶಗಳನ್ನು ಗುರುತಿಸಿದ ಗಾಂಧೀಜಿಯವರು ಅವುಗಳನ್ನು ಸಪ್ತ ಸಾಮಾಜಿಕ ಅನಿಷ್ಟಗಳು ಅಥವಾ ಪಾಪಗಳು ಎಂದು ಕರೆದರು.

ಅವುಗಳೆಂದರೆ,

ಒಂದು – ತತ್ವ ಅಥವಾ ಸಿದ್ಧಾಂತ ರಹಿತ ರಾಜಕೀಯ

ಎರಡು – ನೀತಿರಹಿತ ವಾಣಿಜ್ಯ ಚಟುವಟಿಕೆ

ಮೂರು–ಶ್ರಮರಹಿತವಾಗಿ ದುಡಿದ ಸಂಪತ್ತು

ನಾಲ್ಕು – ಆತ್ಮಸಾಕ್ಷಿ ರಹಿತ ಸುಖ ಅಥವಾ ಭೋಗ

ಐದು – ಶೀಲ ರಹಿತವಾದ ಜ್ಞಾನ

ಆರು – ಮಾನವೀಯತೆಯ ಮುಖವಿಲ್ಲದ ವಿಜ್ಞಾನ

ಏಳು – ತ್ಯಾಗ ರಹಿತವಾದ ಪೂಜೆ.

ಗಾಂಧೀಜಿಯವರು ಬದುಕಿದ್ದ ಕಾಲಘಟ್ಟದಲ್ಲಿ ತಮ್ಮ ಕಣ್ಣೆದುರಿನ ವರ್ತಮಾನದ ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ಜಿಗುಪ್ಸೆಗೊಂಡಿದ್ದರು. ಆಡಳಿತದ ಚುಕ್ಕಾಣಿ ಹಿಡಿದ ಜನಪ್ರತಿನಿಧಿ ದಕ್ಷತೆಯಿಂದ ಕೆಲಸ ಮಾಡಬೇಕಾದರೆ, ಅವನ ಕೈ ಮತ್ತು ಬಾಯಿ ಈ ಎರಡೂ ಶುದ್ಧವಾಗಿರಬೇಕು. ಆಡಳಿತ ಯಂತ್ರದ ಸುಗಮ ಚಾಲನೆಗೆ ಆತನ ವೈಯಕ್ತಿಕ ಚಾರಿತ್ರ್ಯ ಕೂಡ ಮುಖ್ಯವಾದುದು. ಕೇವಲ ಅದು ಖಾಸಗಿ ವಿಷಯ ಎಂದು ತಳ್ಳಿ ಹಾಕಲಾಗದು ಎಂದು ನಿರ್ಧಾಕ್ಷಣ್ಯವಾಗಿ ತಮ್ಮ ಅಭಿಪ್ರಾಯವನ್ನು ಹೊರ ಹಾಕಿದ್ದರು. ಪಶ್ಚಿಮ ಜಗತ್ತಿನ ಪ್ರಜಾತಾಂತ್ರಿಕ ಮೌಲ್ಯಗಳನ್ನು ನಿಕಷಕ್ಕೆ ಒಡ್ಡಿದ್ದ ಅವರು



ಗಾಂಧಿ ಚಿಂತನೆ 04

– ಜಗದೀಶ್ ಕೊಪ್ಪ

ಅವುಗಳಲ್ಲಿನ ಅನೇಕ ದೋಷಗಳನ್ನು ಗ್ರಹಿಸಿದ್ದರು. ಹಾಗಾಗಿ ಭಾರತದಲ್ಲಿ ಶ್ರೇಷ್ಠವಾದ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಯಾಗಬೇಕಾದರೆ, ಅದು ಯಾವ ಕಾರಣಕ್ಕೂ ಹಿಂಸಾತ್ಮಕ ಚಟುವಟಿಕೆಗಳ ಜೊತೆ ರಾಜಿಯಾಗಬಾರದು ಎನ್ನುತ್ತಿದ್ದರು.

ಅದೇ ಸಮಾಜದ ಒಂದು ಅಂಗವಾಗಿ ಸಂಸ್ಥೆ ಅಥವಾ ವ್ಯಕ್ತಿಗಳು ನಡೆಸುವ ವಾಣಿಜ್ಯ ಚಟುವಟಿಕೆಗಳಲ್ಲಿ ಕೇವಲ ಲಾಭಕೋರತನ ಮುಖ್ಯವಾಗಬಾರದು. ಅಲ್ಲಿ ಗ್ರಾಹಕನ ಹಿತಾಸಕ್ತಿಯನ್ನು ಕಾಪಾಡುವ ಅಂಶಗಳನ್ನು ಅಡಕಗೊಳಿಸಬೇಕು ಎಂದಿದ್ದರು. ಜೊತೆಗೆ ಯಾವುದೇ ವ್ಯಕ್ತಿ ಯಾವುದೇ ಶ್ರಮವಿಲ್ಲದೆ ಅಕ್ರಮವಾಗಿ ಶೇಖರಿಸುವ ಸಂಪತ್ತು ಪಾಪಕರವಾದುದು ಎಂದು ಬಣ್ಣಿಸಿದರು. ದೇಹ ಶ್ರಮವಿಲ್ಲದೆ ಮನುಷ್ಯನಿಗೆ ತಿನ್ನುವ ಹಕ್ಕಿಲ್ಲ ಎಂಬ ಬೈಬಲ್ ಸಂದೇಶವನ್ನು ಹೇಳುತ್ತಾ, ಪ್ರತಿಯೊಬ್ಬ ಜೀವಿ ತನ್ನ ಬೆವರಿನಿಂದ ಅನ್ನವನ್ನು ಸಂಪಾದಿಸಿಕೊಳ್ಳಬೇಕೆಂದು ಪ್ರತಿಪಾದಿಸಿದರು.

ಪ್ರತಿಯೊಬ್ಬ ಮನುಷ್ಯ ಸಂವೇದನಾ ಶೀಲವುಳ್ಳ ವ್ಯಕ್ತಿಯಾಗಿರಬೇಕು. ತನ್ನ ಅಗತ್ಯಕ್ಕಿಂತ ಹೆಚ್ಚು ಸಂಪನ್ಮೂಲಗಳನ್ನು ಪ್ರಕೃತಿಯಿಂದ ಪಡೆಯಬಾರದು. ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ಜೀವಿಗೂ ಅಗತ್ಯವಿರುವಷ್ಟು ನೈಸರ್ಗಿಕ ಸಂಪತ್ತು ನಮ್ಮಲ್ಲಿದೆ. ಆದರೆ, ಅದು ಬಲಾಢ್ಯ ರಾಷ್ಟ್ರಗಳು ಮತ್ತು ವ್ಯಕ್ತಿಗಳ ಸ್ವತ್ತಾಗಬಾರದು. ಇದು ಭವಿಷ್ಯದ ಬದುಕಿಗೆ ಮತ್ತು ಮಾನವನ ಏಳಿಗೆಗೆ ಅಡ್ಡಿಯಾಗುವ ಅಪಾಯಕಾರಿ ಸಂಗತಿಯಾಗಲಿದೆ ಎಂದು ಅಭಿಪ್ರಾಯ ಪಟ್ಟಿದ್ದರಲ್ಲದೆ, ಮಾನವನ ಅತಿಯಾಸೆ ವಿವೇಕ ರಹಿತವಾದ ಜ್ಞಾನವಾಗಿದೆ ಎಂದು ಅವರು ಎಚ್ಚರಿಸಿದರು.

ವಿಜ್ಞಾನ ತಂತ್ರಜ್ಞಾನ ಕುರಿತಂತೆ ಗಾಂಧೀಜಿಯವರಿಗೆ ಯಾವುದೇ ವಿರೋಧವಾಗಲಿ ಅಥವಾ ದ್ವಂದ್ವಗಳಾಗಲಿ ಇರಲಿಲ್ಲ. ಅವರ ಆಲೋಚನೆಗಳು ಸ್ಪಷ್ಟವಾಗಿದ್ದವಲ್ಲದೆ ನಿಖರವಾಗಿದ್ದವು. ಒಂದು ಸಮುದಾಯದ ಮತ್ತು ಮನುಕುಲದ ಏಳಿಗೆಗೆ ನೆರವಾಗದ ವಿಜ್ಞಾನ ಕುರಿತಂತೆ ಅವರಲ್ಲಿ ವಿರೋಧವಿತ್ತು. ಅಣು ಬಾಂಬ್ ನಂತಹ ವಿಜ್ಞಾನದ ಆವಿಷ್ಕಾರ ಕೆಲವು ರಾಷ್ಟ್ರಗಳ ಆಯುಧಗಳಾಗಿರುವ ಹಿನ್ನಲೆ ಅವರು ಇಂತಹ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಯುದ್ಧ ವಿಜ್ಞಾನ ಎಂಬುದು ಸರ್ವಾಧಿಕಾರಕ್ಕೆ ಅವಕಾಶ ನೀಡುತ್ತದೆ ಎಂದು ಎಚ್ಚರಿಸಿದ್ದ ಬಾಪೂಜಿಯವರು ಅಹಿಂಸೆಯ ಆಧಾರದ ಮೇಲೆ ಸರ್ವರ ಏಳಿಗೆಗಾಗಿ ಬೆಳೆಯುವ ಅಹಿಂಸಾ ವಿಜ್ಞಾನವು ಶುದ್ಧ ವಿಜ್ಞಾನವಾಗುತ್ತದೆ ಎಂದು ನಂಬಿದ್ದರು.

ಪ್ರಾರ್ಥನೆ ಅಥವಾ ಪೂಜೆ ಇವೆಲ್ಲವೂ ಕೇವಲ ತೋರಿಕೆಯ ಪ್ರದರ್ಶನಗಳಲ್ಲ, ಮಂತ್ರ ಅಥವಾ ಶ್ಲೋಕಗಳನ್ನು ಪಠಿಸುವುದು ಆತ್ಮ ಸಾಕ್ಷತ್ಕಾರಕ್ಕಾಗಿ ಮತ್ತು ಮನ ಶುದ್ದಿಗಾಗಿ ಎಂಬುವುದು ಗಾಂಧೀಜಿಯವರ ನಿಲುವಾಗಿತ್ತು. ದೇಗುಲ, ಮಂದಿರ ಹಾಗೂ ಮಸೀದಿಗಳಲ್ಲಿ ನಾವು ಸಲ್ಲಿಸುವ ಪೂಜೆ, ಪ್ರಾರ್ಥನೆಗಳು ವೈಯಕ್ತಿಕ ಹಿತಾಸಕ್ತಿಯಿಂದ ಕೂಡಿರಬಾರದು ಎಂಬುದು ಗಾಂಧೀಜಿಯವರ ನಿಲುವಾಗಿತ್ತು.


ಮಹಾತ್ಮ ಗಾಂಧೀಜಿಯವರ ಬಹುತೇಕ ಚಿಂತನೆಗಳು ವೈಯಕ್ತಿಕ ಹಿತಾಸಕ್ತಿಗೆ ಸೀಮಿತವಾಗಿರದೆ, ಇಡೀ ಮನುಕುಲದ ಹಿತಾಸಕ್ತಿಯನ್ನು ಒಳಗೊಂಡಿರುವುದು ವಿಶೇಷವಾಗಿದೆ.

■

ಗಾಂಧಿ ಮತ್ತು ಕರ್ನಾಟಕ

ಭಾಗ –5

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **“ಗಾಂಧಿ ಮತ್ತು ಕರ್ನಾಟಕ”** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.



ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.


ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.



ಚಂಪಾರಣ್ಯಕ್ಕೆ ಕನ್ನಡಿಗರು

ಚಂಪಾರಣ್ಯ ಬಿಹಾರದಲ್ಲಿ ಇದೆ. ಆ ಕಾಲಕ್ಕೆ ಅಲ್ಲಿನ ಜನರಲ್ಲಿ ವಿದ್ಯಾವಂತರೇ ಇರಲಿಲ್ಲ. ಅಲ್ಲಿನ ಅನುಭವ ಹೆಚ್ಚಾದಂತೆ ಅಲ್ಲಿ ಏನಾದರೂ ಸ್ಥಿರವಾದ ಕೆಲಸ ಮಾಡಬೇಕು ಎನಿಸಿತು ಅವರಿಗೆ. ಆಗಲೂ ಈಗಲೂ ಹಳ್ಳಿಗಳಲ್ಲಿ ಶಿಕ್ಷಣ ಅತ್ಯಗತ್ಯ. ಇಲ್ಲದೇ ಇದ್ದರೆ ಪ್ರಗತಿಯ ಯಾವ ಕಾರ್ಯಕ್ರಮವೂ ಇಲ್ಲ ಎನಿಸಿತು. ಈ ಮಾತು ಗಾಂಧೀಜಿಗೆ ಮನದಟ್ಟು ಆಯಿತು. ಅಲ್ಲಿನ ರೈತರ ಅಜ್ಞಾನ ಬಹಳ ಕರುಣಾಜನಕ ಆಗಿತ್ತು. ಸಂಗಾತಿಗಳೊಡನೆ ಆಲೋಚಿಸಿ, ಆರು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದರು ಗಾಂಧೀಜಿ. ಆ ಶಾಲೆಗಳ ಶಿಕ್ಷಕರಿಗೆ ಆಯಾ ಹಳ್ಳಿಯವರೇ ಊಟ-ವಸತಿ ಏರ್ಪಡಿಸಬೇಕು. ಉಳಿದ ವೆಚ್ಚ ಗಾಂಧೀಜಿಯದು.

ಒಂದೊಂದು ಶಾಲೆಗೆ ಒಬ್ಬ ಗಂಡಸು, ಒಬ್ಬ ಹೆಂಗಸು. ಈ ಕೆಲಸಕ್ಕೆ ಕರ್ನಾಟಕದಿಂದ ಸ್ವಯಂ ಸೇವಕರನ್ನು ಕಳಿಸಿಕೊಡಲು ಸಾಧ್ಯವೇ ಎಂದು ದೇಶಪಾಂಡೆ ಗಂಗಾಧರರಾಯರನ್ನು ಗಾಂಧೀಜಿ ಕೇಳಿದರು "ಈ ಕೋರಿಕೆಯನ್ನು ಕಾಕಾ ಕಾಲೇಲಕರರೂ ಕೂಡ ಗಂಗಾಧರರಾಯರಿಗೆ ಬರೆದು ತಿಳಿಸಿದರು.



ಬಾಬಾಸಾಹೇಬ ಸೋಮಣ ಮತ್ತು ಶ್ರೀ ಪುಂಡಲೀಕಜಿ ಕಾತಗಡೆ ಈ ಇಬ್ಬರು ಗಂಗಾಧರರಾಯರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ಚಂಪಾರಣ್ಯಕ್ಕೆ ನೀವು ಹೋಗುತ್ತೀರಾ" ಎಂದು ಅವರನ್ನು ಕೇಳಿದುದಕ್ಕೆ ಅವರೂ ಒಪ್ಪಿಕೊಂಡರು .

ಚಂಪಾರಣ್ಯದಲ್ಲಿ ಬೀತೀ ಹರವಾ ಎಂಬ ಚಿಕ್ಕಹಳ್ಳಿ. ಅಲ್ಲಿ ಒಂದು ಶಾಲೆ. ಅಲ್ಲಿಗೆ ಹೋದರು ಬಾಬಾ ಸಾಹೇಬ ಸೋಮಣ . ಗಾಂಧೀಜಿ ಹೆಂಡತಿ ಕಸ್ತೂರಬಾ ಕೆಲವು ಕಾಲ ಸೋಮಣರ ಜೊತೆಯಲ್ಲಿ ಕೆಲಸ ಮಾಡುತ್ತ ಅಲ್ಲಿಯೇ ಇದ್ದರು. ಕರ್ನಾಟಕದ ಭಾಗ್ಯ ಅದು. ಬೀತೀ ಹರವಾದ ಶಾಲೆ ಒಂದು ಹುಲ್ಲಿನ ಗುಡಿಸಲಿನಲ್ಲಿ ಇತ್ತು ಒಂದು ರಾತ್ರಿ ಇದ್ದಕ್ಕಿದ್ದಂತೆ ಶಾಲೆಯ ಆ ಗುಡಿಸಲು ಅಗ್ನಿದೇವನಿಗೆ ಆಹುತಿ ಆಯಿತು. ಅಲ್ಲಿನ ನೀಲಿ ತೋಟಗಾರರದೇ ಈ ಕೆಲಸ ಎಂದುಕೊಂಡರು ಜನ. ಗುಡಿಸಲು ಸುಟ್ಟು ಹೋಯಿತಲ್ಲ. ಆಮೇಲೆ ಬಾಬಾಸಾಹೇಬ ಸೋಮಣ ಸ್ವತಃ ಒಂದು ಕಟ್ಟಡವನ್ನು ಕೈಯಾರೆ ಕಟ್ಟಲು ಮೊದಲಿಟ್ಟರು. ಅದಕ್ಕೆ ನೆರವಾದರು ಹಳ್ಳಿಯ ಜನ. ಆ ಕಟ್ಟಡದ ಕೆಲಸ ಬಹಳ ಚೆನ್ನಾಗಿ ನಡೆಯಿತು. ಕೆಲವು ಕಾಲ ಕೆಲಸ ಮಾಡಿ, ಬಾಬಾಸಾಹೇಬ ಸೋಮಣರು ಹಿಂದಿರುಗಿ ಬಂದರು. ಆ

ಮೇಲೆ ಅವರ ಸ್ಥಳದಲ್ಲಿ ಪುಂಡಲೀಕಜಿ ಕಾತಗಡೆ ಇವರು ಬೆಳಗಾವಿಯಿಂದ ಹೋಗಿ ಅಲ್ಲಿ ಒಂದು ವರ್ಷ ಕೆಲಸ ಮಾಡಿದರು. ಅವರ ಕೆಲಸ ಗಾಂಧೀಜಿಗೆ ಬಹಳ ಮೆಚ್ಚಿಕೆ ಆಗಿತ್ತು. ದಕ್ಷಿಣ ಆಫ್ರಿಕಾದಲ್ಲೇ ಕೆಲವು ಕನ್ನಡಿಗರ ನಿಷ್ಠೆಯ ಪರಿಚಯ ಅವರಿಗೆ ಆಗಿತ್ತು. ಮತ್ತೊಮ್ಮೆ ಇಲ್ಲಿಯೂ ಅದೇ ಸದನುಭವ.

ಮುಂಬಯಿ ಪ್ರಾಂತದ ರಾಜಕೀಯ ಪರಿಷತ್ತು 1918 ಮೇ 5 ರಿಂದ 8 ರವರೆಗೆ ನಿಗದಿಯಾಗಿತ್ತು. 1917 –18 ರಲ್ಲಿ ಗಾಂಧೀಜಿ ಸೈನ್ಯಕ್ಕೆ ಸಿಪಾಯಿಗಳನ್ನು ಭರ್ತಿ ಮಾಡುವ ಕೆಲಸದಲ್ಲಿ ತೊಡಗಿದ್ದರು. ಅದರ ಪ್ರಚಾರ ಭರದಿಂದ ಸಾಗಿತ್ತು. ಆ ಸಂದರ್ಭದಲ್ಲಿ ಮುಂಬಯಿ ಪ್ರಾಂತದ ರಾಜಕೀಯ ಪರಿಷತ್ತು ವಿಜಾಪುರದಲ್ಲಿ ನಡೆಯಿತು. ವಿಠ್ಠಲಭಾಯಿ ಪಟೇಲರು ಅದಕ್ಕೆ ಅಧ್ಯಕ್ಷರು. ಮಹಾ ಯುದ್ಧದಲ್ಲಿ ಇಂಗ್ಲೆಂಡಿಗೆ ಭಾರತ ನೆರವಾಗಬೇಕೆ ಬೇಡವೆ ಎಂಬ ಚರ್ಚೆ ನಡೆಯಬೇಕಾಗಿತ್ತು . ಈ ವಿಷಯದ ಬಗ್ಗೆ ಗಾಂಧೀಜಿಗೂ ಬಾಲಗಂಗಾಧರ ತಿಲಕರಿಗೂ ಅಭಿಪ್ರಾಯ ಭೇದವಿದೆ .ಇಬ್ಬರೂ ಪರಿಷತ್ತಿಗೆ ಬರುತ್ತಾರೆ, ಇಬ್ಬರ ವಾದವನ್ನೂ ಕೇಳಬಹುದು ಎಂದುಕೊಂಡು ಅನೇಕರು ಪರಿಷತ್ತಿಗೆ ಬಂದು ಸೇರಿದ್ದರು. ಆದರೆ ಲೋಕಮಾನ್ಯ ತಿಲಕರು ಬರಲಿಲ್ಲ. ನರಸಿಂಹ ಚಿಂತಾಮಣ ಕೇಳಕರ, ಪಿ.ಎಂ. ಬಾಪಟ ಮೊದಲಾದವರು ಬಂದರು. ಗಾಂಧೀಜಿ ಮಾತ್ರ ಗೊತ್ತಾದಂತೆ ಪರಿಷತ್ತಿಗೆ ಬಂದರು.

ಯಾವ ಷರತ್ತು ಇಲ್ಲದೆ ಈ ವಿಪತ್ಕಾಲದಲ್ಲಿ ಬ್ರಿಟಿಷರಿಗೆ ಸಹಾಯ ಮಾಡಬೇಕು ಎಂಬುದು ಗಾಂಧೀಜಿಯ ವಾದ. ಇದಿರಾಳಿಯ ಆಪತ್ತಿನ ಅಥವಾ ಸಂಕಟ ಸಮಯದ ಲಾಭ ಪಡೆಯಬಾರದು ಎಂಬ ಧರ್ಮ ಗಾಂಧೀಯವರದು. ಆದರೆ ವ್ಯವಹಾರದಲ್ಲಿ ಗೆಲ್ಲಬೇಕು ಎಂದರೆ ಅದೇ ಒಳ್ಳೆಯ ಸಮಯ. ತಿಲಕರು ಬಂದಿದ್ದರೆ ಗಾಂಧೀಜಿಯ ವಾದಕ್ಕೆ ವಿರುದ್ಧವಾಗಿ ಅವರು ವಾದಿಸುತ್ತಿದ್ದರು ಎಂದು ಜನರ ನಿರೀಕ್ಷೆ. ಗಾಂಧೀಜಿ ನನ್ನನ್ನು (ಗಂಗಾಧರ ರಾಯರನ್ನು) ಕರೆದು "ತಿಲಕರ ಬದಲು ನೀನು ನನ್ನ ವಾದವನ್ನು ವಿರೋಧಿಸು” ಎಂದು ಹೇಳಿದರು. ಕರ್ನಾಟಕದಲ್ಲಿ ನಾನು ಈ ಬಗ್ಗೆ ಎಷ್ಟೋ ಭಾಷಣ ಮಾಡಿದ್ದೆ. ಆದ್ದರಿಂದ ನನಗೆ ಹೇಳಿದರೋ ಏನೋ.ಆದರೆ ತಿಲಕರು ಪರಿಷತ್ತಿಗೆ ಬರಲಿಲ್ಲ ಎಂದು ಗಾಂಧೀಜಿ ತಮ್ಮ



ವಾದವನ್ನು ಮಂಡಿಸಲೇ ಇಲ್ಲ. ನನಗೂ ಅವರನ್ನು ವಿರೋಧಿಸುವ ಸರದಿ ಬರಲಿಲ್ಲ ಎಂದು ಗಂಗಾಧರ ರಾಯರು ಹೇಳಿದ್ದಾರೆ.

ಪರಿಷತ್ತಿನ ಎರಡನೆಯ ದಿನ ಎಂದರೆ ಮೇ 6 ನೇ ತಾರೀಖು ಗಾಂಧೀಜಿ ಭಾಷಣ ಮಾಡುತ್ತ ಈ ರೀತಿ ಹೇಳಿದರು: “ನಾನು ಒಂದು ದೊಡ್ಡ ತಪ್ಪನ್ನು ಮಾಡಿದ್ದೇನೆ, ವಿಜಾಪುರದಲ್ಲಿ ಮೊದಲೇ ಎರಡು ಪಕ್ಷ ಇವೆ; ನಾನು ಅನಾವಶ್ಯಕವಾಗಿ ಈ ಊರಿನಲ್ಲಿ ಗದ್ದಲ ಎಬ್ಬಿಸುತ್ತಿದ್ದೇನೆ ಎಂದು ಒಬ್ಬ ಗೆಳೆಯರು ಬಂದು ನನಗೆ ಹೇಳಿದರು . ನನಗೆ ವಾಸ್ತವ ಸ್ಥಿತಿ ಗೊತ್ತಿರಲಿಲ್ಲ. ಜಗಳ ಹಚ್ಚಿ ಆ ಕಡೆಯವರ ಮನಸ್ಸನ್ನು ಉದ್ರೇಕಗೊಳಿಸಲು ನಾನು ಬಂದಿಲ್ಲ. ನನಗೂ ನಿಮಗೂ ಮಾರ್ಗದರ್ಶನ ಮಾಡಲು ಲೋಕಮಾನ್ಯ ತಿಲಕರು ಇಲ್ಲಿರಬೇಕಾಗಿತ್ತು .ರಾಜಕೀಯದಲ್ಲಿ ನಾನಿನ್ನೂ ಮೂರು ವರ್ಷದ ಎಳೆಯ ಮಗು. ರಾಜಕೀಯದಲ್ಲಿ ನಾನಿನ್ನೂ ನೋಡಬೇಕು, ಹಾಗೂ ಕಲಿಯಬೇಕು. ಈ ಗೊಂದಲವನ್ನು ನಿರ್ಮಿಸಿದ್ದಕ್ಕಾಗಿ ನಿಮ್ಮ ಕ್ಷಮೆ ಬೇಡುತ್ತೇನೆ. ಸಾಮಾನ್ಯ ಸಭೆಗಳಲ್ಲಿ ಗದ್ದಲವನ್ನು ಉಂಟುಮಾಡಿದ ಆರೋಪಕ್ಕೆ ಗುರಿಯಾಗದೆ ತಮ್ಮ ಅಭಿಪ್ರಾಯಗಳನ್ನು ನೀವು ಸ್ಪಷ್ಟವಾಗಿ ವಿವರಿಸಬಹುದು. ನಾನು ಹಾಕಿಕೊಂಡ ಕಾರ್ಯಕ್ರಮವನ್ನು ಆಚರಣೆಯಲ್ಲಿ ತರುವವನು ಆಗಿರುವುದರಿಂದ ಭರತ ಖಂಡದಲ್ಲಿ ಎಲ್ಲ ಭಾಗಗಳಲ್ಲಿ ಅದರ ಬಗ್ಗೆ ಏನು ಭಾವನೆ ಇದೆ ಎಂದು ತಿಳಿದುಕೊಳ್ಳುವ ಕುತೂಹಲ. ನಿಮಗೆಲ್ಲರಿಗೂ ಪೂರ್ವಗ್ರಹ ಇದೆ. ಅದನ್ನು ಮನಸಿನಲ್ಲಿಟ್ಟುಕೊಂಡೇ ಇಲ್ಲಿಗೆ ಬಂದಿದ್ದೀರಿ. ನಾನು ನನ್ನ ವಾದವನ್ನು ಇಲ್ಲಿ ಮಂಡಿಸಲಾರೆ. ನಿಮ್ಮ ಅಭಿಪ್ರಾಯಗಳನ್ನು ತಿಳಿದುಕೊಂಡು ನಿಮ್ಮ ಭಾವನೆಗಳನ್ನೂ ನಿರ್ಧಾರಕ ಉದ್ದೇಶಗಳನ್ನೂ ಅರ್ಥಮಾಡಿಕೊಂಡು, ನಿಮ್ಮ ಮನಸ್ಸಿನ ಹಿನ್ನೆಲೆಯನ್ನು ಅರಿತುಕೊಳ್ಳಬೇಕು. ನಾನು, ಇನ್ನೊಮ್ಮೆ




ಲಾಲಾ ಲಜಪತ್ ರಾಯ್

ಶಾಂತ ವಾತಾವರಣದಲ್ಲಿ ಬಂದು ನಿಮ್ಮ ಮನಸ್ಸುಗಳನ್ನು ಗೆಲ್ಲಬಯಸುತ್ತೇನೆ. ನಿಮ್ಮ ಮುಂದೆ ಈಗ ತೀರ್ಮಾನಗಳು ಇವೆ. ಈ ವಿಷಯದಲ್ಲಿ ನನಗೂ ಶ್ರೀ ಕೇಳಕರರ ನಿಲುವೇ ಸರಿಯೆನಿಸುತ್ತದೆ . ಈ ಸಂದರ್ಭದಲ್ಲಿ ಕಾಂಗ್ರೆಸ್ ಸಮಿತಿಯ ತೀರ್ಮಾನವನ್ನು ಒಪ್ಪಿಕೊಳ್ಳಬೇಕು."

ತೀರ್ಮಾನ ಹೀಗಿತ್ತು: "ಯಾವ ವಿಧದಲ್ಲಿಯೂ ಕೂಲಿಕಾರರನ್ನು ಕರೆದೊಯ್ಯುವ ಇಂಡೆಂಚರ್ ಪದ್ಧತಿ ಸಂಪೂರ್ಣವಾಗಿ ಹೋಗಲೇಬೇಕು; ಇದು ಒಂದು ಬಗೆಯ ಗುಲಾಮಗಿರಿಯಾದುದರಿಂದ ಕೂಲಿಕಾರರನ್ನು ಕೆಳಕ್ಕೆ ಎಳೆದು ಸಮಾಜದ ಆರ್ಥಿಕ ಹಾಗೂ ನೈತಿಕ ಹಿತಕ್ಕೆ ವಿರುದ್ಧವಾಗಿರುವುದರಿಂದ ಇದಕ್ಕಿಂತ ಕಡಿಮೆ ಯಾವ ವಿಧಾನವೂ ಸಮ್ಮತವಲ್ಲ ಎಂದು ಈ ಸಮ್ಮೇಳನ ಒತ್ತಾಯಪೂರ್ವಕ ತಿಳಿಸುತ್ತದೆ."

ತೀರ್ಮಾನದ ಸಮರ್ಥನೆಗಾಗಿ Indenture System ಆಫ್ರಿಕಾದ ಕೂಲಿ ಪದ್ಧತಿಯ ಮೇಲೆ ಹುರುಪಿನಿಂದ ಭಾಷಣ ಮಾಡಿದರು. ಗಾಂಧೀಜಿ ಹಾದಿಯಲ್ಲಿ ಮಾತನಾಡುತ್ತ ಈ ಕೂಲಿಕಾರ ಪದ್ಧತಿಯನ್ನು ವಿವರಿಸಿದರು. ಇದರಿಂದ ವಸಾಹತುಗಳಲ್ಲಿ ನಮ್ಮ ಜನರ ಮೇಲೆ ಎಷ್ಟು ಕೆಟ್ಟ ಪ್ರಭಾವ ಎಂಬುದನ್ನು ವರ್ಣಿಸಿದರು. ಈ ಪ್ರಶ್ನೆಯ ಬಗ್ಗೆ ಬಂದಿರುವ ವರದಿಯ ಸಲಹೆಗಳನ್ನು ಬಲವಾಗಿ ಖಂಡಿಸಿ, ಈ ಪದ್ಧತಿ ಕೂಡಲೆ ಹೋಗಬೇಕೆಂದೂ ಇದರಲ್ಲಿ ಯಾವ ಹಂತವೂ ಇರಕೂಡದೆಂದೂ ಒತ್ತಿ ಹೇಳಿದರು.


ಕಲಕತ್ತೆಯ ಕಾಂಗ್ರೆಸ್ ವಿಶೇಷ ಅಧಿವೇಶನ

ಮುಂದೆ ಕಲ್ಕತ್ತೆಯಲ್ಲಿ ಸೆಪ್ಟೆಂಬರ್ 1920 ರಲ್ಲಿ ಲಾಲಾ ಲಜಪತರಾಯರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ವಿಶೇಷ ಅಧಿವೇಶನ ಆಯೋಜಿತವಾಗಿತ್ತು. ಆ ವೇಳೆಗೆ ದೇಶದ ನಾಯಕರಲ್ಲಿ ಎರಡು ಬಣಗಳು ಆಗಿದ್ದವು. ಅಲ್ಲಿ ಅಸಹಕಾರದ ನಿರ್ಣಯವಾದರೂ ಮುಂದಿನ ನಾಗಪುರದ ಅಧಿವೇಶನದಲ್ಲಿ ಅದರ ಕಾರ್ಯಕ್ರಮ ನಿಶ್ಚಯ ಆಗಬೇಕು ಎಂದು ಗೊತ್ತಾಯಿತು.

ನಾಗಪುರದ ಕಾಂಗ್ರೆಸ್ಸಿನ ವೇಳೆಗೆ ಜನರ ಅಭಿಪ್ರಾಯವನ್ನು ತಮ್ಮ ಕಡೆಗೆ ಎಂದರೆ ಅಸಹಕಾರದ ಚಳವಳಿ ಕಡೆಗೆ ಒಲಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಗಾಂಧೀಜಿ ಅಖಿಲ ಭಾರತ ಪ್ರವಾಸ ಮಾಡಿದರು. ಆ ಪ್ರವಾಸದಲ್ಲಿ ಕರ್ನಾಟಕಕ್ಕೂ ಕೆಲವು ದಿನ ಬರಬೇಕಾದ ಕಾರ್ಯಕ್ರಮ ಇತ್ತು. ಬೆಳಗಾವಿಯ ಗಂಗಾಧರರಾಯರಿಗೆ ಪತ್ರ ಬರೆದು ಕರ್ನಾಟಕದಲ್ಲಿ ಕಾರ್ಯಕ್ರಮದ ಅನುಕ್ರಮವನ್ನು ಗೊತ್ತು ಮಾಡುವಂತೆ ತಿಳಿಸಿದರು ಗಾಂಧೀಜಿ. ಆ ಪ್ರಕಾರ ಉತ್ತರ ಕರ್ನಾಟಕದ ಮುಖ್ಯ ಮುಖ್ಯ ಊರುಗಳಲ್ಲಿ ಸ್ವಾಗತದ ಸಿದ್ಧತೆಯೂ ಆಯಿತು. ಆಗ ಗಾಂಧೀಜಿ ಅಖಿಲ ಭಾರತದಲ್ಲಿ ಒಂದು ಕೋಟಿ ರೂಪಾಯಿಯ "ತಿಲಕ' ಸ್ವರಾಜ್ಯ ನಿಧಿ ಸಂಗ್ರಹ ಮಾಡುತ್ತಿದ್ದರು.

■





ಗಾಂಧಿ ಪ್ರಭಾವ ಸೀಮಾತೀತ

– ಸಿ ಯು ಬೆಳ್ಳಕ್ಕಿ

ಮಹಾತ್ಮಾ ಗಾಂಧೀಜಿಯವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡದೆ ಇದ್ದದ್ದು ನೊಬೆಲ್ ಪ್ರಶಸ್ತಿಗೆ ಅಂಟಿದ ಒಂದು ಕಪ್ಪು ಕಲೆ ಎಂದೇ ಹೇಳಬಹುದು. ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರು ಸಹ ಇದನ್ನು ಒಪ್ಪಿಕೊಂಡಿದ್ದಾರೆ. ಗಾಂಧೀಜಿ ನಿರ್ಗಮನದ ನಂತರ ಈ ಪ್ರಶಸ್ತಿಗೆ ಪಾತ್ರರಾದ ಹಲವಾರು ಮಹನೀಯರು ಗಾಂಧೀ ತತ್ವಕ್ಕೆ ಮಾರುಹೋದ ಗಾಂಧೀಜಿ ಅನುಯಾಯಿಗಳೇ ಆದದ್ದು ಒಂದು ಸ್ವಾರಸ್ಯಕರ ಸಂಗತಿ.


ನೊಬೆಲ್ ಶಾಂತಿ ಪುರಸ್ಕೃತ ದಲಾಯಿಲಾಮಾ, ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್, ಸೀಝರ್ ಚಾವೇಜ್, ಅಂಗಸಾನ್ ಸೂಕಿ, ಬೆನಿಗ್ನೊ ಅಕ್ವಿನೊ, ಡೆಸ್‌ಮಂಡ್ ಟುಟೊ ಹಾಗೂ ನೆಲ್ಸನ್ ಮಂಡೆಲಾ ಅವರನ್ನು ಗಾಂಧೀಯವರ ಮಕ್ಕಳು ಹಾಗೂ ಅವರ ಬೌದ್ಧಿಕ ವಾರಸುದಾರರು ಎಂದು ಟೈಮ್ಸ್ ಮ್ಯಾಗಝಿನ್ ವರ್ಣಿಸಿತು.

ವಿಶ್ವದಾದ್ಯಂತ ಗಾಂಧೀ ಮಹತ್ವದ ಧುರೀಣರು ಹಾಗೂ ರಾಜಕೀಯ ಚಳವಳಿಗಳ ಮೇಲೆ ಪ್ರಭಾವ ಬೀರಿದರು. ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದು ಗಮನಾರ್ಹ. 1915ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪುರಸ್ಕಾರ ಪಡೆದ ಫ್ರಾನ್ಸ್‌ನ ರೋಮೇನ್ ರೊನಾಲ್ಡ್ ಮೊದಲು ಮಾಡಿ ಖ್ಯಾತ ವಿಜ್ಞಾನಿ ಅಲ್ಬರ್ಟ ಐನಸ್ಟೀನ್, ಮಾರ್ಟಿನ್ ಲೂಥರ್ ಕಿಂಗ್, ಚಾರ್ಲಿ ಚಾಪ್ಲಿನ್ ಅದಿಯಾಗಿ ಬರಾಕ್ ಒಬಾಮಾವರೆಗೆ ಅನೇಕರು ಗಾಂಧಿ ಹಾಗೂ ಅವರ ತತ್ವದಿಂದ ಗಾಢವಾಗಿ ಪ್ರಭಾವಿತರಾದರು.

ಅಮೇರಿಕೆಯಲ್ಲಿ ವರ್ಣಭೇದ ನೀತಿಯ ವಿರುದ್ಧ ನಾಗರಿಕ ಹಕ್ಕುಗಳ ಚಳವಳಿ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿತ್ತು. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಬಿಸಿರಕ್ತದ ಯುವಕ, ಹೋರಾಟದ ಮುಂಚೂಣಿಯಲ್ಲಿದ್ದ. ತಮ್ಮ ಹೋರಾಟದ ಯಾವ ರೀತಿಯಾಗಿರಬೇಕು, ಅದನ್ನು ಹೇಗೆ ನಡೆಸಬೇಕು ಎಂಬ ಗೊಂದಲದಲ್ಲಿದ್ದರು. ಆ ಸಂದರ್ಭದಲ್ಲಿ ಅದೇ ತಾನೇ ಭಾರತದ ಪ್ರವಾಸದಿಂದ ಹಿಂದಿರುಗಿದ್ದ ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಕ್ಷ ಜಾನ್ಸನ್ ಗಾಂಧೀಜಿಯವರ ಜೀವನ ಹಾಗೂ ಹೋರಾಟದ ಬಗ್ಗೆ ಮಾಡಿದ ಭಾಷಣ ಕೇಳಿ ಕಿಂಗ್ ಬಹಳಷ್ಟು ಪ್ರಭಾವಿತರಾದರು. ಅದನ್ನು ಅವರ ಹೇಳಿಕೆಯಲ್ಲಿ ಕಾಣಬಹುದಾಗಿದೆ. 'ಗಾಂಧೀಜಿ ಸಂದೇಶ ಎಷ್ಟು ಪ್ರಭಾವ ಪೂರ್ಣ ಹಾಗೂ ಪ್ರಚೋದಕವಾಗಿತ್ತು ಎಂದರೆ ನಾನು ಕೂಡಲೆ ಸಭೆಯಿಂದ ಹೊರನಡೆದು ಗಾಂಧಿಜಿಯ ಜೀವನ ಮತ್ತು ಹೋರಾಟ ಕುರಿತ ಅರ್ಧ ಡಜನ್ ಪುಸ್ತಕಗಳನ್ನು ಕೊಂಡು ತಂದೆ'

ಗಾಂಧೀಜಿಯವರ ಪುಸ್ತಕಗಳನ್ನು ಓದಿ ಕಿಂಗ್ ಅವರ ಅಹಿಂಸಾತ್ಮಕ ಚಳವಳಿಯಿಂದ ಅಕರ್ಷಿತರಾದರು. ಅಹಿಂಸಾತ್ಮಕ ಹೋರಾಟದ ಬಗ್ಗೆ ಕಿಂಗ್ ಅವರಿಗೆ ಇದ್ದ ಅನುಮಾನಗಳು ದೂರವಾದವು. ಅಹಿಂಸಾತ್ಮಕ ಪ್ರತಿಭಟನಾ ಚಳವಳಿಯನ್ನು ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಬಳಸಬಹುದೆಂಬುದು ಅವರಿಗೆ ಮನದಟ್ಟಾಯಿತು. ಬೆನ್‌ಥಮ್ ಮಿಲ್ಸ್, ಮಾರ್ಕ್ಸ್, ಲೆನಿನ್, ಎ ಜೆ ಮಸ್ಟ್ ಇವರಿಂದ ಪಡೆಯಲಾಗದ ಬೌದ್ಧಿಕ ಮತ್ತು ನೈತಿಕ ತೃಪ್ತಿಯನ್ನು ಕಿಂಗ್ ಗಾಂಧೀಜಿಯವರ ಅಹಿಂಸಾತ್ಮಕ ಸಿದ್ಧಾಂತದಲ್ಲಿ ಕಂಡುಕೊಂಡರು.

ಅಮೇರಿಕೆಯ ಮಾಂಟ್‌ಗೊ ಮೇರಿ ಪಟ್ಟಣದಲ್ಲಿ ಸಾರ್ವಜನಿಕ ಬಸ್ಸುಗಳಲ್ಲಿ ಕಪ್ಪುವರ್ಣಿಯರನ್ನು ಪ್ರತ್ಯೇಕಿಸಲಾಗಿತ್ತು, ಹಾಗೂ ನಿರ್ಬಂಧವನ್ನು ಹೇರಲಾಗಿತ್ತು. ಬಸ್ ಪ್ರಯಾಣವನ್ನು ಬಹಿಷ್ಕರಿಸಿ ಕಪ್ಪುವರ್ಣಿಯರು ಮಾರ್ಟಿನ್ ಲೂಥರ್ ಕಿಂಗ್ ಹಾಗೂ ಅವರ ಸಂಗಡಿಗರ ನೇತೃತ್ವದಲ್ಲಿ ಒಂದು ವರ್ಷ ಅಹಿಂಸಾತ್ಮಕ ಯಶಸ್ವಿ ಹೋರಾಟ ನಡೆಸಿದರು. ಬಸ್ಸಿನಲ್ಲಿ ಕಪ್ಪುವರ್ಣಿಯರನ್ನು ಪ್ರತ್ಯೇಕಿಸಿದ್ದು ಅಸಂವಿಧಾನಿಕ ಎಂದು ಅಮೇರಿಕೆಯ ಸುಪ್ರೀಮ್ ಕೋರ್ಟ ತೀರ್ಪು ನೀಡಿತು. ಅಹಿಂಸಾತ್ಮಕ ಹೋರಾಟಕ್ಕೆ ಸಂದ ಯಶಸ್ಸು ಮಾರ್ಟಿನ್ ಲೂಥರ್ ಕಿಂಗ್ ಅವರಲ್ಲಿ ಗಾಂಧಿಜಿಯವರ ಚಳವಳಿಯ ಬಗ್ಗೆ ಸಂಪೂರ್ಣ ಭರವಸೆ ಮೂಡಿಸಿತು. 'ಜೀಸಸ್ ನಮಗೆ ಮಾರ್ಗವನ್ನು ತೋರಿಸಿದರೆ ಅದರಲ್ಲಿ ಸಾಗಿ ಯಶಸ್ಸು ಗಳಿಸಬಹುದು ಎಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು' ಎಂದು ಮಾಂಟ್‌ಗೋ ಮೇರಿ ಘಟನೆಯ ನಂತರ ಮಾರ್ಟಿನ್ ಲೂಥರ್ ಕಿಂಗ್ ಹೇಳಿದರು. ಗಾಂಧೀ ತತ್ವದಿಂದ ಪ್ರಭಾವಿತರಾದ ಕಿಂಗ್ ಅವರಿಗೆ ಗಾಂಧಿಜಿಯವರಿಗೆ ಸಂಬಂದಿಸಿದ ಎಲ್ಲ ವಿಷಯಗಳಲ್ಲಿ ಅಪಾರ ಆಸಕ್ತಿ ಬೆಳೆಯಿತು. ತಮ್ಮ ಓದುವ ಕೋಣೆಯಲ್ಲಿ ಗಾಂಧಿಯವರ ದೊಡ್ಡ ಫೋಟೋವನ್ನು ಮಾತ್ರ ಹಾಕಿಕೊಂಡದ್ದು ಇದಕ್ಕೊಂದು



ಆನೆ (ಗಾಂಧಿ) ಮತ್ತು ಕುರುಡರು

ಮುಟ್ಟಿ ಸೊಂಡಿಲನು ಮುಂಡಿಗೆ ಎಂಬ,
ಮುಟ್ಟಿ ಕಿವಿಗಳನು ಮೊರವೆಂದೆಂಬ,
ಮುಟ್ಟಿ ಹೊಟ್ಟೆಯನು ಗೋಡೆ ಇದೆಂಬ,
ಕುರುಡರ ಕಾಣ್ಕೆಯ ಕಾಣಯ್ಯ?

– ಕುವೆಂಪು
15–2–1934, (ಮಂತ್ರಾಕ್ಷತೆ)

ನಿದರ್ಶನ. ವರ್ಣಭೇದ ನೀತಿಯ ವಿರುದ್ಧ ಕಿಂಗ್ ಅವರೊಡನೆ ಹೋರಾಟದಲ್ಲಿ ಭಾಗಿಯಾಗಿದ್ದ ಜೇಮ್ಸ್ ಲಾಸನ್, ಜೇಮ್ಸ್ ಬೇವೆಲ್ ಹಾಗೂ ಇನ್ನಿತರರು ಸಹ ಗಾಂಧೀಜಿಯವರ ಬರಹಗಳಿಂದ ಪ್ರೇರಿತರಾಗಿದ್ದರು.

ಮಾರ್ಟಿನ್ ಲೂಥರ್ ಕಿಂಗ್ ಗಾಂಧಿಜಿ ಕರ್ಮಭೂಮಿ ಭಾರತಕ್ಕೆ 1959ರಲ್ಲಿ ಭೇಟಿ ನೀಡಿದರು. ಗಾಂಧೀಜಿಗೆ ಸಂಬಂದಿಸಿದ ಎಲ್ಲ ಸ್ಥಳಗಳಿಗೆ ಭೇಟಿ ನೀಡಿ ಅವರ ಸಹಚರರೊಡನೆ ಮಾತನಾಡಿ ಸಂಭ್ರಮಿಸಿದರು, ಸಂತೃಪ್ತರಾದರು. 'ಉಳಿದ ದೇಶಗಳಿಗೆ ನಾನು ಪ್ರವಾಸಿಗನಾಗಿ ಹೋದರೆ ಗಾಂಧೀಜಿ ಭಾರತಕ್ಕೆ ಮಾತ್ರ ನಾನು ತೀರ್ಥಯಾತ್ರಿಕನಾಗಿ ಬಂದಿದ್ದೇನೆ' ಎಂದು ಹೇಳಿ ಗಾಂಧೀಜಿಯವರ ಬಗೆಗಿನ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

2009ರಲ್ಲಿ ಅಮೇರಿಕೆಯ ಶಾಸನಸಭೆ (ಹೌಸ್ ಆಫ್ ರಿಪ್ರಸೆಂಟೇಟಿವ್ಸ್)ಕಿಂಗ್ ಹಾಗೂ ಸಹವರ್ತಿಗಳ ಮೇಲೆ ಗಾಂಧೀಜಿಯವರ ಪ್ರಭಾವ ಹಾಗೂ 1959ರ ಭಾರತ ಬೇಟಿಯ ಸುವರ್ಣ ಮಹೋತ್ಸವ ಸ್ಮರಣಾರ್ಥ ಒಂದು ಠರಾವನ್ನು ಪಾಸುಮಾಡಿ ತನ್ನ ಗೌರವವನ್ನು ಸಲ್ಲಿಸಿತು. 1964ರಲ್ಲಿ ಕಿಂಗ್ ನೊಬೆಲ್ ಪಾರಿತೋಷಕವನ್ನು ಪಡೆದರು. ತಮ್ಮ ಪ್ರಶಸ್ತಿ ಸ್ವೀಕಾರ ಭಾಷಣದಲ್ಲಿ ಗಾಂಧೀಜಿ ಹಾಗೂ ಅವರು ಹುಟ್ಟು ಹಾಕಿದ ಅಹಿಂಸಾತ್ಮಕ ಚಳವಳಿಯ ಬಗ್ಗೆ ಸುದೀರ್ಘವಾಗಿ ಚರ್ಚೆಮಾಡಿದರು.


ಗಾಂಧಿ ಪ್ರಭಾವ ಇಂದಿಗೂ ದೇಶವಿದೇಶಗಳಲ್ಲಿ ಪ್ರೇರಕ ಶಕ್ತಿಯಾಗಿದೆ. ವಿಶ್ವವಿನಾಶದ ವಿರುದ್ಧ ಸೆಣೆಸಲು ಸಮಗ್ರ ಕಾರ್ಯಕ್ರಮ ರೂಪಿಸಲು 1981ರಲ್ಲಿ 53 ಜನ ನೊಬೆಲ್ ಪುರಸ್ಕೃತರು ಸಭೆ ಸೇರಿದರು. 'ವಿನಾಶವನ್ನು ತಡೆಯುವುದು ಭೂಮಂಡಲದ ಪ್ರಬಲರ ಮೇಲೆ ಹೆಚ್ಚು ಹೊಣೆಯಿದೆ. ಅವರಷ್ಟೇ ಅಲ್ಲ, ಅಬಲರು ಸಂಘಟಿತರಾಗಿ ಮಹಾತ್ಮಾಗಾಂಧೀಯವರು ತೋರಿಸಿಕೊಟ್ಟ ಅಹಿಂಸಾತ್ಮಕ ಕಾರ್ಯಚರಣೆ ನಡೆಸಿದರೆ ನಮ್ಮ ಕಾಲದ ವಿಶ್ವ ವಿನಾಶವನ್ನು ಕೊನೆಗಾಣಿಸುವುದು ಖಂಡಿತ ಸಾಧ್ಯ' ಎಂಬುದು ಅವರ ಏಕಮತದ ಅಭಿಪ್ರಾಯವಾಗಿತ್ತು.

2009ರಲ್ಲಿ ಅಮೇರಿಕೆಯ ಕಪ್ಪು ವರ್ಣೀಯ ವ್ಯಕ್ತಿಯೊಬ್ಬ ಪ್ರಪ್ರಥಮ ಬಾರಿ ಆ ದೇಶದ ಅಧ್ಯಕ್ಷರಾದರು. ಈ ಇತಿಹಾಸ ನಿರ್ಮಿಸಿದ ಬರಾಕ್ ಒಬಾಮಾ ತಮಗೆ ಅತಿ ದೊಡ್ಡ ಪ್ರೇರಣೆ ದೊರೆತದ್ದು ಗಾಂಧೀಜಿಯವರಿಂದ ಎಂದು ಹೇಳಿಕೊಂಡುದು ನಿದರ್ಶನವಾಗಿದೆ. ಜೀವಂತ ಇಲ್ಲವೆ ಗತಿಸಿ ಹೋದ ಯಾವುದಾದರೊಬ್ಬ ವ್ಯಕ್ತಿಯೊಡನೆ ತಾವು ಊಟ ಮಾಡುವುದಾದರೆ ಯಾರನ್ನು ಆಯ್ಕೆ ಮಾಡುತ್ತೀರಿ ಎಂಬ ಪ್ರಶ್ನೆಗೆ ಒಬಾಮಾ ಥಟ್ಟನೆ ಹೇಳಿದ್ದು ಮಹಾತ್ಮಾ ಗಾಂಧಿಯವರ ಹೆಸರನ್ನು.

ಬಿಡುಗಡೆ, ಸಮಾನತೆಗಾಗಿ ಅಪೂರ್ವ ಯಶಸ್ವಿ ಹೋರಾಟ ನಡೆಸಿದ ದಕ್ಷಿಣ ಆಫ್ರಿಕೆಯ ಮಹಾನ್ ನಾಯಕ ನೆಲ್ಸನ್ ಮಂಡೆಲಾ ಗಾಂಧಿ ತತ್ವದಿಂದ ತಾನು ಗಾಢವಾಗಿ ಪ್ರೇರಿತನಾದೆ ಎಂದಿದ್ದಾರೆ. ಕಲಹ, ದ್ವೇಷ, ಹಿಂಸೆಗಳಿಂದ ಜರ್ಜರಿತವಾಗಿರುವ ವಿಶ್ವದ ಉಳಿವಿಗೆ ಗಾಂಧಿಜಿಯವರ ಶಾಂತಿ ಮತ್ತು ಅಹಿಂಸಾ ಸಂದೇಶ ಮಾತ್ರ ಆಶಾಕಿರಣವಾಗಿದೆ ಎನ್ನುವುದು ನೆಲ್ಸ ನ್ ಮಂಡೆಲಾ ಅವರ ಬಲವಾದ ನಂಬಿಕೆಯಾಗಿತ್ತು. 27ವರ್ಷ ಜೈಲುವಾಸದ ಅವಧಿಯಲ್ಲಿ ಅವರಿದ್ದ ಕೋಣೆ ಗಾಂಧೀಜಿಯವರ ಪುಸ್ತಕಗಳಿಂದ ತುಂಬಿಹೋಗಿತ್ತಂತೆ.

ವಿಶ್ವದ 102 ದೇಶಗಳಲ್ಲಿ ಗಾಂಧೀಜಿ ಪುತ್ಥಳಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಗಾಂಧೀಜಿ ಒಮ್ಮೆಯೂ ಭೇಟಿ ನೀಡದ ಅಮೇರಿಕೆಯಲ್ಲಿ 24 ಪುತ್ಥಳಿಗಳು ಇವೆ ಎಂಬುದು ಸೋಜಿಗದ ಸಂಗತಿ. ಹೊರದೇಶಗಳಲ್ಲಿ 50ಕ್ಕೂ ಹೆಚ್ಚು ಗಾಂಧಿ ಸ್ಮಾರಕಗಳು ನಿರ್ಮಾಣಗೊಂಡಿವೆ. ವಿಶ್ವದ 80 ರಾಷ್ಟ್ರಗಳಲ್ಲಿ 250ಕ್ಕೂ ಹೆಚ್ಚು ಗಾಂಧಿ ಅಂಚೆ ಸ್ಟಾಂಪುಗಳನ್ನು ಬಿಡುಗಡೆಗೊಳಿಸಲಾಗಿದೆ. ಗಾಂಧೀಜಿಯವರ ನೆಚ್ಚಿನ ವೈಷ್ಣವ ಜನತೊ ಗೀತೆಯನ್ನು 124 ದೇಶಗಳ 'ಹೆಸರಾಂತ ಕಲಾವಿದರು ಹಾಡಿ ಗಾಂಧೀಜಿಯವರಿಗೆ ಸಂಗೀತಮಯ ಗೌರವ ಸಲ್ಲಿಸಿದ್ದಾರೆ. ವಿಶ್ವದಾದ್ಯಂತ ಗಾಂಧಿ ಹಾಗೂ ಗಾಂಧೀ ತತ್ವದ ಬಗ್ಗೆ ತಿಳಿಯಬೇಕೆಂಬ ಹಂಬಲ ನಿರಂತರ ಹೆಚ್ಚುತ್ತಿರುವುದು ಗಮನಾರ್ಹ. ಗಾಂಧೀ ಪ್ರಭಾವ ಸೀಮಾತೀತ.

■



ಮಹಾತ್ಮ ಮತ್ತು ಗುರುದೇವ

ಎರಡು ಮೇರು ವ್ಯಕ್ತಿತ್ವಗಳು ಸಂಧಿಸಿದಾಗ ಏನಾಗುತ್ತದೆ? ಮೊದಲು ವಿಚಾರಗಳ ವಿನಿಮಯವಾಗುತ್ತದೆ, ಮತ್ತೆ ವಿಚಾರ ಮಂಥನಗಳು ಶುರುವಾಗುತ್ತವೆ, ಜೊತೆಗೊಂದಿಷ್ಟು ವಾಗ್ವಾದಗಳೂ ಕೂಡ. ಅವೆಲ್ಲದರಾಚೆಗೆ ಒಂದಿಷ್ಟು ಹೊಸ ಅರಿವುಗಳು ಹುಟ್ಟಿಕೊಳ್ಳುತ್ತವೆ. ಹೌದು, ಇವೆಲ್ಲವೂ ಆರೋಗ್ಯಕರವಾದ ಸಂವಾದದ ಸಾಧ್ಯತೆಗಳು. ಗಾಂಧೀಜಿ ಮತ್ತು ಟ್ಯಾಗೋರ್‌ರ ನಡುವಿನ ನಾಲ್ಕು ದಶಕಗಳ ಒಡನಾಟ ಇಂಥದೊಂದು ಮವಾದ ಪರಂಪರೆಗೆ ಸಾಕ್ಷಿಯಾಗಿ ನಿಂತಿವೆ.


ಗಾಂಧೀಜಿಯವರು ಸತ್ಯಕ್ಕಾಗಿ ಶಾಂತಿಯುತವಾಗಿ ಆಗ್ರಹಿಸುವ ಸತ್ಯಾಗ್ರಹವೆಂಬ ಹೊಸಪರಿಕಲ್ಪನೆಯನ್ನು ವಿಶ್ವಕ್ಕೆ ನೀಡಿದವರು. ಟ್ಯಾಗೋರ್ ತಮ್ಮ ವಿಶ್ವಪ್ರೇಮದ ಪ್ರಾರ್ಥನಾ ಗೀತೆಗಳಿಗಾಗಿ ನೊಬೆಲ್ ಪಾರಿತೋಷಕ ಪಡೆದವರು. ಯುವಜನರ ಶಿಕ್ಷಣದ ಬಗ್ಗೆ ಇಬ್ಬರೂ ಅತೀವವಾದ ಕಾಳಜಿಯನ್ನು ಹೊಂದಿದ್ದರು. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಫೀನಿಕ್ಸ್ ಆಶ್ರಮವನ್ನು ಸ್ಥಾಪಿಸಿದ ಕಾಲದಲ್ಲಿಯೇ ಟ್ಯಾಗೋರರು ಬಂಗಾಳದಲ್ಲಿ ಶಾಂತಿನಿಕೇತನವನ್ನು ಆರಂಭಿಸಿದರು. ಒಂದೇ ದೇಶದ ಇಬ್ಬರು ವ್ಯಕ್ತಿಗಳು ವಿಶ್ವದ ಬೇರೆಬೇರೆ ಮೂಲೆಗಳಲ್ಲಿ ಒಂದೇ ಉದ್ದೇಶಕ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸಿದ್ದು ಅವರ ಸಮಾನಾಸಕ್ತಿಯನ್ನು ಸೂಚಿಸುತ್ತದೆ.


ಹಾಗೆಂದು ಅವರಿಬ್ಬರಲ್ಲಿ ಅನೇಕ ವಿಚಾರ ಬೇಧಗಳಿದ್ದವು. ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾಗಿ ಗಾಂಧೀಜಿಯವರು ಕಾಂಗ್ರೆಸ್ ನ ಮೂಲಕ ಹುಟ್ಟುಹಾಕಿದ ರಾಷ್ಟ್ರೀಯ ಚಳುವಳಿಯ ಬಗ್ಗೆ ಟ್ಯಾಗೋರರಿಗೆ ತೀವ್ರ ಅಸಮಾಧಾನವಿತ್ತು. ಅದರ ದೂರಗಾಮಿ ಪರಿಣಾಮ ಉತ್ತಮವಾಗಿರದು ಎಂದು ಅವರು ಎಚ್ಚರಿಸಿದ್ದರು. ಆದರೆ ಗಾಂಧೀಜಿಯವರು ಯುರೋಪಿನಿಂದ ಎರವಲು ಪಡೆದ ಈ ರಾಷ್ಟ್ರೀಯತಾ ಆಂದೋಲನವನ್ನು ದೇಶಭಕ್ತಿಯ ಚಳುವಳಿಯನ್ನಾಗಿ ರೂಪಾಂತರಿಸುತ್ತೇವೆ ಎನ್ನುತ್ತಿದ್ದರು. ಟ್ಯಾಗೋರರದು ರಾಷ್ಟ್ರಗಳ ಎಲ್ಲೆಯನ್ನು ಮೀರಿದ ವಿಶ್ವಪ್ರೇಮದ ದಾರಿಯಾದರೆ, ಗಾಂಧೀಜಿಯವರದ್ದು ವ್ಯಕ್ತಿತ್ವ ಶುದ್ಧಿಯ ಮೂಲಕ ತನ್ನೊಳಗೆ ವಿಶ್ವವನ್ನು ಧರಿಸುವ ಮಾರ್ಗ. ಒಬ್ಬರನ್ನೊಬ್ಬರು ಕಟುವಾಗಿ ಟೀಕಿಸುತ್ತಲೇ ಅವರು ಒಬ್ಬರಿನ್ನೊಬ್ಬರ ಮೇಲೆ ಗೌರವವನ್ನಿಟ್ಟುಕೊಂಡಿದ್ದರು.

ಗಾಂಧೀಜಿಯವರನ್ನು ಮೊದಲ ಬಾರಿಗೆ 'ಮಹಾತ್ಮಾ' ಎಂದು ಕರೆದವರು ಟ್ಯಾಗೋರರು. ಹಾಗೆಯೇ ಗಾಂಧೀಜಿಯವರು ಟ್ಯಾಗೋರರನ್ನು 'ಗುರುದೇವ' ಎಂದು ಕರೆಯುತ್ತಿದ್ದರು. ಶಾಂತಿನಿಕೇತನಕ್ಕೆ ಭೇಟಿನೀಡಿದಾಗ ಅಲ್ಲಿಯ ವಿದ್ಯಾರ್ಥಿಗಳಿಗೆ ಅವರ ಅಡುಗೆಯನ್ನು ಅವರೇ ತಯಾರಿಸಿಕೊಳ್ಳುವುದನ್ನು ಕಲಿಸಿ ಎಂಬ ಸಲಹೆಯನ್ನು ಗಾಂಧೀಜಿಯವರು ನೀಡಿದರು. ಹಣಕಾಸಿನ ಸಮಸ್ಯೆಯಾದಾಗ ತಾನೇ ಮುಂದೆನಿಂತು ಸಂಸ್ಥೆಗೆ ನೆರವನ್ನು ನೀಡಿದರು. ಅಂತೆಯೇ ಗಾಂಧೀಜಿಯವರ ಸತ್ಯದ ಪ್ರಯೋಗಗಳನ್ನು ಟ್ಯಾಗೋರರು ಬಹಳ ಮೆಚ್ಚಿಕೊಂಡಿದ್ದರು. ಕಡೆಯ ದಿನಗಳಲ್ಲಿ ಗಾಂಧೀಜಿಯವರು ಉಪವಾಸ ಸತ್ಯಾಗ್ರಹಗಳನ್ನು ನಡೆಸುವಾಗ ತೀವ್ರವಾಗಿ ಕಳವಳಗೊಂಡಿದ್ದರು. ಇಬ್ಬರೂ ಅನೇಕ ಪತ್ರಗಳನ್ನು ಬರೆದುಕೊಂಡಿದ್ದರು.

ವಿರೋಧಿಸಬೇಕಾದದ್ದು ವ್ಯಕ್ತಿಯನ್ನಲ್ಲ, ವಿಚಾರಗಳನ್ನು ಮಾತ್ರ. ಇಬ್ಬರಲ್ಲಿ ವೈರುಧ್ಯವಾದ ಅಭಿಪ್ರಾಯಗಳಿರುವಂತೆ ಸಹಮತದ ವಿಚಾರಗಳೂ ಇರುತ್ತವೆ. ಎಲ್ಲವನ್ನೂ ಮುಕ್ತವಾದ ಸಂವಾದದ ಮೂಲಕವೇ ಎದುರುಗೊಳ್ಳಬಹುದು ಎಂಬುದಕ್ಕೆ ಗಾಂಧೀಜಿ ಮತ್ತು ಟ್ಯಾಗೋರರು ಬಹುದೊಡ್ಡ ನಿದರ್ಶನವಾಗಿದ್ದಾರೆ.

ಸಂಗ್ರಹ : ಸುಧಾ ಅಡುಕುಳ ■





ಕೊನೆಯ ಹೀರೋಗಳು

ಭಾರತ ಸ್ವಾತಂತ್ರ್ಯದ ಕಾಲಾಳು ಯೋಧರು

- ಪಿ. ಸಾಯಿನಾಥ್

"ಈ ಜಗತ್ತಿನಲ್ಲಿ ಜರುಗಿದ ಕ್ರಾಂತಿಗಳಿಗೆ ಮಹಾಪುರುಷರೇ ಕಾರಣ ಎಂದು ಭಾವಿಸಲಾಗಿದೆ.

ನಿಜವಾಗಿ ಹೇಳಬೇಕೆಂದರೆ ಜನರೇ ಅದಕ್ಕೆ ಕಾರಣರು"

– ಎಂ ಕೆ ಗಾಂಧಿ, 17 ಜನವರಿ 1931

ಯರವಾಡ ಸೆಂಟ್ರಲ್ ಜೈಲಿನಿಂದ ಬರೆದ ಪತ್ರದಲ್ಲಿ

ದೆಮಾತಿ ಡೆ ಸಬರ್ ಸಾಲಿಹಾನ್ ಸ್ವಾತಂತ್ರ್ಯ ಹೋರಾಟಗಾರಳಲ್ಲ. ಭಾರತ ಸರ್ಕಾರಕ್ಕಂತೂ ಅಲ್ಲವೇ ಅಲ್ಲ. ಆದರೂ ಕೇವಲ 16 ವರ್ಷದ ಈ ಆದಿವಾಸಿ ತರುಣಿ ಒಡಿಶಾದ ತನ್ನ ಗ್ರಾಮದ ಮೇಲೆ ದಾಳಿ ಮಾಡಿದ ಬ್ರಿಟಿಷ್ ಪೊಲೀಸರ ವಿರುದ್ಧ ಅದ್ಭುತ ಪ್ರತಿದಾಳಿಯನ್ನು ಮುನ್ನಡೆಸಿದಳು. ಈಕೆ ಹಾಗೂ 40 ಇತರ ಬುಡಕಟ್ಟು ಮಹಿಳೆಯರು ಸಶಸ್ತ್ರ ಪೊಲೀಸ್ ಪಡೆಯನ್ನು ಕೇವಲ ಲಾಠಿಗಳಿಂದ ಎದುರಿಸಿ ಗೆದ್ದರು.

ಆಕೆ ಜೈಲಿಗೆ ಹೋಗಲಿಲ್ಲ. ಆಕೆ ಸಂಘಟಿತ ರಾಜಕೀಯದ ಭಾಗವಾಗಿರಲಿಲ್ಲ. ನಾಗರಿಕ ಅಸಹಕಾರ ಅಥವಾ ಕ್ವಿಟ್ ಇಂಡಿಯಾದಂತಹ ಚಳವಳಿಯಲ್ಲಿ ಯಾವುದೇ ಪಾತ್ರ ವಹಿಸಿರಲಿಲ್ಲ. ಈಕೆ ತನ್ನ ಜೀವವನ್ನೇ ಪಣಕ್ಕಿಟ್ಟು ಹೋರಾಟ ನಡೆಸಿದ ಆಕೆಯ ಗ್ರಾಮ ಸಾಲಿಹಾದಲ್ಲಿ ಈಗಲೂ ಈಕೆಯ ಶೌರ್ಯದ ಬಗ್ಗೆ ಮಾತನಾಡುತ್ತಾರೆ. ಆದರೆ ಇದೇ ಗ್ರಾಮದಲ್ಲಿ ನಿರ್ಮಿಸಿರುವ ಸ್ಮಾರಕದಲ್ಲಿ ಪ್ರತಿರೋಧ ತೋರಿದ 17 ಜನರ ಹೆಸರನ್ನು ನಮೂದಿಸಲಾಗಿದೆ. ಆದರೆ, ಆ ಪಟ್ಟಿಯಲ್ಲಿ ಈಕೆಯ ಹೆಸರೇ ಇಲ್ಲ.

ಸಾಲಿಹಾನ್ಳಿಗೆ ಭಾರತ ಸರ್ಕಾರ ಎಂದಿಗೂ ಸ್ವಾತ್ರಂತ್ರ್ಯ ಹೋರಾಟಗಾರ್ತಿಯ ಗೌರವವನ್ನು ನೀಡಲಿಲ್ಲ.

ಆದರೆ, ಈ ಕೃತಿ ನೀಡಿದೆ.

ಇನ್ನು ಮುಂದಿನ ಐದಾರು ವರ್ಷಗಳಲ್ಲಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬರೂ, ಅಂದರೆ ಯಾರೊಬ್ಬರೂ ಬದುಕುಳಿದಿರುವುದಿಲ್ಲ. ಈ ಕೃತಿಯಲ್ಲಿ ಕಾಣಿಸಿಕೊಂಡಿರುವವರ ಪೈಕಿ ಅತಿ ಕಿರಿಯರೆಂದರೆ 92 ವರ್ಷದವರು ಹಾಗೂ ಹಿರಿಯರೆಂದರೆ 104 ವರ್ಷದವರು. ಭಾರತದ ಹೊಸ ತಲೆಮಾರಿನ ಯುವ ಜನರಿಗೆ ಈ ಸ್ವಾತಂತ್ರ್ಯ ಯೋಧರನ್ನು ಎಂದೂ ಭೇಟಿಯಾಗಲು, ನೋಡಲು, ಮಾತನಾಡಲು ಅವಕಾಶವೇ ದೊರೆಯುವುದಿಲ್ಲ. ನಾವು ಯಾರು, ಯಾವ ಕಾರಣಕ್ಕಾಗಿ ಹೋರಾಟ ಮಾಡಿದೆವು ಎಂದು ಅವರೇ ಖುದ್ದಾಗಿ ಹೇಳಲು ಸಿಗುವುದಿಲ್ಲ.

ಭಾರತ ಸ್ವಾತಂತ್ರ್ಯದ 75 ನೆಯ ವರ್ಷದಲ್ಲಿ ಬಹುತೇಕ ಕೃತಿಗಳು, ಅದರಲ್ಲಿಯೂ ಯುವಜನರಿಗಾಗಿ ಇರುವ ಪುಸ್ತಕಗಳು, ಕೆಲವು ಆಯ್ದ ವ್ಯಕ್ತಿಗಳನ್ನು ಮಾತ್ರ ಈ ದೇಶ ಹುಟ್ಟುವುದಕ್ಕೆ ಕಾರಣ ಎನ್ನುವಂತೆ ಚಿತ್ರಿಸಿವೆ. ಇದರ ಮಧ್ಯೆಯೂ ಕೆಲವು ಒಳ್ಳೆಯ ಪಠ್ಯಪುಸ್ತಕಗಳು ಸ್ವಾತಂತ್ರ್ಯ ಹಾಗೂ ಬಿಡುಗಡೆಗಾಗಿ ನಡೆದ ಹೋರಾಟವನ್ನು ವಿವೇಕಯುತವಾಗಿ ಹಾಗೂ ವಿವರವಾಗಿ ನೋಡಿವೆ. ಆದರೆ, ಇಂತಹವುಗಳನ್ನು ಒಂದು ರಾಜ್ಯದ ನಂತರ ಇನ್ನೊಂದು ರಾಜ್ಯವು ಹೊಸಗಿ ಹೊರಗೆ ಹಾಕಿ ಅದರ ಬದಲು ಭಯಾನಕ ಸುಳ್ಳುಗಳಿಂದ ಕೂಡಿದ ಪುಸ್ತಕಗಳನ್ನು ಮುಂದಿಡುತ್ತಿವೆ. ಈ ಪುಸ್ತಕಗಳು ಚರಿತ್ರೆ ಎಂದು ಕರೆಸಿಕೊಳ್ಳುವುದಿರಲಿ, ಪಠ್ಯಪುಸ್ತಕವಾಗಿ ಇರಲೂ ಸಹಾ ಅರ್ಹತೆ ಇಲ್ಲದ್ದು.

ಇಂದು ನಮ್ಮ ರಾಜಕೀಯ ಮತ್ತು ಸಾರ್ವಜನಿಕ ವಲಯದ ಪ್ರಕಾರ, ನಮ್ಮ ಸ್ವಾತಂತ್ರ್ಯ ಹೋರಾಟಡ ಆರಂಭವಾಗಿರುವುದು 800 ವರ್ಷಗಳ ಹಿಂದೆಯೇ. ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ಈ ರೀತಿ ಕಟ್ಟು ಕಥೆಯಾಗಿ ಮಾರ್ಪಡಿಸಿದರೆ ಕಥೆ ಎನ್ನುವ ಪ್ರಕಾರಕ್ಕೇ ಕೆಟ್ಟ ಹೆಸರು ತರುತ್ತವೆ. ಈ ಮಧ್ಯೆ, ಆ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಇಲ್ಲವಾಗುತ್ತಿದ್ದಾರೆ. ಈ ಕೃತಿಯಲ್ಲಿ ಚಿತ್ರಿಸಲ್ಪಟ್ಟವರ ಪೈಕಿ ಆರು ಮಂದಿ 2021 ಮೇ ನಂತರದಲ್ಲಿ ನಿಧನ ಹೊಂದಿದ್ದಾರೆ. ಅವರಲ್ಲಿ ಬದುಕುಳಿದಿರುವ ಕೆಲವರು ಇಂದು ನಮ್ಮೊಂದಿಗಿದ್ದಾರೆ. ಆದರೆ, ಅವರು ಹೆಚ್ಚು ವರ್ಷಗಳ ಕಾಲ ಇರುವುದಿಲ್ಲ ಎನ್ನುವುದು ದುಃಖದ ಸಂಗತಿ. ಮಲ್ಲು ಸ್ವರಾಜ್ಯಂ ಹಾಗೂ ಎಚ್.ಎಸ್. ದೊರೆಸ್ವಾಮಿಯವರನ್ನು ಹೊರತುಪಡಿಸಿದರೆ ಈ ಕೃತಿಯಲ್ಲಿರುವ ಇತರ ಹೋರಾಟಗಾರರು ಯಾವುದೇ ಪುಸ್ತಕದಲ್ಲೂ ಪ್ರಮುಖ ಪಾತ್ರಗಳಿಗಾಗಿ ಚಿತ್ರಿತವಾಗಿಲ್ಲ. ಶಾಲಾ ಪುಸ್ತಕಗಳಲ್ಲಂತೂ ಖಂಡಿತಾ ಇಲ್ಲ. ಅಥವಾ ಈ ದೇಶದ ಈ ಸಂಪತ್ತನ್ನು ಕಳೆದುಕೊಳ್ಳುತ್ತಿರುವುದರತ್ತ ಸಾಗುತ್ತಿರುವ ಯುವ ಪೀಳಿಗೆಗೆ ರೂಪಿಸಿರುವ ಪುಸ್ತಕಗಳಲ್ಲೂ ಇಲ್ಲ.

ಕೇಂದ್ರ ಸರಕಾರವು ಮಾಡಿರುವ 'ಹೆಸರುವಾರು ಹಾಗೂ ರಾಜ್ಯವಾರು ಸ್ವಾತಂತ್ರ್ಯ ಯೋಧರು ಹಾಗೂ ಅರ್ಹ ಅವಲಂಬಿತರ ಪಟ್ಟಿ'ಯಲ್ಲಿ 2022 ಜನವರಿ 31 ರವರೆಗೆ 23 ಸಾವಿರ ಹೆಸರುಗಳಿವೆ. ಇದು 'ಸ್ವಾತಂತ್ರತಾ ಸೈನಿಕ ಸಮ್ಮಾನ ಯೋಜನಾ' ಅಡಿ ಪಿಂಚಣಿಯನ್ನು ಪಡೆಯುತ್ತಿರುವವರ ದಾಖಲೆ. ಇವರ ಖಾತೆಗಳಿಗೆ ಪ್ರತೀ ತಿಂಗಳೂ 30 ಸಾವಿರ ರೂ. ಮೀರದಂತೆ ಹಣವನ್ನು ಪಾವತಿಸಲಾಗುತ್ತಿದೆ. ರಾಜ್ಯಗಳು ಹಾಗೂ ಕೇಂದ್ರೀಯ ವಲಯಗಳ ಪಿಂಚಣಿ ಪಟ್ಟಿಯಲ್ಲಿ ಇನ್ನೂ ಹಲವರಿದ್ದಾರೆ.

ಶಾಸನ ವಿಧಿಸಿದ ಎಚ್ಚರಿಕೆ: ಕಿರಿಕಿರಿ ಮಾಡುವ ಮತ್ತು ಅಧಿಕಾರಶಾಹಿಗೆ ಸಂಬಂಧಿಸಿದ ನಿಗೂಢ ವಿವರಗಳು ಮುಂದಿವೆ

ಸ್ವಾತಂತ್ರ್ಯ ಹೋರಾಟಗಾರರ ಅಧಿಕೃತ ಪಟ್ಟಿಗಳು ಶೋಚನೀಯ ಸ್ಥಿತಿಯಲ್ಲಿದ್ದು, ಅವು ಅಪೂರ್ಣವಾಗಿವೆ ಎನ್ನುವುದನ್ನು ಅರಿಯುವುದು ಮುಖ್ಯ. ಸಣ್ಣದಾಗಿ ಮುದ್ರಿಸಿರುವ ಭಾರತ ಸರ್ಕಾರದ ನಿಯಮಗಳನ್ನು ಓದುವುದು ನಿಮ್ಮ ಆರೋಗ್ಯಕ್ಕೆ ಹಾನಿಕರ ಎಂದು ನಮಗೆಲ್ಲರಿಗೂ ಗೊತ್ತಿರುವುದರಿಂದ, ಕೆಲವು ವಿವರಗಳನ್ನಷ್ಟೇ ಇಲ್ಲಿ ನೋಡೋಣ.

ಮೊದಲನೆಯದಾಗಿ, ಈ ಎಲ್ಲಾ ಪಟ್ಟಿಯಲ್ಲಿ ಮೊದಲಿನಿಂದಲೂ ಇದ್ದ ಬಹುತೇಕ ಮಂದಿ ಈಗ ಬದುಕಿಲ್ಲ. ಅಲ್ಲಿರುವ ಹೆಚ್ಚು ಹೆಸರುಗಳು ನಿಜ ಹೇಳಬೇಕೆಂದರೆ, ನಿಧನರಾಗಿ ಬಹುಕಾಲ ಸಂದಿರುವ ಸ್ವಾತಂತ್ರ್ಯಯೋಧರ ಮೇಲೆ ಅವಲಂಬಿತರಾಗಿರುವವರದ್ದು. ಈ ಹೋರಾಟಗಾರರ ಕುಟುಂಬಗಳು ಹಲವು ಪ್ರಕರಣಗಳಲ್ಲಿ ಅರ್ಹ ಅಲವಂಬಿತರ ಹೆಸರಿನಲ್ಲಿ ಅರ್ಧದಷ್ಟು ಪಿಂಚಣಿಗೆ ಮಾತ್ರ ಅರ್ಹರು. ಇದು ಒಳ್ಳೆಯದೇ. ಆದರೆ, ಪಟ್ಟಿಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ನಿಜಸಂಖ್ಯೆಯನ್ನು ಇದು ಗೊಂದಲಗೊಳಿಸುತ್ತದೆ. (ಈಗ ಬದುಕಿರುವರೂ ಸಹಾ ಅಶಕ್ತರಾಗಿದ್ದಾರೆ)

ಎರಡನೆಯದಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅತಿದೊಡ್ಡ ಸಂಖ್ಯೆಯ ಹೋರಾಟಗಾರರೆಲ್ಲರೂ ಈ ಅಧಿಕೃತ ಪಟ್ಟಿಯಲ್ಲಿ ಕಾಣಿಸುವುದಿಲ್ಲ. 1972ರಲ್ಲಿ ಈ ರೀತಿಯ ಮೊದಲ ಪಿಂಚಣಿ ಯೋಜನೆ ಆರಂಭವಾದಾಗ ಎಡ ಪಕ್ಷಗಳು ತಮ್ಮ ಸದಸ್ಯರುಗಳು ಈ ಪಿಂಚಣಿಯನ್ನು ಒಪ್ಪಿಕೊಳ್ಳಬಾರದು ಎಂದು ನಿರ್ಧರಿಸಿದರು. ಅವರಲ್ಲಿ ಒಬ್ಬರಾದ ಎನ್. ಶಂಕರಯ್ಯ ಅವರು ಈ ಕೃತಿಯಲ್ಲಿ 'ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು, ಪಿಂಚಣಿಗಾಗಿ ಅಲ್ಲ' ಎಂದು ಹೇಳಿರುವುದು ದಾಖಲಾಗಿದೆ.

ಇದರ ಅರ್ಥ ಸಾವಿರಾರು ಹೋರಾಟಗಾರರು ಈ ಪಟ್ಟಿಯಲ್ಲಿ ಎಂದೂ ಕಾಣಿಸಿಕೊಂಡಿಲ್ಲ. 1972ರಲ್ಲಿ ಆ ರೀತಿಯ ಹಲವಾರು ಮಂದಿ ಬದುಕಿದ್ದರು ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಆ ಪಟ್ಟಿಯೂ ಸಹಾ ಆ ಕಾಲದಲ್ಲಿ ತುಂಬಾ ಷರತ್ತುಗಳನ್ನು ಹೊಂದಿತ್ತು. ಯಾರು ವರ್ಷಕ್ಕೆ 5 ಸಾವಿರ ರೂ. ಒಳಗಿನ ಆದಾಯ ಹೊಂದಿದ್ದಾರೋ ಅವರಿಗೆ ಮಾತ್ರ ಪಿಂಚಣಿ ಅನ್ವಯವಾಗುತ್ತಿತ್ತು. ಮತ್ತು ಈ ಪಿಂಚಣಿಯೂ ಸಹಾ ತಿಂಗಳಿಗೆ 200 ರೂ. ಮಾತ್ರವಾಗಿತ್ತು.

1980ರ 'ಸ್ವಾತಂತ್ರತಾ ಸೈನಿಕ ಸಮ್ಮಾನ ಯೋಜನಾ' ಇದ್ದುದರಲ್ಲಿಯೇ ಉದಾರವಾಗಿತ್ತು. ಆದರೂ ಸಹಾ ಈ ಪಿಂಚಣಿಗೆ ಬೇಕಾಗಿದ್ದ ಮೊದಲ ಅರ್ಹತೆಯೇ ಸ್ವಾತಂತ್ರ್ಯಪೂರ್ವದಲ್ಲಿ ಮುಖ್ಯ ಜೈಲಿನಲ್ಲಿ ಕನಿಷ್ಠ ಆರು ತಿಂಗಳು ಸೆರೆವಾಸ ಅನುಭವಿಸಿರಬೇಕು ಎನ್ನುವುದು. ಮಹಿಳೆಯರು, ದಲಿತರು ಹಾಗೂ ಆದಿವಾಸಿಗಳಿಗೆ ಇದು ಮೂರು ತಿಂಗಳು.

ಇದು ಮತ್ತೆ ಇನ್ನಷ್ಟು ಮಂದಿ, ಸೆರೆವಾಸದಿಂದ ತಪ್ಪಿಸಿಕೊಂಡವರು (ಅವರು ಉಳಿದ ಆರು ಷರತ್ತುಗಳಲ್ಲಿ ಒಂದರಲ್ಲಾದರೂ ಅರ್ಹರಾಗದಿದ್ದರೆ) ಪಟ್ಟಿಯಿಂದ ಹೊರಬೀಳಲು ಕಾರಣವಾಯಿತು. ಹಾಗೆ ಮೂರರಿಂದ ಆರು ತಿಂಗಳ ಕಾಲ ಜೈಲು ವಾಸ ಮಾಡದಿದ್ದವರು, ಮತ್ತು ಕ್ರಾಂತಿಕಾರಿ ಚಳುವಳಿಯ ಭಾಗವಾಗಿ ಭೂಗತರಾಗಿ ಹೋರಾಟ ಮಾಡುತ್ತಿದ್ದ ಇನ್ನೂ ಹಲವರು ಕೂಡ ಈ ಪಟ್ಟಿಯಿಂದ ಹೊರಗೆ ಉಳಿದರು.

ನೇತಾಜಿ ಬೋಸ್ರ ಇಂಡಿಯನ್ ನ್ಯಾಷನಲ್ ಆರ್ಮಿಗೆ ಸೇರಿದ ಒಡಿಶಾದ ಮಹಿಳೆ ಲಕ್ಷ್ಮಿ ಪಾಂಡಾ ನನ್ನನ್ನು ಕೇಳಿದಂತೆ ನಾನು ಎಂದಿಗೂ ಜೈಲಿಗೆ ಹೋಗಲಿಲ್ಲ, ನಾನು ಬಂದೂಕು ತರಬೇತಿ ಪಡೆದರೂ ಯಾರ ಮೇಲೂ ಗುಂಡು ಹಾರಿಸಲಿಲ್ಲ, ಅಂದ ಮಾತ್ರಕ್ಕೆ ನಾನು ಸ್ವಾತಂತ್ರ್ಯ ಹೋರಾಟಗಾರಳಲ್ಲವಾ? ನಾನು ಕೆಲಸ ಮಾಡಿದ್ದು ಬ್ರಿಟಿಷರ ಬಾಂಬ್ಗಳಿಗೆ ಯಾವಾಗಲೂ ಗುರಿಯಾಗಿದ್ದ ಐಎಯ ಅರಣ್ಯ ಶಿಬಿರಗಳಲ್ಲಿ. ಇದರ ಅರ್ಥ ನಾನು ಸ್ವಾತಂತ್ರ್ಯ ಚಳವಳಿಗೆ ಯಾವ ರೀತಿಯ ಕೊಡುಗೆಯನ್ನೂ ಕೊಡಲಿಲ್ಲ ಎಂದೇ? ನನ್ನ 13ನೆಯ ವಯಸ್ಸಿನಲ್ಲಿಯೇ ನಾನು ನಮ್ಮ ಕ್ಯಾಂಪ್ಗಳಿಂದ ಹೋರಾಟಕ್ಕೆ ಹೋಗುತ್ತಿದ್ದ ಎಲ್ಲರಿಗೂ ಅಡುಗೆ ಬೇಯಿಸಿ ಹಾಕುತ್ತಿದ್ದೆ. ನಾನು ಹೋರಾಟದ ಭಾಗವಲ್ಲವೇನು?

ವಾಸ್ತವದಲ್ಲಿ ಯಾರು ಭೂಗತ ಶಿಬಿರಗಳಲ್ಲಿ ಕೆಲಸ ಮಾಡಲು ಆಯ್ಕೆ ಮಾಡಿಕೊಂಡರೋ ಅವರು ಅರ್ಹರಾಗಿರಲಿಲ್ಲ. ಈ ಯೋಜನೆಯ ದಾಖಲೆಯಲ್ಲಿನ ಒಂದು ನಮೂದು ಹೇಳುವ ಪ್ರಕಾರ, ಸ್ವಯಂ ಆಗಿ ಭೂಗತರಾಗುವುದು ಅಥವಾ ಸ್ವಯಂ ಗಡೀಪಾರಾಗುವುದು ಮತ್ತು ಪಕ್ಷದ ನಾಯಕತ್ವದ ಆದೇಶದಂತೆ ಪಕ್ಷದ ಕೆಲಸಕ್ಕಾಗಿ ಶ್ರಮಿಸುವುದು ಪಿಂಚಣಿಯ ಮಂಜೂರಾತಿಗೆ ಅನರ್ಹ ಎನಿಸಿಕೊಳ್ಳುತ್ತಿತ್ತು.

ಬ್ರಿಟಿಷ್ ವ್ಯವಸ್ಥೆ ಯಾರನ್ನು ತಪ್ಪಿತಸ್ಥರು ಎಂದು ಸಾರಿ, ಆ ಕಾರಣದಿಂದಾಗಿ ಭೂಗತರಾಗಿದ್ದರೋ ಅಥವಾ ಅವರ ವಿರುದ್ಧ ಬಂಧನದ ಆದೇಶವಿತ್ತೋ, ಅಥವಾ ಯಾರ ತಲೆಯ ಮೇಲೆ ಅಥವಾ ಬಂಧನಕ್ಕೆ ಬಹುಮಾನ ಘೋಷಿಸಲಾಗಿತ್ತೋ ಅವರಿಗೆ ಮಾತ್ರ ಪಿಂಚಣಿ ಸೌಲಭ್ಯ ವಿಸ್ತರಿಸಲಾಗಿತ್ತು. ಈ ನಿಯಮಗಳು ಲಕ್ಷ್ಮಿ ಪಾಂಡಾ, ಸಾಲಿಹಾನ್ ಹಾಗೂ ಇಂತಹ ಅಸಂಖ್ಯಾತರನ್ನು ಪಿಂಚಣಿಯಿಂದ ಹೊರಗಿಟ್ಟಿತು.

1980ರ ಪಿಂಚಣಿ ದಾಖಲೆಯಲ್ಲಿ ಇನ್ನೂ ಒಂದು ಸಮಸ್ಯೆ ಇತ್ತು. ಇದು ಸಂಗಾತಿ ಎನ್ನುವ ಪದದ ಬದಲು ವಿಧವೆ ಎಂಬ ಪದವನ್ನು ಬಳಸಿದೆ. ಇದು ಸ್ವಾತಂತ್ರ್ಯ ಹೋರಾಟಗಾರರೆಲ್ಲ ಪುರುಷರು ಮಾತ್ರ ಎಂದು ಭಾವನೆ ಬರುವಂತೆ ಮಾಡಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ 'ಭಾಗವಹಿಸುವುದು' ಎಂದರೆ ಸಮಾಜವಾಗಿ ನಾವು ಏನು ಭಾವಿಸಿದ್ದೆವೋ ಅದೂ ಪ್ರಶ್ನೆಗೊಳಗಾಗಿದೆ. ಕೇಂದ್ರದ ಯೋಜನೆಯ ಪ್ರಕಾರ ಸ್ವಾತಂತ್ರ್ಯ ಚಳವಳಿಯಲ್ಲಿ 'ಭಾಗವಹಿಸಿದರೆ' ಮಾತ್ರ ಸಾಲದು. ಅವರು 'ತೊಂದರೆಗೊಳಗಾಗಿರಬೇಕ' ಅದೂ ಸರ್ಕಾರ ರೂಪಿಸಿರುವ ರೀತಿಯಲ್ಲಿ.

ಅಧಿಕಾರಶಾಹಿ ಪ್ರಕಾರ 'ತೊಂದರೆಗೊಳಗಾದವರು' ಈ ಏಳು ನಿಯಮಗಳ ಚೌಕಟ್ಟಿನಲ್ಲಿರಬೇಕು. ಅವು– ಬಂಧನ ವಾಸ. ಅಪರಾಧಿ ಎಂದು ಘೋಷಿಸಲ್ಪಟ್ಟು ಭೂಗತರಾಗುವುದು, ಬಂಧನ/ತಲೆಮರೆಸಿಕೊಂಡಿರುವುದು ಅಥವಾ ಆಸ್ತಿ ಮುಟ್ಟುಗೋಲು ಮಾಡಿಕೊಂಡಿರುವುದು; ಮಾರಾಟ ಮಾಡಿರುವ ಪ್ರಕರಣಗಳು. (ಆದರೆ ಯಾವ ಆಸ್ತಿಯೂ ಇಲ್ಲದವರ ಕಥೆ ಏನು?)

ಇದಕ್ಕೆಲ್ಲಾ ಸಾಕ್ಷಿ ಒದಗಿಸುವುದು ಇನ್ನೊಂದು ಗೊಂದಲದ ಸಂತೆ. ಇನ್ನೊಂದೇ ದೊಡ್ಡ ಕಥೆ. ಮೊದಲ ಒತ್ತಾಯವೇ ನಿಮ್ಮ ಬಂಧನ ಅಥವಾ ನೀವು ಅಪರಾಧಿ ಎಂದು ಘೋಷಣೆಯಾಗಿರುವ ಆದೇಶವನ್ನು ಹಾಜರುಪಡಿಸುವುದು. ಸ್ವಾತಂತ್ರ್ಯ ಬಂದ ನಂತರದ ಕಾಲು ಶತಮಾನದ ಮಾತು ಬಿಡಿ, ಆಗಿನ ಕಾಲದಲ್ಲಿ ಎಷ್ಟು ಮಂದಿ ಬಡ ಭಾರತೀಯರಿಗೆ ದಾಖಲೆಗಳನ್ನು ಹೊಂದಲು ಸಾಧ್ಯವಿತ್ತು? ಈ ರೀತಿಯ ಯಾವುದೇ ಆದೇಶವೇ ಇಲ್ಲದೆ ಎಷ್ಟೊಂದು ಬಡ ಭಾರತೀಯರು ಶಿಕ್ಷೆಗೆ ಒಳಗಾಗಿಲ್ಲ?

ಈ ಕಾಯಿದೆ ಕಡ್ಡಾಯ ಮಾಡಿರುವ ನಿಯಮಗಳನ್ನು ಮೀರಿ ಹೋರಾಟದಲ್ಲಿ ತೀವ್ರ ಕಷ್ಟಕ್ಕೆ ಗುರಿಯಾದ ಸುಮಾರು ಜನರಿದ್ದರು. ಹಲವರು ಊಹಿಸಿಕೊಳ್ಳಲಾಗದ ಅಪಾಯಗಳನ್ನು ಮೈಮೇಲೆ ಎಳೆದುಕೊಂಡು, ಇತರ ಹಲವಾರು ರೀತಿಯಲ್ಲಿ ತೊಂದರೆ ಅನುಭವಿಸಿದ್ದರು. ಇಷ್ಟೋ ವಿಜಯಗಳು ಇವರಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಆದರೆ, ಅವರ ಕೆಲಸವನ್ನು ಅಷ್ಟು ಮುಖ್ಯವಾಗಿ ಪರಿಗಣಿಸದ ಕಾರಣ ಅಧಿಕಾರಿಗಳ ಕಣ್ಣಲ್ಲಿ ಅವರು ಸ್ವಾತಂತ್ರ್ಯ ಹೋರಾಟಗಾರರು ಎನ್ನುವ ಮನ್ನಣೆಗೆ ಅರ್ಹರಾಗಲಿಲ್ಲ.

ಈ ಕೃತಿಯಲ್ಲಿ ನೀವು ಕಾಣುವ ಬರಹಗಳಲ್ಲಿರುವ ಯೋಧರಿಗೆ ಹಣವಲ್ಲ, ಮನ್ನಣೆ ಮುಖ್ಯವಾಗಿತ್ತು ಎನ್ನುವುದು ಅರ್ಥವಾಗುತ್ತದೆ. ಹಣವೂ ಮುಖ್ಯವಾಗಿತ್ತು. ಆದರೆ, ಅವರು ಅದು ತಮ್ಮ ರಾಷ್ಟ್ರವು ತಮ್ಮನ್ನು ಪ್ರೀತಿಸುವ ಅರ್ಥದಷ್ಟು ಮುಖ್ಯ ಎಂದುಕೊಂಡಿರಲಿಲ್ಲ. ಹಾಗೆಯೇ ಸ್ವಾತಂತ್ರ್ಯ ಮತ್ತು ಬಿಡುಗಡೆಗಾಗಿ ನಡೆದ ಭಾರತದ ಮಹಾನ್ ಹೋರಾಟದಲ್ಲಿ ಈ ಸಾಮಾನ್ಯ ಜನರ ಪಾತ್ರವನ್ನು ನಾವು ಗುರುತಿಸುವುದು ಅಷ್ಟೇ ಮುಖ್ಯವಾಗಿತ್ತು.

ಹಲವರಿಗೆ ಹಣ ಅಗತ್ಯ ಇತ್ತು ಹಾಗೆಯೇ ಮನ್ನಣೆಯೂ ಕೂಡ. 1947ರ ನಂತರದ ನಮ್ಮಂತಹ ಪೀಳಿಗೆಗೆ ಅವರ ಬದುಕಿನ ಗಾಥೆಗಳು ಬೇಕಿತ್ತು, ಅದರಿಂದ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು, ಅವರು ಅರ್ಥ ಮಾಡಿಕೊಂಡಿದ್ದನ್ನು ತಿಳಿಯಲು, ಸ್ವಾತಂತ್ರ್ಯ ಮತ್ತು ಬಿಡುಗಡೆ ಒಂದೇ ಅಲ್ಲ ಎಂದು ತಿಳಿಯಲು.

ಈ ಕೃತಿಯಲ್ಲಿ ರೈತರು, ಭೂರಹಿತ ಕಾರ್ಮಿಕರು, ಕಾರ್ಮಿಕರು, ಸಂವಹನ ಕೊಂಡಿಗಳಾಗಿದ್ದವರು, ಅರಣ್ಯ ಉತ್ಪನ್ನ ಸಂಗ್ರಹಕಾರರು, ಗೃಹಿಣಿಯರು, ಮನೆಗೆಲಸದವರು ಹೀಗೆ ಎಲ್ಲರೂ ಇದ್ದಾರೆ. ಇದಲ್ಲದೆ, ಕೆಲವಾರು ಮಂದಿ ತಮ್ಮ ಘನ ಮನೆತನದಿಂದ ಸಿಡಿದು ಬಂದವರೂ ಇದ್ದಾರೆ. 'ಬದ್ಮಾಷ್ ಗಾಂವ್' ಎಂದು ಬ್ರಿಟಿಷರು ಕರೆಯುತ್ತಿದ್ದ ಒಂದು ಗ್ರಾಮದಲ್ಲಿ ಮರಗೆಲಸದವರು, ಚಮ್ಮಾರರೂ ಹಾಗೂ ಇತರರೂ ಹೋರಾಟದ ಜೊತೆಗಿದ್ದರು.

ಕೆಲವೊಮ್ಮೆ ಯಾರು ಇತಿಹಾಸ ನಿರ್ಮಿಸಲು ಕೈಜೋಡಿಸಿದರೋ ಅವರ ಅನುಭವದ ಮೂಲಕವೇ ಮಹಾ ಹೋರಾಟದ ಚರಿತ್ರೆಗೆ ಕಿವಿಗೊಡುವುದು ತೀರಾ ಮುಖ್ಯ. ಈ ಕೃತಿಯಲ್ಲಿರುವ ಯಾರೊಬ್ಬರೂ ಸಹಾ 1947ರ ನಂತರ ಸಚಿವರಾಗಲು, ರಾಜ್ಯಪಾಲರಾಗಲು, ಪ್ರಧಾನಿ ಅಥವಾ ರಾಷ್ಟ್ರಪತಿಯಾಗಲು ಬಯಸಲಿಲ್ಲ ಅಥವಾ ಆಗಲಿಲ್ಲ. ಇದರಲ್ಲಿರುವ ಒಬ್ಬರು ಕೆಲಕಾಲ ಒಲ್ಲದ ಮನಸ್ಸಿನಿಂದ ಆಂಧ್ರಪ್ರದೇಶದಲ್ಲಿ ಶಾಸಕರಾಗಿದ್ದರು.

ಇಲ್ಲಿರುವ ಬರಹಗಳನ್ನು ಹಲವು ವರ್ಷಗಳ ಕಾಲದಲ್ಲಿ ಹಾಗೂ ಹಲವು ಬಾರಿ ನಡೆಸಿದ ಸಂದರ್ಶನಗಳಿಂದ ರೂಪಿಸಲಾಗಿದೆ. ಈ ಕೃತಿಯಲ್ಲಿರುವವರ ಪೈಕಿ ಆದಿವಾಸಿಗಳು, ದಲಿತರು, ಒಬಿಸಿಗಳು, ಬ್ರಾಹ್ಮಣರು, ಮುಸ್ಲಿಮರು, ಹಿಂದೂಗಳು, ಸಿಖ್ಖರು ಇದ್ದಾರೆ. ಇದಲ್ಲದೆ, ಮಹಿಳೆಯರು, ಪುರುಷರು ಹಾಗೂ ಚಿಕ್ಕವಯಸ್ಸಿನ ಮಕ್ಕಳಿದ್ದಾರೆ. (ಇದರಲ್ಲಿರುವ ಹಲವು ಹೋರಾಟಗಾರರು ತಾವು ಯೌವ್ವನಕ್ಕೆ ಕಾಲಿಡುವ ಮುನ್ನವೇ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು) ಅವರು ಬೇರೆ ಬೇರೆ ಭಾಷೆಗಳನ್ನು ಮಾತನಾಡಿದವರು ಅಥವಾ ಮಾತನಾಡುತ್ತಿರುವವರು. ಅವರು ವಿವಿಧ ಗ್ರಾಮೀಣ ಪ್ರದೇಶ, ಸಂಸ್ಕೃತಿ ಹಾಗೂ ಹಿನ್ನೆಲೆಯಿಂದ ಬಂದವರಾಗಿದ್ದರು. ಇವರಲ್ಲಿ ಆಸ್ತಿಕರೂ ಇದ್ದರು, ನಾಸ್ತಿಕರೂ ಇದ್ದರು.

ಅವರೆಲ್ಲರಲ್ಲೂ ಇದ್ದ ಸಾಮಾನ್ಯ ಎಳೆ ಅಂದರೆ ಅದು ಸಾಮ್ರಾಜ್ಯ ವಿರೋಧಿ ನಿಲುವು. ಅದರಲ್ಲಿ ಅವರು ಎಂದೂ ರಾಜಿಯಾಗಲು ಸಿದ್ದರಿರಲಿಲ್ಲ. ಅವರು ತೆಗೆದುಕೊಳ್ಳುತ್ತಿದ್ದ ಅಪಾಯದ ಬಗ್ಗೆ ಅವರಿಗೆ ಅರಿವಿತ್ತು. ಅವರು ಬಯಸುತ್ತಿದ್ದ ಸ್ವಾತಂತ್ರ್ಯದ ಬಗ್ಗೆ ಅವರಿಗೆ ಒಂದು ನೋಟ, ಕಲ್ಪನೆ ಇತ್ತು. ಅವರು ಎಂದೂ ಇತರ ಸಮುದಾಯಗಳ ವಿರುದ್ಧ ದ್ವೇಷವನ್ನು ಬಡಿದೆಬ್ಬಿಸಲಿಲ್ಲ. ಅವರು ಬ್ರಿಟಿಷ್ ವ್ಯವಸ್ಥೆಯ ವಿರುದ್ಧ ಹೋರಾಡಿದರೇ ಹೊರತು, ಸಹಭಾರತೀಯರ ವಿರುದ್ಧ ಅಲ್ಲ. ಅವರನ್ನು ಜೈಲಿಗೆ ತಳ್ಳಿದಾಗ ಅವರು ತಮ್ಮ ಸಮಯವನ್ನು ಹರಟೆ ಹೊಡೆಯುತ್ತಾ, ಗೊಣಗುತ್ತಾ ಅಥವಾ ಬ್ರಿಟಿಷ್ ಚಕ್ರಾಧಿಪತ್ಯದ ಜೊತೆ ಕೈಜೋಡಿಸುವುದಾಗಿ ಭರವಸೆ ನೀಡಿ, ಕ್ಷಮಾಪಣಾ ಪತ್ರವನ್ನು ಬರೆಯುತ್ತಾ ಕೂಡಲಿಲ್ಲ.

ಇಲ್ಲಿನ ಕೆಲವು ಬರಹಗಳನ್ನು ಇದಕ್ಕಿಂತ ಚಿಕ್ಕ ರೂಪದಲ್ಲಿ 'ದಿ ಹಿಂದೂ' ಪತ್ರಿಕೆಯಲ್ಲಿ ಮೊದಲು ಪ್ರಕಟವಾಗಿವೆ. ಇನ್ನು ಕೆಲವು 'ಪೀಪಲ್ಸ್ ಆರ್ಕೇವ್ ಆಫ್ ರೂರಲ್ ಇಂಡಿಯಾ' (ಪರಿ)ಯಲ್ಲಿ ಪ್ರಕಟವಾಗಿವೆ. ಈ ಕೃತಿಯಲ್ಲಿ, ಆ ಕಥೆಗಳನ್ನು ಕಳೆದ 20 ವರ್ಷಗಳಲ್ಲಿ ಹಲವು ಬಾರಿ ಈ ಹೋರಾಟಗಾರರ ಗ್ರಾಮಕ್ಕೆ ನೀಡಿದ ಮರು ಭೇಟಿಯನ್ನು ಆಧರಿಸಿ ಮರುನಿರೂಪಿಸಲಾಗಿದೆ. ಕೆಲವು ಬರಹಗಳಲ್ಲಿ, ಉದಾಹರಣೆಗೆ ಸಾಲಿಹಾನ್ ಅವರು ನಿಧನರಾದ ನಂತರ ಅವರ ಕುಟುಂಬದವರೊಡನೆ ನಡೆಸಿದೆ ಮಾತುಕತೆಯನ್ನು ಈಗ ಸೇರಿಸಲಾಗಿದೆ. ಎಲ್ಲಾ ಬರಹಗಳೂ ಸ್ವಾತಂತ್ರ್ಯ ಯೋಧರ ಜೊತೆಗೆಯೇ ನಡೆಸಿದ ದೀರ್ಘ ಮಾತುಕತೆಯನ್ನು ಆಧರಿಸಿವೆ. ಕೆಲವು ಅವರು ಸ್ವಲ್ಪ ಕಡಿಮೆ ವಯಸ್ಸಿನ ಗೆಳೆಯರು, ಸಂಬಂಧಿಗಳು, ಗ್ರಾಮಸ್ಥರು, ಆ ಕಾಲದ ಚರಿತ್ರೆಕಾರರ ಜೊತೆ ಮಾತನಾಡಿದ್ದನ್ನೂ ಸೇರಿಸಲಾಗಿದೆ. ಈ ಹೋರಾಟಗಾರರು ಭಾಗವಹಿಸಿದ್ದ ಹೋರಾಟಗಳ ಬಗೆಗಿನ ವಿವರ ಇದ್ದ ದಾಖಲೆ ಹಾಗೂ ಕೃತಿಗಳನ್ನು ಆಧರಿಸಿದೆ.

ಹಾಗಾದರೆ, ಈ ಸ್ವಾತಂತ್ರ್ಯವನ್ನು ನಮಗೆ ತಂದುಕೊಟ್ಟವರು ಯಾರು? ನಾನು ಈ ಕೃತಿಯಲ್ಲಿ ಕ್ಯಾಪ್ಟನ್ ಬಾವು ಅವರು ಮಾಡಿರುವ ಹೇಳಿಕೆಯ ಅರಿವಿದ್ದೂ ಸ್ವಾತಂತ್ರ್ಯ ಎಂಬ ಪದ ಬಳಸಿದೆ. ಅವರು ಹೇಳಿದರು. ನಾವು ಸ್ವಾತಂತ್ರ್ಯ ಮತ್ತು ಬಿಡುಗಡೆಗಾಗಿ ಹೋರಾಡಿದೆವು. ಮತ್ತು ನಾವು ಸ್ವಾತಂತ್ರ್ಯ ಗಳಿಸಿದೆವು.

1914ರಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ ಹೋರಾಟಗಳ ಯಶಸ್ಸಿನ ಹಿನ್ನೆಲೆಯಲ್ಲಿ ಗಾಂಧಿಯವರಿಗೆ ಲಂಡನ್ನಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಅವರು ಈ ಸಾಧನೆಗಳ ಯಶಸ್ಸನ್ನು ತಾವೊಬ್ಬರೇ ಪಡೆಯಲು ಹಿಂಜರಿದರಲ್ಲದೆ, ಬದಲಿಗೆ ಅಲ್ಲಿನ ಶೋಷಣೆಗೊಳಗಾದ ಕಾರ್ಮಿಕರು ಸೇರಿದಂತೆ ಸಾವಿರಾರು ಸಾಮಾನ್ಯ ಭಾರತೀಯರಿಗೆ ಈ ಯಶಸ್ಸನ್ನು ಸಮರ್ಪಿಸಿದರು. ಹಾಗೂ ಭಾರತದೊಳಗಿದ್ದ ಸಾಮಾನ್ಯ ಜನರ ಬೆಂಬಲಕ್ಕೂ. ಗಾಂಧಿ ಹೇಳಿದರು ಈ ಇಂತಹ ಜನರೇ ಯಾವುದೇ ಮನ್ನಣೆ ಬಯಸದೆ ಸರಳ ನಂಬಿಕೆಯೊಂದಿಗೆ ಹೋರಾಟದ ಕಣಕ್ಕೆ ಹೋದವರು.

ಗಾಂಧೀಜಿಯವರು ಹೇಳಿರುವಂತೆ ಈ ಪುರುಷರು ಮತ್ತು ಮಹಿಳೆಯರು ಭಾರತದ ಉಪ್ಪಿದ್ದಂತೆ. ಅವರ ಮೇಲೆಯೇ ನಾವು ನಮ್ಮ ಕಲ್ಪನೆಯ ಭಾರತವನ್ನು ನಿರ್ಮಿಸಲಿದ್ದೇವೆ. ಈ ಮಹನೀಯ ನಾಯಕ ಹಾಗೂ ನಾಯಕಿಯರ ಮುಂದೆ ನಾವು ತೀರಾ ಬಡ ಮನುಷ್ಯರು ಎಂದಿದ್ದರು. ■



ಕಾರ್ಲ್ ಮಲ್ಮಡ್ ಭಾಷಣ

ಜ್ಞಾನ ಎಂಬುದು ಎಲ್ಲರಿಗೂ ಸೇರಿದ್ದು. ಅದರ ಜನತಾಂತ್ರೀಕರಣ ಆಗಬೇಕಿದೆ. ಉಚಿತವಾಗಿ ಲಭಿಸಬೇಕಿದೆ ಎಂದು ಪ್ರತಿಪಾದಿಸುವ ಅಂತರ್ಜಾಲ ಪ್ರವರ್ತಕ ಕಾರ್ಲ್ ಮಾಲಮಡ್ (Carl Malamud). ಅಮೆರಿಕೆಯ ಎಂ.ಐ.ಟಿಯಲ್ಲಿ ಕಲಿತು ಜ್ಞಾನದ ಹೆಚ್ಚಳ ಮತ್ತು ಪ್ರಸಾರವನ್ನು ಹಲವು ಬಗೆಗಳಲ್ಲಿ ವಿಸ್ತರಿಸಿದಾತ. ಪುಸ್ತಕಗಳ ಡಿಜಟಲೀಕರಣವು ಚರಕ ಸುತ್ತಿ ನೂಲು ತೆಗೆಯುವ ಹೊಸ ಬಗೆಯ ಕಾಯಕತತ್ವ (Scanning is the new Spinning) ಎಂದು ಬಣ್ಣಿಸಿದಾತ. ಸದ್ಯ ಬೆಂಗಳೂರಿನಲ್ಲಿ ದೊಡ್ಡ ರೀತಿಯಲ್ಲಿ ಕಾರ್ಯನಿರತರಾಗಿದ್ದಾರೆ. ಇದೇ ಅಕ್ಟೋಬರ್ ಎರಡರ ಗಾಂಧೀ ಜಯಂತಿಯಂದು ಬೆಂಗಳೂರಿನ ಗಾಂಧೀ ಭವನದಲ್ಲಿ ಜರುಗಿದ ಸಮಾರಂಭದಲ್ಲಿ ಕಾರ್ಲ್ ಮಾಲಮಡ್ ಮಾಡಿದ ಇಂಗ್ಲಿಷ್ ಭಾಷಣದ ಕನ್ನಡ ಅನುವಾದ ಇಲ್ಲಿದೆ

ಗಾಂಧೀಜಿಯನ್ನು ನೆನೆದಾಗಲೆಲ್ಲ ನನ್ನ ಮನಸ್ಸಿನಲ್ಲಿ ಮೂಡುವುದು ದಕ್ಷಿಣ ಆಫ್ರಿಕಾ, ಅವರು ಅಲ್ಲಿ ನಡೆಸಿದ ಸತ್ಯಾಗ್ರಹ. ಮುಂದಾಳತ್ವವನ್ನು ಅವರು ಕಲಿತದ್ದು ದಕ್ಷಿಣ ಆಫ್ರಿಕಾದಲ್ಲಿ. ಅರಿವನ್ನು ಹಂಚಿಕೊಳ್ಳುವ ಮತ್ತು ಮಾನವ ಹಕ್ಕುಗಳ ಕುರಿತು ಎಚ್ಚರ ಮೂಡಿಸುವ ಮೂಲಕ ಗಾಂಧೀಜಿ ಅಲ್ಲಿನ ಜನರನ್ನು ಮುಟ್ಟಿದರು. ಬರವಣಿಗೆ, ಸುದ್ದಿವರದಿಗಳ ಮರುಸಂವಹನ, ಅವುಗಳ ವಿಶ್ಲೇಷಣೆ, ಸುದ್ದಿಗಳ ಸಾಧಕ ಬಾಧಕಗಳ ಕುರಿತ ಅಭಿಪ್ರಾಯಗಳು, ಬದಲಾವಣೆಯನ್ನು ತರುವ ಮೂಲಭೂತ ಮಾರ್ಗೋಪಾಯಗಳು, ಹಾಗೂ ಅಧಿಕಾರವನ್ನು ಪ್ರಶ್ನಿಸುವ ಬಗೆಯನ್ನು ಕಲಿಸಿದ್ದೇ ಅವರ ಗೆಲುವು. ಇಂದಿನ ದಿನಗಳಲ್ಲಾಗಿದ್ದರೆ ಅವರು ಅಂತರ್ಜಾಲವನ್ನು ಆಲಿಂಗಿಸಿಕೊಳ್ಳುತ್ತಿದ್ದರು. ಆದರೆ ಅಂತರ್ಜಾಲ ಕುರಿತು ಕಠಿಣ ನಿಲುವುಗಳನ್ನೂ ಹೊಂದಿರುತ್ತಿದ್ದರು. ಈ ಕುರಿತು ನನಗೆ ಯಾವ ಅನುಮಾನವೂ ಇಲ್ಲ.

ಅವರು ಮಾಹಿತಿಯ ಚಿಲುಮೆಯೇ ಆಗಿದ್ದರು. ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಒಡೆದು ಮೂಡಿರುವ ಸಂಗತಿಯಿದು. ಅವರ ಧೈರ್ಯ ದಿಟ್ಟತನದ ಮೂಲ ಅರಿವೇ ಆಗಿದ್ದಿತು. ದಿಟ್ಟತನವೇ ಅವರಿಗೆ ಸ್ವಾತಂತ್ರ್ಯವನ್ನು ನೀಡಿತ್ತು. ಅದು ಅನಿರ್ಬಂಧಿತ ಸ್ವಾತಂತ್ರ್ಯವೇನೂ ಆಗಿರಲಿಲ್ಲ ಎಂಬುದು ಹೌದು. ಹೋರಾಟ ಮುಂದುವರೆಯಿತು. ಇಂದಿಗೂ ಮುಂದುವರೆದಿದೆ.

ಜ್ಞಾನವು ಸ್ವಾತಂತ್ರ್ಯದೆಡೆಗೆ ಮುನ್ನಡೆಸುವ ದಾರಿದೀಪ ಎಂಬ ಗಾಂಧೀಜಿ ಒಳನೋಟ ಹೊಸದೇನೂ ಅಲ್ಲ. ಇಲ್ಲಿ ಕರ್ನಾಟಕದಲ್ಲಿ ಬಸವಣ್ಣ ಮತ್ತು ಶರಣ ಚಳವಳಿಯನ್ನೇ ನೋಡೋಣ. ಅನುಭವ ಮಂಟಪವೆಂಬ ಸಂಸತ್ತನ್ನೇ ಕಟ್ಟಿದ್ದ ಚಳವಳಿಯಿದು. ಸಮಾನತೆ, ಶಿಕ್ಷಣವನ್ನು ಆಧರಿಸಿದ ಈ ಚಳವಳಿ ವಚನಗಳ ಮಹಾವಿಕಾಸವನ್ನೇ ಅರಳಿಸಿತು. ಕ್ರೂರವಾಗಿ ದಮನಕ್ಕೆ ತುತ್ತಾದರೂ ಈ ಚಳವಳಿಯ ಚೈತನ್ಯ ನಮ್ಮ ನಡುವೆ ಇಂದಿಗೂ ಜೀವಂತ.

ಸ್ವಾತಂತ್ರ್ಯ ಹೋರಾಟವೆಂಬುದು ಕ್ಷಣಮಾತ್ರದಲ್ಲಿ ಗೆದ್ದುಬಿಡುವ ಅಥವಾ ಸೋತುಹೋಗುವ ಸಮರವಲ್ಲ. ಅದು ನಮ್ಮ ನಿರಂತರ ಎಚ್ಚರವನ್ನು ಬೇಡುವಂತಹುದು. ಮಾರ್ಟಿನ್ ಲೂಥರ್ ಕಿಂಗ್ ಹೇಳಿರುವಂತೆ ಬದಲಾವಣೆ ಎಂಬುದು ಅನಿವಾರ್ಯವೆಂಬ ಗಾಲಿಗಳ ಮೇಲೆ ಸಲೀಸಾಗಿ ಉರುಳಿ ಬರುವಂತಹುದಲ್ಲ, ಅದು ನಿರಂತರ ಸಂಘರ್ಷದೊಂದಿಗೆ ಮಾತ್ರವೇ ಆಗುವಂತಹುದು. ತಮ್ಮ ಕೆಲಸ ಕಾರ್ಯಗಳ ಕೇಂದ್ರದಲ್ಲಿ ಗಾಂಧೀಜಿ ಎರಡು ಬಹಳ ಸರಳ ಮತ್ತು ಸಶಕ್ತ ಸಾಧನಗಳನ್ನು ಅಳವಡಿಸಿಕೊಂಡಿದ್ದರು. ಮೊದಲನೆಯದು ಸಾರ್ವಜನಿಕ ಸೇವೆ. ಸಾರ್ವಜನಿಕ ಸೇವೆ ಸಮುದಾಯ ಪ್ರಯೋಜಕ. ನಮ್ಮ ಕಾರ್ಯನಿರ್ವಹಣೆಯ ಬೇರ್ಪಡಿಸಲಾಗದ ಅಂಗ ಹಾಗೂ ನಾಗರಿಕರಾಗಿ ನಮ್ಮ ಆದ್ಯ ಕರ್ತವ್ಯ ಕೂಡ. ಅವರು ಅಳವಡಿಸಿಕೊಂಡಿದ್ದ ಎರಡನೆಯ ಸಾಧನವು ಬೆವರು ಬಸಿದು ದುಡಿದು ಅನ್ನ ಸಂಪಾದಿಸುವುದು. ಬೈಬಲ್ ಬೋಧಿಸುವುದೂ ಇದೇ (ಬ್ರೆಡ್ ಲೇಬರ್) ಮೌಲ್ಯವನ್ನು. ನಿತ್ಯ ನಿಜ ಕಾಯಕವನ್ನು ಮಾಡಿ ಅಂದಿನ ಅನ್ನ ಸಂಪಾದಿಸಬೇಕು. ಎಲ್ಲ ಬಗೆಯ ಕಾಯಕವನ್ನೂ



ಗೌರವಿಸಬೇಕು ಮತ್ತು ಎಲ್ಲ ಕಾಯಕಜೀವಿಗಳನ್ನೂ ಆದರಿಸಬೇಕು. ಬೈಬಲ್ ನ ಈ ಬೋಧನೆ ಮತ್ತು ಕಾಯಕವೇ ಕೈಲಾಸ ಎಂಬ ವಚನ ಸಂದೇಶದ ನಡುವಣ ಸಾಮ್ಯತೆ ಅಸಾಧಾರಣ. ಪೂಜೆ ಅಥವಾ ಆರಾಧನೆಯೊಂದೇ ಸಾಲದು, ಭಕ್ತಿಯ ಪ್ರಕಟರೂಪವಾಗಿ ಕಾಯಕವನ್ನೂ ಮಾಡಬೇಕು. ತನಗೆ ತಾನು ನೆರವಾಗಬಲ್ಲವನಿಗೆ ದೇವರೂ ನೆರವಾಗುತ್ತಾನೆ ಎಂಬಂತೆ.

ದುಡಿದು ಅನ್ನ ಉಣ್ಣುವ ತತ್ವ ಕುರಿತು ಧೇನಿಸುವಾಗ ಚರಕ ಮತ್ತು ಗಾಂಧೀಜಿ ದಿನನಿತ್ಯ ಶ್ರಮವಹಿಸಿ ಚರಕ ತಿರುಗಿಸಿ ನೂಲು ತೆಗೆಯುವ ವಿಗ್ರಹರೂಪ ನಿಮ್ಮ ಕಣ್ಣ ಮುಂದೆ ಬಂದೀತು. ನೀಲಿ ಮತ್ತು ಹತ್ತಿ ಬೆಳೆಗಾರರು ತಮ್ಮ ಸರಕುಗಳನ್ನು ಮ್ಯಾಂಚೆಸ್ಟರಿಗೆ ಕಳಿಸಿ ಅದು ಅಲ್ಲಿ ಬಟ್ಟೆಯಾಗಿ ತಯಾರಾಗಿ ವಾಪಸು ಬಂದು ಅದೇ ರೈತರಿಗೆ ಮಾರಾಟ ಮಾಡಲಾಗುತ್ತಿದ್ದ ಸರಪಳಿಯನ್ನು ತುಂಡರಿಸಿದ್ದು ಇದೇ ಚರಕ.

ಇದೊಂದು ವಿಷವೃತ್ತವಾಗಿತ್ತು. ರೈತರಿಂದ ಬಲವಂತವಾಗಿ ಹತ್ತಿ ಮತ್ತು ನೀಲಿ ಕೃಷಿ ಮಾಡಿಸಲಾಗುತ್ತಿತ್ತು. ಅದಕ್ಕಾಗಿ ಬಿತ್ತನೆ ಬೀಜ ಖರೀದಿಗೆ ಸಾಲ ಪಡೆಯುವುದೂ ಕಡ್ಡಾಯವಾಗಿತ್ತು. ಪರಿಣಾಮವಾಗಿ ರೈತನ ಸುತ್ತ ಹೆಣೆದ ಸಾಲದ ಬಲೆ ಮತ್ತು ಕ್ಷಾಮವು ಭಾರತವನ್ನು ತೀವ್ರ ದಾರಿದ್ರ್ಯಕ್ಕೆ ನೂಕಿತು. ಆದರೆ ಇದೇ ವಿಷವೃತ್ತವು ಬ್ರಿಟನ್ನಿಗೆ ಅಪಾರ ಸಂಪತ್ತನ್ನು ಹರಿಸಿತು, ಭಾರತದ ಜನತೆಯನ್ನು ಬಡತನ ಬಲವಾಗಿ ಸುತ್ತಿಕೊಳ್ಳುತ್ತಲೇ ಹೋಯಿತು. ಚರಕ ನೂಲುವುದರಿಂದ ಮತ್ತು ದುಡಿದು ಉಣ್ಣುವುದರಿಂದ (ಬ್ರೆಡ್ ಲೇಬರ್) ಈ ವಿಷವೃತ್ತವನ್ನು ಒಡೆಯಲು ಪರಸ್ಪರ ನೆರವಾಯಿತು ಭಾರತದ ಜನತೆ. ದೇಶ ಎಚ್ಚರಗೊಂಡಿತು.

ಆದರೆ ಗಾಂಧೀಜಿ ಲೋಕೋಪಯೋಗಿ ಕಾರ್ಯವನ್ನು ಮೊದಲು ಆರಂಭಿಸಿದ ದಕ್ಷಿಣ ಆಫ್ರಿಕಾದಲ್ಲಿ ಮುದ್ರಣ ಕಾರ್ಯಕ್ಕೆ ಮುನ್ನ ನಡೆಯುವ ಅಕ್ಷರಗಳ ಅಚ್ಚುಮೊಳೆ ಜೋಡಣೆ 'ಬ್ರೆಡ್ ಲೇಬರ್' ಆಗಿತ್ತೇ ವಿನಾ ಚರಕ ಸುತ್ತಿ ನೂಲು ತೆಗೆಯುವುದಲ್ಲ. ಮುದ್ರಣ ಯಂತ್ರವೆಂಬುದು ಅರಿವನ್ನು ಹಬ್ಬಿಸುವ ಸಾಧನವಾಗಿತ್ತು. ಈ ಮೂಲಕ ವ್ಯಕ್ತಿಗಳು ತಮ್ಮನ್ನು ತಾವೇ ಶಿಕ್ಷಣವಂತರಾದರು, ಜನಸಮುದಾಯವಾದರು, ಒಗ್ಗಟ್ಟಾದ ಜನಸಮೂಹವಾದರು, ಸತ್ಯಾಗ್ರಹ ಮಾಡಿ ಗೆದ್ದವರಾದರು. ಜ್ಞಾನವು ಸತ್ಯಕ್ಕೆ ಜನ್ಮ ನೀಡಿತು. ಸತ್ಯದಿಂದ ಸ್ವಾತಂತ್ರ್ಯ ಹುಟ್ಟಿತು.

ಗಾಂಧೀ ಭವನದಲ್ಲಿ ನಾವು ಅರಿವನ್ನು ಹಿಗ್ಗಿಸಿ ಪ್ರಸಾರ ಮಾಡತೊಡಗಿದ್ದೇವೆ. ನಮ್ಮನ್ನು ನಾವು **ಅರಿವಿನ ಸೇವಕರು** (servants of knowledge) ಎಂದು ಕರೆದುಕೊಳ್ಳುತ್ತೇವೆ. ಪ್ರತಿ ತಿಂಗಳೂ 14 ಲಕ್ಷ ಪುಟಗಳ ಡಿಜಿಟೀಕರಣ ಮಾಡುತ್ತಿದ್ದೇವೆ. ನಮ್ಮ ಈ ಸಾಮರ್ಥ್ಯ ಸದ್ಯದಲ್ಲೇ ಎರಡು ಪಟ್ಟು ಹೆಚ್ಚುವ ನಿರೀಕ್ಷೆ ಇದೆ. ಅರಿವಿಗೆ ಸಂಪರ್ಕ ಸೇತುವೆಯನ್ನು ಕಟ್ಟುವ ಈ ಕೆಲಸದಲ್ಲಿ ನಮ್ಮಲ್ಲಿ ಬಹುತೇಕರು ತೊಡಗಿಕೊಂಡು ವರ್ಷಗಳೇ ಉರುಳಿವೆ.

ಗಾಂಧೀ ಭವನದಲ್ಲಿ ಪ್ರಗತಿಯಲ್ಲಿರುವ ಬೆಂಗಳೂರಿನ ನಮ್ಮ ಈಗಿನ ಪ್ರಯತ್ನಗಳು ಆರಂಭ ಆದದ್ದು ಭಾರತೀಯ ವಿಜ್ಞಾನಗಳ ಅಕಾಡೆಮಿಯಲ್ಲಿ.

ಮಂಗಳೂರಿನಲ್ಲಿ ನಾಲ್ಕು ಸಾವಿರದಷ್ಟು ಕೊಂಕಣಿ ಪುಸ್ತಕಗಳನ್ನು 'ಆನ್ ಲೈನ್'ಗೆ ತರಲು ನೆರವಾಗಿದ್ದೇವೆ. ಚೆನ್ನೈನ ರಾಜಾ ಮುತ್ತಯ್ಯ ಗ್ರಂಥಾಲಯದಲ್ಲೂ ನಮ್ಮ ಕೆಲಸ ಮುಂದುವರೆದಿದೆ. ಇದೇ ರೀತಿ ಸಂಸ್ಕೃತ ಮತ್ತು ತೆಲುಗು ವಿದ್ವಾಂಸರೊಂದಿಗೂ ನಮ್ಮ ಕೆಲಸ ನಡೆದಿದೆ. 150 ಭಾಷೆಗಳಲ್ಲಿನ ಸುಮಾರು ಎಂಟು ಲಕ್ಷ ಪುಸ್ತಕಗಳ ಸಂಗ್ರಹದ 'ಮೆಟಾಡೇಟಾ'ದ ಸುಧಾರಣೆಯಲ್ಲಿ ತೊಡಗಿದ್ದೇವೆ.

ಬೆಂಗಳೂರಿನಲ್ಲಿ ನಮ್ಮ ಕೆಲಸ ಕಾರ್ಯದ ಬಹುತೇಕ ಶ್ರೇಯಸ್ಸು ನನ್ನ ಗೆಳೆಯ ಮತ್ತು ಸಹೋದ್ಯೋಗಿ ಓಂ ಶಿವಪ್ರಕಾಶ್ ಅವರಿಗೆ ಸಲ್ಲುತ್ತದೆ. ಕನ್ನಡದ

ಸಾವಿರಾರು ಪುಸ್ತಕಗಳು ಆನ್ ಲೈನ್ ನಲ್ಲಿ ಲಭ್ಯವಾಗಲು ಮುಖ್ಯ ಕಾರಣಕರ್ತರು ಅವರು. ವಿಕಿಪೀಡಿಯಾ ಮುಂತಾದ ಸಂಘಟನೆಗಳಿಗೆ ನೆರವಾಗಿರುವ ಅವರ ಸೇವೆ ಹಲವಾರು ವರ್ಷಗಳಿಂದ ನಡೆದಿದೆ. ಕೇವಲ ಡಿಜಿಟಲೀಕರಣವಲ್ಲದೆ ಅತ್ಯುತ್ತಮ ಗುಣಮಟ್ಟದ ನಿಘಂಟುಗಳು, ಕನ್ನಡ ಭಾಷೆಗೆ ಹೊಸ ಫಾಂಟ್ ಗಳನ್ನು ರೂಪಿಸುವುದೇ ಅಲ್ಲದೆ ಹಲವಾರು ಕೆಲಸ ಕಾರ್ಯ ಮಾಡಿಕೊಟ್ಟಿದ್ದಾರೆ. ಡಿಜಿಟಲೀಕರಣದ ಆಚೆಗೂ ಅವರ ಸೇವೆಯ ವಿಸ್ತಾರ ದೊಡ್ಡದು. ತಮ್ಮ ಹಳೆಯ ಕೃತಿಗಳು ವಾಣಿಜ್ಯೇತರ ಬಳಕೆಗೆ ಕ್ರಿಯೇಟಿವ್ ಕಾಮನ್ ಲೈಸೆನ್ಸ್ ವ್ಯವಸ್ಥೆಯಡಿಯಲ್ಲಿ ಯಾವುದೇ ಶುಲ್ಕವಿಲ್ಲದೆ ಲಭಿಸುವಂತಾಗಲು ಹಲವು ಪ್ರಕಾಶಕರ ಮನ ಒಲಿಸಿದ್ದಾರೆ. ಅವರ ಈ ಕೆಲಸ ಕನ್ನಡಿಗರೆಲ್ಲರ ಮನ ಗೆದ್ದಿದೆ. ಅವರೊಂದಿಗೆ ಕಲೆತು ಕೆಲಸ ಮಾಡಲು ನನಗೆ ಹೆಮ್ಮೆಯೆನಿಸಿದೆ.

ದೆಹಲಿಯ ಅಂಬೇಡ್ಕರ್ ಕಾನೂನು ಶಾಲೆಯ ಸ್ಥಾಪಕ ಡೀನ್, ಪ್ರತಿಷ್ಠಿತ ಇನ್ಫೋಸಿಸ್ ಬಹುಮಾನ ವಿಜೇತರೂ, ಇಂಟೆಲೆಕ್ಚುವಲ್ ಪ್ರಾಪರ್ಟಿ ಮತ್ತು ಫಿಲ್ಮ್ ಸ್ಟಡೀಸ್ ಕ್ಷೇತ್ರದ ಪ್ರಸಿದ್ಧ ವ್ಯಕ್ತಿಯಾದ ಡಾ.ಲಾರೆನ್ಸ್ ಲಿಯಾಂಗ್, **'ಇಂಡಿಯಾ ಕಾನೂನ್'** ನಿರ್ಮಿಸಿ ನ್ಯಾಯಾಲಯಗಳ ತೀರ್ಪುಗಳು, ವಿಧಾನಮಂಡಲಗಳ ಕಾಯಿದೆಗಳು, ಅಧಿಕೃತ ಗೆಜೆಟ್ ಗಳು ಮುಂತಾದವುಗಳನ್ನು ಕಾನೂನು ಕಾಯಿದೆ ವೃತ್ತಿಯವರಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಉಚಿತವಾಗಿ ಎಟುಕಿಸಿರುವ ಡಾ.ಸುಶಾಂತ ಸಿನ್ಹಾ ನಮ್ಮೊಂದಿಗಿದ್ದಾರೆ. ಈ ಇಬ್ಬರೂ ಮಹನೀಯರು ನಮ್ಮ ಪ್ರಯತ್ನಗಳ ಅವಿಭಾಜ್ಯ ಅಂಗವಾಗಿದ್ದಾರೆ.

ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನದ ಬಹುತೇಕ ಪುಸ್ತಕ ಸಂಗ್ರಹವನ್ನು ನಾವು ಈಗಾಗಲೇ ಡಿಜಿಟಲೀಕರಿಸಿದ್ದೇವೆ. ಇಲ್ಲಿನ ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯ ಗ್ರಂಥಾಲಯದ ಎಲ್ಲ ಪುಸ್ತಕಗಳನ್ನೂ ಕಳೆದ ವರ್ಷ ಡಿಜಿಟಲ್ ರೂಪಕ್ಕೆ ತಂದಿದ್ದೇವೆ. ಈ ಎಲ್ಲ ಪುಸ್ತಕಗಳನ್ನು ದೇಶದ ಯಾವುದೇ ಮೂಲೆಯಲ್ಲಿನ ಕಣ್ಣಿಲ್ಲದವರು ಓದುವಂತೆ ವ್ಯವಸ್ಥೆ ಮಾಡಿದ್ದೇವೆ. ಇದೀಗ ಗಾಂಧೀ ಭವನದಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ. ಜ್ಞಾನವು ಎಲ್ಲರಿಗೂ ಎಟುಕುವಂತೆ ಶ್ರಮಿಸಿದ್ದೇವೆ.

ನಮ್ಮ ಗ್ರಂಥಾಲಯಗಳ ಸಿರಿಸಮೃದ್ಧಿಯು ಎಲ್ಲರಿಗೂ ಲಭಿಸಬೇಕೆಂಬ ಎಂಬ ಆಶಯದ ಬೇರು ಗಾಂಧೀಜಿ ತತ್ವದಲ್ಲಿದೆ. ಅವರು ಲಂಡನ್ ನಲ್ಲಿದ್ದಾಗ ಮೂರು ಪುಸ್ತಕಗಳು ಅವರ ಕಣ್ಣು ತೆರೆಸಿ ಅವರ ಬದುಕನ್ನೇ ಬದಲಿಸಿದವು. ಮೊದಲನೆಯದು ಭಗವದ್ಗೀತೆ, ಎರಡನೆಯದು ಬೈಬಲ್, ಮೂರನೆಯದು Snell on Equity ಎಂಬ ಕಾನೂನು ವಿದ್ಯಾರ್ಥಿಗಳ ಪಠ್ಯಪುಸ್ತಕ. ಧರ್ಮದರ್ಶಿತ್ವ (Trusteeship) ಎಂಬ ಕಾನೂನು ಪರಿಕಲ್ಪನೆಯನ್ನು ಗಾಂಧೀಜಿ ಅವರು ಸ್ನೆಲ್ ಕೃತಿಯಿಂದ ಕಲಿತರು. ಮಹಾನ್ ಐಶ್ವರ್ಯವೆಂಬುದು ನ್ಯಾಸಕ್ಕಲ್ಲದೆ ಯಾವುದೇ ಶ್ರೀಮಂತನಿಗೆ ಸೇರಿದ್ದಲ್ಲ ಮತ್ತು 'ಸಮುದಾಯದ ಸ್ವತ್ತು ಹಾಗೂ ಸಮುದಾಯದ ಕಲ್ಯಾಣಕ್ಕಾಗಿಯೇ ಬಳಕೆ ಮಾಡತಕ್ಕದ್ದು' ಎಂಬ ತತ್ವಕ್ಕೆ ಗಾಂಧೀಜಿಯನ್ನು ಮುನ್ನಡೆಸಿದ ಪುಸ್ತಕವಿದು.

ಈ ಮಾತು ಎಲ್ಲ ಗ್ರಂಥಾಲಯಗಳಿಗೂ ಅನ್ವಯಿಸುತ್ತದೆ. ಗ್ರಂಥಾಲಯಗಳು ಜ್ಞಾನದ ಧರ್ಮದರ್ಶಿಗಳು. ಅವುಗಳದು ಗ್ರಂಥ ಶ್ರೀಮಂತಿಕೆ. ಆದರೆ ಸಮುದಾಯದ ಬಳಕೆಗಾಗಿ ಆ ಗ್ರಂಥಗಳನ್ನು ಇಟ್ಟುಕೊಂಡಿರುತ್ತವೆ. ಆದರೆ ನಾವು ಜನತಂತ್ರ ವ್ಯವಸ್ಥೆಯಲ್ಲಿರುವ ಕಾರಣ ಈ ಪರಿಕಲ್ಪನೆ ಇನ್ನಷ್ಟು ವಿಸ್ತಾರಗೊಳ್ಳುತ್ತದೆ. ನಾಮಮಾತ್ರ ಜಮೀನುದಾರಿ ನಾಗರಿಕರಾದ ನಾವುಗಳು ಸರ್ಕಾರದ ಒಡೆಯರು ಹೌದು, ಆದರೆ ವಾಸ್ತವದಲ್ಲಿ ನಮ್ಮ ಜನತಂತ್ರವನ್ನು ಭಾವೀ ತಲೆಮಾರುಗಳ ಪ್ರಯೋಜನಕ್ಕೆಂದು ನ್ಯಾಸದಲ್ಲಿ (ಟ್ರಸ್ಟ್) ಇಟ್ಟುಕೊಂಡಿರುತ್ತೇವೆ ಅಷ್ಟೇ.

ಈ ಧರ್ಮದರ್ಶಿತ್ವವು ಗಂಭೀರ ಜವಾಬ್ದಾರಿ. ಶ್ರದ್ಧೆ ಮತ್ತು ಹುಮ್ಮಸ್ಸಿನಿಂದ ಜರುಗಿಸಬೇಕಾದದ್ದು. ಬೆಂಗಳೂರಿನ ವಿಧಾನಸೌಧದ ಗೋಡೆಯ ಮೇಲೆ ಬರೆದಿರುವಂತೆ 'ಸರ್ಕಾರದ ಕೆಲಸವೆಂಬುದು ದೇವರ ಕೆಲಸ'. ಲೋಕೋಪಯೋಗಿ ಕಾರ್ಯ, ಬ್ರೆಡ್ ಲೇಬರ್ (ಕಾಯಕ ತತ್ವ) ಹಾಗೂ ಧರ್ಮದರ್ಶಿತ್ವ ಎಂಬ ಮೂರು ತತ್ವಗಳು ನಮ್ಮ ಕೆಲಸ ಕಾರ್ಯಗಳ ದಿಕ್ಸೂಚಿಗಳಾಗಬೇಕು. ಈ ಪರಿಕಲ್ಪನೆಗಳು ಸರ್ವರಿಗೂ ಪ್ರಸ್ತುತವೆನಿಸಬೇಕು. ಲೋಕೋಪಯೋಗಿ ಕಾರ್ಯ ಮತ್ತು ಬ್ರೆಡ್ ಲೇಬರ್ ಗಾಗಿ ಸತ್ಯದೊಂದಿಗೆ ನಾವೆಲ್ಲರೂ ನಮ್ಮದೇ ಪ್ರಯೋಗಗಳನ್ನು ಮಾಡಿಕೊಳ್ಳಬೇಕು. ನಮ್ಮ ಪಾಲಿಗೆ ಈ ಕಾರ್ಯದ ಅರ್ಥ ಜ್ಞಾನದ ಹೆಚ್ಚಳ ಮತ್ತು ಪ್ರಸಾರಕ್ಕಾಗಿ ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಿಸುವುದೇ ಆಗಿದೆ.

ಬಾಬ್ ಡೈಲನ್ ಹೇಳುವಂತೆ ನೀವು ಯಾರೇ ಆಗಿರಲಿ, ಏನನ್ನೇ ಮಾಡುತ್ತಿರಲಿ, ಯಾರೊಬ್ಬರಿಗಾದರೂ ಉಪಯೋಗ ಆಗುವಂತಹ ಸೇವೆ ಅಥವಾ ಕೆಲಸದಲ್ಲಿ ತೊಡಗಿರಬೇಕು. ಜ್ಞಾನದ ಅಥವಾ ಅರಿವಿನ ಸೇವಕರ (Servants of Knowledge) ಪಾಲಿಗೆ ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಡಿಜಟಲೀಕರಿಸುವುದು ಚರಕದಿಂದ ನೂಲು ತೆಗೆಯುವುದಕ್ಕೆ ಸಮನಾದ ಸೇವೆ (Scanning is the new Spinning). ಅದುವೇ ನಮ್ಮ ಪಾಲಿನ ಕಾಯಕವೇ ಕೈಲಾಸ ಅಥವಾ ಬೈಬಲ್ ಸಾರುವ ದುಡಿದುಣ್ಣುವ Bread Labour ಅಥವಾ ನಮ್ಮ ಲೋಕೋಪಯೋಗಿ ಕಾರ್ಯ.


ಜ್ಞಾನವು ಸಾರ್ವತ್ರಿಕವಾಗಿ ಲಭಿಸುವಂತೆ ಮಾಡುವುದು ನಮ್ಮ ಕಾಲಮಾನದ ಮಹಾನ್ ಆಶ್ವಾಸನೆ. ಭವ್ಯ ಭವಿತವ್ಯದ ಬಾಗಿಲುಗಳನ್ನು ತೆರೆಯುವ ಬೀಗದ ಕೈ. ಜ್ಞಾನವನ್ನು ತನ್ನ ಪಾಡಿಗೆ ತನ್ನನ್ನು ಬಿಟ್ಟರೆ ಸಾಲದು. ಅದನ್ನು ಕ್ರಿಯೆಯ ಜೊತೆ ಬೆಸೆಯಬೇಕು. ಗಾಳಿಯು ಬೆಂಕಿಯ ಕೈ ಹಿಡಿಯದಿದ್ದರೆ, ಹೇಗೆ ಚಲಿಸಬೇಕೆಂದು ಅದಕ್ಕೆ ತೋಚುವುದಿಲ್ಲ ಎನ್ನುತ್ತಾರೆ ದಾಸಿಮಯ್ಯ. ಬ್ರೆಡ್ ಲೇಬರ್ (ಕಾಯಕ ತತ್ವ) ಮತ್ತು ಲೋಕೋಪಯೋಗಿ ಕಾರ್ಯಗಳು ಕ್ರಿಯೆಯ ಅತ್ಯಗತ್ಯ ಅಂಗಗಳು. ಜ್ಞಾನವೆಂಬುದು ಗಾಳಿಯಾದರೆ, ಕ್ರಿಯೆಯೇ ಬೆಂಕಿ. ನಮ್ಮನ್ನು, ನಮ್ಮ ಮಕ್ಕಳನ್ನು, ನಮ್ಮ ಸೋದರ ಬಂಧುಗಳನ್ನು ಹೇಗೆಲ್ಲ ಸುಶಿಕ್ಷಿತರನ್ನಾಗಿಸುತ್ತೇವೆ ಎಂಬುದರ ಬೀಗದ ಕೈ ಜ್ಞಾನ. ಜ್ಞಾನವೇ ಅವಕಾಶ, ಜ್ಞಾನವೇ ಜನತಂತ್ರದ ಬೀಗದೆಸಳು. ಜ್ಞಾನವೇ ಸ್ವಾತಂತ್ರ್ಯದ ಬೀಗದ ಕೈ. ಈ ಬಾಗಿಲುಗಳನ್ನು ತಟ್ಟೋಣ. ಎಲ್ಲರೂ ಜೊತೆ ಜೊತೆಯಾಗಿ ಈ ಬಾಗಿಲಗಳನ್ನು ಹಾದು ನಡೆಯೋಣ.

ಅನುವಾದ : ಡಿ ಉಮಾಪತಿ

ಚಿ|ತ್ರಾ|ವ|ಳಿ



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ವತಿಯಿಂದ ನಡೆದ ಗಾಂಧಿ ಜಯಂತಿ ಆಚರಣೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಕಾನೂನು ಮತ್ತು ಸಂಸದೀಯ ಸಚಿವರಾದ ಮಾನ್ಯ ಶ್ರೀ ಎಚ್ ಕೆ ಪಾಟೀಲರು ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು . ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು



ಧಾರವಾಡ ಬಳಿಯ ಗರಗದ ರಾಷ್ಟ್ರ ಧ್ವಜ ತಯಾರಿಕಾ ಕ್ಷೇತ್ರೀಯ ಸೇವಾ ಸಂಘಕ್ಕೆ ಮಾನ್ಯ ಮುಖ್ಯ ಮಂತ್ರಿ ಗಳಾದ ಶ್ರೀ ಸಿದ್ಧರಾಮಯ್ಯ ನವರು ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು .



ಅರಸೀಕೆರೆ ಕಸ್ತೂರ್ ಬಾ ಆಶ್ರಮದಲ್ಲಿ ಅಕ್ಟೋಬರ್ 2 ರಂದು ಗಾಂಧಿ ಜಯಂತಿ ಆಚರಣೆ .ಅರಸೀಕೆರೆ ವಿಧಾನಸಭಾ ಶಾಸಕರಾದ ಕೆ ಎಂ ಶಿವಲಿಂಗೇ ಗೌಡರು ಮತ್ತು ಕಸ್ತೂರ್ ಬಾ ರಾಷ್ಟೀಯ ಸ್ಮಾರಕ ಟ್ರಸ್ಟ್ ನ ಸದಸ್ಯರಾದ ಅನಂತ್ ಕುಮಾರ್ ,ಪ್ರತಿನಿಧಿ ಉಷಾ ಅಬ್ರೋಲ್ ಮತ್ತಿತರರು ಹಾಜರಿದ್ದರು .



ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಬಲವರ್ಧನೆಗಾಗಿ ನಡೆದ ಎರಡು ದಿನಗಳ ದುಂಡು ಮೇಜಿನ ಪರಿಷತ್ ಕಾರ್ಯಕ್ರಮದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ವೂಡೇ ಪಿ ಕೃಷ್ಣ , ನಿವೃತ್ತ ಹಿರಿಯ ಐ ಎ ಎಸ್ ಅಧಿಕಾರಿಗಳಾದ ಚಿರಂಜೀವಿ ಸಿಂಗ್ , ಮೀನಾಕ್ಷಿ ಸುಂದರಂ ,ಮಾಜಿ ಲೋಕಸಭಾ ಸದಸ್ಯರಾದ ಸಿ ನಾರಾಯಣ ಸ್ವಾಮಿ , ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ್ ಖರ್ಗೆ , ಮಾಜಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಾದ ಮಣಿಶಂಕರ ಅಯ್ಯರ್ , ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ವಿಷ್ಣುಕಾಂತ್ ಚಟಪಲ್ಲಿ ಇವರುಗಳು ಭಾಗವಸಿದ್ದರು.

ಉದಯವಾಣಿ ಮಂಗಳವಾರ, ಅಕ್ಟೋಬರ್ 3, 2023

ಗಾಂಧಿಗೆ ಅವಹೇಳನ ಮಾಡಲು ಸರ್ಕಾರ ಬಿಡಲ್ಲ

ಕಟ್ಟ ಕಡೆಯ ವ್ಯಕ್ತಿಗೂ ಬದುಕುವ ಅವಕಾಶ ಸೃಷ್ಟಿಸುವುದು ನಮ್ಮ ಗುರಿ: ಸಿದ್ದರಾಮಯ್ಯ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರಿಗೆ ಅವಹೇಳನ ಮಾಡಲು ಸರ್ಕಾರ ಬಿಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ನಿತರ ಸಂಘ ಸಂಸ್ಥೆಯ ಆಶ್ರಯದಲ್ಲಿ ಸೋಮವಾರ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರಪಿತನ ಜಯಂತಿಯಲ್ಲಿ ಮಾತನಾಡಿದರು.

ನಮ್ಮ ಸರ್ಕಾರ ರೂಪಿಸುತ್ತಿರುವ ಕಾರ್ಯಕ್ರಮಗಳಲ್ಲಿ ಗಾಂಧೀಜಿ ಅವರ ಆಶಯಗಳು ಸೇರಿವೆ. ಅದರಂತೆ ಕಟ್ಟ ಕಡೆಯ ವ್ಯಕ್ತಿಗೂ ಬದುಕುವ ಅವಕಾಶಗಳನ್ನು ಸೃಷ್ಟಿಸುವುದು ನಮ್ಮ ಸರ್ಕಾರದ ಗುರಿಯಾಗಿದೆ. ಹಳ್ಳಿಗಳು ಉದ್ಧಾರವಾದರೆ ದೇಶದ ಪ್ರಗತಿ ಸಾಧ್ಯ ಎಂದು ಗಾಂಧೀಜಿ ಹೇಳುತ್ತಿದ್ದರು. ಅವರ ಚಿಂತೆಯಂತೆ ಸರ್ಕಾರ ನಡೆಯಲಿದೆ ಎಂದು ನುಡಿದರು.

ಒಮ್ಮೆ ರೈಲಿನಲ್ಲಿ ಮೂರನೇ ದರ್ಜೆಯಲ್ಲಿ ಪ್ರಯಾಣಿಸುತ್ತಿದ್ದರು. ಸಹ ಪ್ರಯಾಣಿಕರು 'ಏಕೆ ಮೂರನೇ ದರ್ಜೆ ಸೀಟಿನಲ್ಲಿ ಪ್ರಯಾಣಿಸುತ್ತಿದ್ದೀರಿ' ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಗಾಂಧಿ ಅವರು, 'ನಾಲ್ಕನೇ ದರ್ಜೆ ರೈಲಿನಲ್ಲಿ ಇಲ್ಲ, ಇದ್ದಿದ್ದರೆ ಅಲ್ಲೇ ಪ್ರಯಾಣಿಸುತ್ತಿದ್ದೆ ಎಂದು ಹೇಳಿದ್ದರು.



■ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಭಾಗಿ

ಗಾಂಧಿ ಅವಹೇಳನ: ಕ್ರಮಕ್ಕೆ ಮನವಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ಜಾಲತಾಣಗಳಲ್ಲಿ ಕೆಲವರು ಗಾಂಧೀಜಿ ಅವರ ಬಗ್ಗೆ ಅವಹೇಳನ ಮಾಡುತ್ತಿದ್ದಾರೆ. ಅಗೌರವ ತೋರುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು. ಗಾಂಧೀಜಿ ಅವರಿಗೆ ಅಗೌರವ ತೋರುವುದು ಸರಿಯಲ್ಲ, ಭಾರತ ಬಿಟ್ಟು ಗಾಂಧೀಜಿ ಇಲ್ಲ, ಗಾಂಧೀಜಿ ಬಿಟ್ಟು ಭಾರತವಿಲ್ಲ. ಜಾಲತಾಣಗಳಲ್ಲಿ ಗಾಂಧೀಜಿ ಅವರಿಗೆ ಮಾಡುತ್ತಿರುವ ಅವಮಾನಗಳನ್ನು ಸಹಿಸಿಕೊಳ್ಳಲಾಗದು ಎಂದು ಹೇಳಿದರು.

ಅಷ್ಟು ಸರಳವಾದ ವ್ಯಕ್ತಿತ್ವ ಗಾಂಧಿಯವರದ್ದಾಗಿತ್ತು ಎಂದು ಸ್ಮರಿಸಿದರು.

ಶಾಸ್ತ್ರಿ ಅಪ್ರತಿಮ ರಾಜಕಾರಣಿ: ಅ.2ರಂದು ಗಾಂಧಿ ಜಯಂತಿ ಜತೆಗೆ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನವನ್ನೂ ಆಚರಿಸಲಾಗುತ್ತಿದೆ. ಮಾಜಿ ಪ್ರಧಾನಿ ದಿ.ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಮಹಾತ್ಮ ಗಾಂಧಿ ಅವರ ಅನುಯಾಯಿ ಕೂಡ ಆಗಿದ್ದರು. ಶಾಸ್ತ್ರಿ ಈ ದೇಶ ಕಂಡ ಅಪ್ರತಿಮ ರಾಜಕಾರಣಿ ಎಂದು ಸಿಎಂ ಬಣ್ಣಿಸಿದರು.

ಕಾನೂನು ಸಚಿವ ಎಚ್.ಕೆ.ಪಾಟೀಲ್, ಅಮೆರಿಕಾದ ಪಬ್ಲಿಕ್ ಸೋರ್ಸ್‌ನ ಅಧ್ಯಕ್ಷ ಕಾರ್ಲ್ ಮಾಲಾಮುಡ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉಪಾಧ್ಯಕ್ಷ ಎನ್. ಆರ್.ವಿಶುಕುಮಾರ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ Oct 3, 2023

ಸರಳ ಬದುಕಿಗೆ ಗಾಂಧೀಜಿ ಆದರ್ಶ

ಬೆಂಗಳೂರು: ಅತಿ ಸರಳ ರೀತಿಯಲ್ಲಿ ಬದುಕಿ ಎಲ್ಲರಿಗೂ ಆದರ್ಶವಾದವರು ಮಹಾತ್ಮ ಗಾಂಧೀಜಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಹಲವು ಇಲಾಖೆ ಸಂಘ, ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿ ಅವರ ಜನ್ಮ ದಿನಾಚರಣೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು..

> ಯಾವುದೇ ಪ್ರಚಾರದ ಸಾಮಗ್ರಿ, ತಂತ್ರಜ್ಞಾನ ಇಲ್ಲದೆ ಕೇವಲ ಅಹಿಂಸೆ ಮತ್ತು ತಮ್ಮ ಬದುಕಿನ ಸರಳತೆಯಿಂದಲೇ ಮಹಾತ್ಮ ಗಾಂಧಿ ವಿಶ್ವದ ಮೂಲೆ ಮೂಲೆಗೆ ತಲುಪಿದರು. ದೇಶವಷ್ಟೇ ಅಲ್ಲ, ಪ್ರಪಂಚವೂ ಗಾಂಧಿಯವರ ತತ್ವ, ಆದರ್ಶ, ಮೌಲ್ಯಗಳನ್ನು ಇಂದಿಗೂ ಗೌರವ ಭಾವನೆಯಿಂದ ಕಾಣುತ್ತಾ ಬಂದಿದೆ. ಹಾಗಾಗಿ ದೇಶಕ್ಕೆ ಒಬ್ಬರೇ ಮಹಾತ್ಮ ಹಾಗೂ ಪಿತಾಮಹ ಎಂಬುದನ್ನು ನಾವು ಮರೆಯುವಂತಿಲ್ಲ.
>
> *ಸಿದ್ದರಾಮಯ್ಯ | ಮುಖ್ಯಮಂತ್ರಿ



ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿಯಲ್ಲಿ ಗಾಂಧೀಜಿಯವರ ಪುತ್ಥಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪ ನಮನ ಸಲ್ಲಿಸಿದರು. ಕಾನೂನು-ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಮತ್ತಿತರರಿದ್ದಾರೆ.

ದಕ್ಷಿಣ ಆಫ್ರಿಕಾಗೆ ವಕೀಲಿ ವೃತ್ತಿ ಮಾಡಲು ಹೋದ ಗಾಂಧೀಜಿ ಅಸಮಾನತೆ ವಿರುದ್ಧ ಹೋರಾಟ ಮಾಡಿ ಸೆರೆಮನೆ ವಾಸ ಅನುಭವಿಸಿದರು. ಬ್ರಿಟಿಷರಿಂದ ಭಾರತವನ್ನು ಬಿಡುಗಡೆಗೊಳಿಸುವ ಹೋರಾಟದ ನಾಯಕತ್ವವನ್ನು ವಹಿಸಿಕೊಳ್ಳಲು ಗಾಂಧೀಜಿ ಅವರನ್ನು ಗೋಪಾಲಕೃಷ್ಣ ಗೋಖಲೆ ಭಾರತಕ್ಕೆ ಕರೆಸಿಕೊಂಡರು. ಗೋಖಲೆ ಅಣತಿಯಂತೆ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡ ಗಾಂಧಿ, ಅಹಿಂಸಾ ಮಾರ್ಗದಲ್ಲಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸದೇ ಇದ್ದಿದ್ದರೆ ನಾವು ಬ್ರಿಟಿಷರ ಗುಲಾಮಗಿರಿಯಿಂದ ಹೊರಗೆ ಬರಲು ಸಾಧ್ಯವಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಅವರು ಗಾಂಧಿ ಕುರಿತ ಪುಸ್ತಕಗಳನ್ನು ಯುವ ಜನರಿಗೆ ಆನ್‌ಲೈನ್‌ನಲ್ಲಿ ಓದುವ ಅವಕಾಶ ಒದಗಿಸಿಕೊಡುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಜಾಲತಾಣಕ್ಕೆ ಚಾಲನೆ ನೀಡಿದರು. ಗಾಂಧೀಜಿ ಅವರಿಗೆ ಅವಮಾನ ಆಗುವಂತೆ ಪ್ರಚಾರ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ವಿಚಾರದಲ್ಲಿ ಸರ್ಕಾರ ಚಿಂತಿಸಲಿದೆ ಎಂದವರು ಹೇಳಿದರು. ಕಾರ್ಯಕ್ರಮದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಅಮೆರಿಕದ ಕಾರ್ಲ್ ಮಲಾಮಡ್, ನವದೆಹಲಿ ಲಾರೆನ್ಸ್ ಲಿಯಾಂಗ್ ಹಾಗೂ ಇತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಮಂಗಳವಾರ ● ಅಕ್ಟೋಬರ್ 3, 2023

ಪುಸ್ತಕಗಳ ಜಾಲತಾಣಕ್ಕೆ ಸಚಿವ ಎಚ್.ಕೆ. ಪಾಟೀಲ ಚಾಲನೆ

'ಅಹಿಂಸೆಯಿಂದ ವಿಶ್ವವ್ಯಾಪಿಸಿದ ಗಾಂಧೀಜಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳ ಜೀವನ, ಸತ್ಯ ಮತ್ತು ಅಹಿಂಸೆ ಮಾರ್ಗದ ಮೂಲಕ ವಿಶ್ವದ ಮೂಲೆ ಮೂಲೆ ತಲುಪಿದವರು ಮಹಾತ್ಮ ಗಾಂಧೀಜಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಗಾಂಧಿಭವನದಲ್ಲಿ ನಡೆದ ಗಾಂಧಿ ಜಯಂತಿ ಉದ್ಘಾಟಿಸಿ ಅವರು ಮಾತನಾಡಿ, 'ದೇಶಕ್ಕೆ ಗಾಂಧಿ ಒಬ್ಬರೇ ಮಹಾತ್ಮ ಮತ್ತು ಪಿತಾಮಹ. ಯಾವುದೇ ಪ್ರಚಾರದ ಸಾಮಗ್ರಿ,

> ಗಾಂಧೀಜಿ ಬಗ್ಗೆ ಜನರ ಮನಸ್ಸಲ್ಲಿ ಗೊಂದಲ ಹುಟ್ಟು ಹಾಕುವರ ಮತ್ತು ಅವರನ್ನು ಅವ ಮಾನಿಸುವವರ ವಿರುದ್ಧ ಕ್ರಮ ಜರುಗಿಸಲು ಸರ್ಕಾರ ಚಿಂತನೆ ನಡೆಸಿದೆ
>
> **ಎಚ್.ಕೆ. ಪಾಟೀಲ,** ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ

ತಂತ್ರಜ್ಞಾನ ಇಲ್ಲದೆಯೇ ಜನರ ಮನಸ್ಸುಗಳನ್ನು ಮುಟ್ಟಿದ್ದರು' ಎಂದು ನೆನಪು ಮಾಡಿಕೊಂಡರು.

ನುಡಿದಂತೆ ನಡೆದವರು ಗಾಂಧೀಜಿ. ಅವರ ದಾರಿಯಲ್ಲಿ ಸ್ವಲ್ಪವಾದರೂ ನಾವು ಸಾಗಲು ಪ್ರಯತ್ನಿಸಬೇಕು. ಅದೇ ಗಾಂಧೀಜಿಗೆ ಸಲ್ಲಿಸುವ ಗೌರವ ಎಂದರು.

ಗಾಂಧಿ ಭವನದಲ್ಲಿ ಇರುವ ಗಾಂಧಿ ಕುರಿತ ಪುಸ್ತಕಗಳನ್ನು ಯುವ ಜನರಿಗೆ ಆನ್‌ಲೈನ್‌ನಲ್ಲಿ ಓದುವ ಅವಕಾಶ ಒದಗಿಸಿಕೊಡುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಜಾಲತಾಣಕ್ಕೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಚಾಲನೆ ನೀಡಿದರು.

ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಂ ಮುರಿಗೆಪ್ಪ ಅವರ 'ಅಹಿಂಸಾ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ' ಕೃತಿಗೆ ಜಯಲಕ್ಷ್ಮಿ ಶ್ರೀನಿವಾಸಯ್ಯ ದತ್ತಿ ಸಾಹಿತ್ಯ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಸ್ವಾತಂತ್ರ್ಯ ಹೋರಾಟಗಾರರಾದ ಕೆ.ಸಿ. ನಾರಾಯಣಪ್ಪ, ಎಸ್.ವಿ.ಟಿ. ಗುಪ್ತ, ಎಚ್.ಎಸ್. ಹನುಮಂತರಾವ್ ಮತ್ತು ರಘುನಾಥ್ ರಾವ್ ಎನ್. ಅವರುಗಳನ್ನು ಸನ್ಮಾನಿಸಲಾಯಿತು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಜಯವಾಣಿ ನಂ 1 ಮಂಗಳವಾರ, ಅಕ್ಟೋಬರ್ 3, 2023

ರಾಷ್ಟ್ರಪಿತ ಕಂಡ ಕನಸು ಇನ್ನೂ ಸಾಕಾರವಾಗಿಲ್ಲ

ಬೆಂಗಳೂರು: ಮಹಾತ್ಮ ಗಾಂಧಿ ಅವರು ದೇಶದ ಬಗ್ಗೆ ಕಂಡಿದ್ದ ಕನಸು ಇಂದಿಗೂ ಸಾಕಾರವಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ಗಾಂಧಿ ಭವನದಲ್ಲಿ ಸೋಮವಾರ ಹಲವು ಇಲಾಖೆಗಳ ಸಹಯೋಗದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

» **ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ**

ಹಳ್ಳಿಗಳ ಸ್ವಾವಲಂಬನೆ, ಉದ್ಧಾರಕ್ಕೆ ಸರಳ ಆರ್ಥಿಕ ನೀತಿಯನ್ನು ಗಾಂಧಿ ತಿಳಿಸಿಕೊಟ್ಟಿದ್ದರು. ಆದರೆ, ಆ ದಾರಿಯಲ್ಲಿ ನಡೆಯುವ ಪ್ರಯತ್ನ ಸಂಪೂರ್ಣವಾಗಿ ಸಾಧ್ಯವಾಗಿಲ್ಲ ಎಂಬ ಸತ್ಯವನ್ನು ಹೇಳಲೇಬೇಕಿದೆ ಎಂದರು.

ಗಾಂಧಿ ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಅವರನ್ನು ಗೌರವಿಸಬೇಕಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಗಾಂಧಿ ಅವರ ಚಿಂತನೆಗಳ ಮೇಲೆ ಯೋಜನೆಗಳನ್ನು ರೂಪಿಸಿದೆ ಎಂದು ಹೇಳಿದರು.

ಸ್ವಾತಂತ್ರ್ಯಪೂರ್ವದಲ್ಲಿ ಇಂದಿನಷ್ಟು ಪ್ರಚಾರದ ತಂತ್ರಜ್ಞಾನ ಅಭಿವೃದ್ಧಿಯಾಗಿರಲಿಲ್ಲ. ಆದರೂ ಗಾಂಧಿ ಅವರು ಮಾತನಾಡಿದರೆ ಇಡೀ ದೇಶದ ಮೂಲೆ ಮೂಲೆಗೆ ತಲುಪುತ್ತಿತ್ತು. ಈ ಕಾರಣದಿಂದಲೇ ನೆಹರು ಅವರು 'ಗಾಂಧೀಜಿ ಎಲ್ಲಿರುತ್ತಾರೋ ಅದೇ ದೇವಾಲಯ, ತಿರುಗಾಡುವ ಸ್ಥಳವೇ ಪುಣ್ಯಭೂಮಿ' ಎಂದು ಬಣ್ಣಿಸಿದ್ದರು ಎಂದು ಸಿದ್ದರಾಮಯ್ಯ ತಿಳಿಸಿದರು. ಕಾನೂನು ಸಚಿವ ಎಚ್.ಕೆ. ಪಾಟೀಲ್ ಇತರ ಗಣ್ಯರಿದ್ದರು.



ಗಾಂಧಿ ಭವನದಲ್ಲಿ ಗಾಂಧಿ ಪ್ರತಿಮೆಗೆ ಸಿಎಂ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು. ಸಚಿವ ಎಚ್.ಕೆ. ಪಾಟೀಲ್, ಶಿಕ್ಷಣತಜ್ಞ ಡಾ.ವೂಡೇ ಪಿ. ಕೃಷ್ಣ ಇತರರಿದ್ದರು.

> ಲಾಲ್ ಬಹದ್ದೂರ್ ಶಾಸ್ತ್ರಿ ಕೂಡ ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀಜಿ ಅನುಯಾಯಿ, ದೇಶ ಕಂಡ ಪ್ರಾಮಾಣಿಕ ರಾಜಕಾರಣಿ. ಅವರು ಬಿಟ್ಟು ಹೋಗಿರುವ ಮೌಲ್ಯವನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡಿದರೆ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ.
>
> | ಸಿದ್ದರಾಮಯ್ಯ ಮುಖ್ಯಮಂತ್ರಿ

ಅವಹೇಳನಕಾರರ ವಿರುದ್ಧ ಕ್ರಮಕ್ಕೆ ಒತ್ತಾಯ

ಗಾಂಧಿ ಕುರಿತು ಸಾಮಾಜಿಕ ತಾಣಗಳಲ್ಲಿ ಕೆಲವು ಕುತಂತ್ರಿಗಳು ಅವಹೇಳನ ಮಾಡುತ್ತಿದ್ದಾರೆ. ಇಂತಹವರ ಮೇಲೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಸರ್ಕಾರವನ್ನು ಒತ್ತಾಯಿಸಿದರು. ಹಿಂದಿನ ಬಾರಿ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದ ಅವಧಿಯಲ್ಲಿ ನೀಡಿದ್ದ ಭರವಸೆಯಂತೆ ಪ್ರತಿ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಕಾರ್ಯ ನಡೆಯುತ್ತಿದೆ. ಸದ್ಯ 24 ಜಿಲ್ಲೆಗಳಲ್ಲಿ ಪೂರ್ಣಗೊಂಡಿದ್ದು, ಉಳಿದ 7 ಜಿಲ್ಲೆಗಳಲ್ಲಿ ಭವನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಮನವಿ ಮಾಡಿದರು.

ಕನ್ನಡಪ್ರಭ ಮಂಗಳವಾರ 3.10.2023

ಗಾಂಧೀಜಿ ಚಿಂತನೆಯಂತೆ ನಮ್ಮ ಸರ್ಕಾರ: ಸಿಎಂ

ಸರಳ ಆರ್ಥಿಕ ನೀತಿ ರೂಪಿಸಿದ್ದ ಗಾಂಧೀಜಿ | ಸರ್ಕಾರದಿಂದ ಆಯೋಜಿಸಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಹೇಳಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಹಾತ್ಮಗಾಂಧೀಜಿಅವರಚಿಂತನೆಗಳನ್ನು ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಿದೆ. ಆ ಮೂಲಕ ಮಹಾತ್ಮ ಗಾಂಧಿ ಅವರ ಚಿಂತನೆಗಳಿಗೆ ಗೌರವ ನೀಡುವ ಕೆಲಸ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗಾಂಧಿ ಸ್ಮಾರಕ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆ, ಸಂಸ್ಥೆಗಳ ಸಹಯೋಗದಲ್ಲಿ ಸೋಮವಾರ ಗಾಂಧಿ ಭವನದಲ್ಲಿ ಏರ್ಪಡಿಸಲಾಗಿದ್ದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಾತ್ಮ ಗಾಂಧಿ ಅವರು ಹಳ್ಳಿಗಳ ಅಭಿವೃದ್ಧಿಯಿಂದಷ್ಟೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಬಲವಾಗಿ ನಂಬಿದ್ದರು. ಅದಕ್ಕಾಗಿಯೇ ದೇಶಕ್ಕಾಗಿ ಸರಳ ಆರ್ಥಿಕ ನೀತಿಯನ್ನು ಅವರು ಪ್ರತಿಪಾದಿಸಿ, ಹಳ್ಳಿಗಳ ಬೆಳವಣಿಗೆ ಬಗ್ಗೆ ತಿಳಿಸಿದ್ದರು. ಮಹಾತ್ಮ ಗಾಂಧೀಜಿ ಅವರು ಹಾಕಿಕೊಟ್ಟ ಮಾರ್ಗ ಹಾಗೂ ಅವರ ಚಿಂತನೆಯಂತೆ ಈಗ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ. ರಾಜ್ಯದ ಎಲ್ಲ ವಲಯ, ಪ್ರದೇಶ ಅಭಿವೃದ್ಧಿ ಆಗುವಂತಹ ಕಾರ್ಯವನ್ನು ಮಾಡುತ್ತಿದೆ. ಸರ್ಕಾರದ ಕಾರ್ಯಕ್ರಮಗಳು ಗಾಂಧೀಜಿ ಅವರ ಚಿಂತನೆಯಂತೆಯೇ ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ಆ ಮೂಲಕ ಮಹಾತ್ಮ ಗಾಂಧಿಗೆ ಗೌರವ ಸೂಚಿಸಲಾಗುತ್ತಿದೆ ಎಂದರು.




ನಗರದ ಗಾಂಧಿಭವನದಲ್ಲಿ ನಡೆದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಈ ವೇಳೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಇದ್ದರು.

ಗಾಂಧೀಜಿ ಅವರ ಜೀವನಶೈಲಿ, ಚಿಂತನೆಗಳಿಂದಾಗಿ ರವೀಂದ್ರನಾಥ ಠಾಗೋರ್ ಅವರು ಗಾಂಧಿ ಅವರನ್ನು ಮಹಾತ್ಮ ಎಂದು ಕರೆದರೆ, ಸುಭಾಷಚಂದ್ರ ಬೋಸ್ ಅವರು ರಾಷ್ಟ್ರಪಿತ ಎಂದು ಸಂಬೋಧಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಲೂ ಅದನ್ನು ಸಂಭ್ರಮಿಸದೆ ದೇಶ ವಿಭಜನೆಯಿಂದ ಉಂಟಾದ ಸಮಸ್ಯೆಗಳನ್ನು ನಿವಾರಿಸುವಲ್ಲಿ ಗಾಂಧೀಜಿ ಮಗ್ನರಾಗಿದ್ದರು. ಹೀಗಾಗಿ ದೇಶಕ್ಕೆ ಗಾಂಧಿ ಮಾತ್ರ ಮಹಾತ್ಮ, ರಾಷ್ಟ್ರಪಿತ ಎಂಬುದನ್ನು ಎಲ್ಲರೂ ತಿಳಿಯಬೇಕು. ಗಾಂಧೀಜಿ ಅವರು ಬದುಕಿದ ರೀತಿಯಲ್ಲಿ ಬದುಕಲು ಸಾಧ್ಯವಾಗದಿದ್ದರೂ, ಅವರ ಚಿಂತನೆ, ಹಾಕಿಕೊಟ್ಟ ದಾರಿಯಲ್ಲಿ ಸಾಗುವಂತಹ ಪ್ರಯತ್ನ ನಾವೆಲ್ಲರೂ ಮಾಡಬೇಕು. ಆಮೂಲಕ ಅವರಿಗೆ ಗೌರವ ನೀಡಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಹೇಳಿದರು.

ಗಾಂಧೀಜಿ ಅವರಂತೆ ದೇಶ ಕಂಡ ಮತ್ತೊಬ್ಬ ಸರಳ ವ್ಯಕ್ತಿತ್ವ ಎಂದರೆ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರದ್ದು. ದೇಶ ಕಂಡ ಅತ್ಯಂತ ಪ್ರಾಮಾಣಿಕ ರಾಜಕಾರಣಿ. ಅವರು ಬಿಟ್ಟು ಹೋಗಿರುವ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಆಮೂಲಕ ದೇಶದಲ್ಲಿ ಪ್ರಾಮಾಣಿಕತೆ ನೆಲೆ ನಿಲ್ಲುವಂತೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ದೇಶಕ್ಕೆ ತಮ್ಮ ಜೀವನವನ್ನೇ ತ್ಯಾಗ ಮಾಡಿದ ಮಹಾತ್ಮ ಗಾಂಧೀಜಿ ಅವರ ಮಹತ್ವವನ್ನು ನಾವೆಲ್ಲರೂ ಅರಿಯಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಮಹಾತ್ಮ ಗಾಂಧಿ ಕುರಿತಂತೆ ತಪ್ಪು ಮಾಹಿತಿ ಹರಡುತ್ತಾ, ಅವರಿಗೆ ಅವಹೇಳನ ಮಾಡಲಾಗುತ್ತಿದೆ. ಗಾಂಧಿ ಅವರಿಗೆ ಅಪಮಾನ ಮಾಡುವ ಕುತಂತ್ರಿಗಳನ್ನು ಪತ್ತೆ ಶಿಕ್ಷಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದರು.


ಕಾರ್ಯಕ್ರಮದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷ ವಿಶುಕುಮಾರ್ ಸೇರಿದಂತೆ ಇತರರಿದ್ದರು.



ಗಾಂಧಿ ಸಂಚಯ

https://gandhi.sanchaya.net


ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರಕಟಣೆಯ ಪುಸ್ತಕಗಳು
ಈಗ ಮುಕ್ತ ಓದಿಗೆ ಲಭ್ಯ.



ಗಾಂಧಿ ವಿಚಾರಧಾರೆಯ ಪ್ರಸರಣೆಗೆ
ಡಿಜಿಟಲ್ ಸ್ಪರ್ಶ ನೀಡುವತ್ತ ಒಂದು ಹೆಜ್ಜೆ

#SERVANTSOFKNOWLEDG
SCANNING IS THE NEW SPINNING

ಈಗ ಇ-ಪುಸ್ತಕ
ರೂಪದಲ್ಲೂ ಲಭ್ಯ



ಬಾಪು ಪ್ರಪಂಚ (ಕನ್ನಡ-ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026

Available on
Google Play Books
iBooks

Is Collaborated by
TECH FIZ INC
Pustaka ink & weave

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58